

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43


ಅಕ್ಟೋಬರ್ 1 ಶನಿವಾರ 2022

ಸಂಪುಟ: 43 | ಸಂಚಿಕೆ: 166 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ರಾಜ್ಯದಲ್ಲಿ ರಾಹುಲ್ ಗಾಂಧಿ ಭಾರತ ಐಕ್ಯತಾ ಯಾತ್ರೆ ಆರಂಭ

ಸಾವಿರಾರು ಮಂದಿ ಸಾಥ್

- ಕೇರಳದಿಂದ ರಾಜ್ಯ ಪ್ರವೇಶಿಸಿದ ಯಾತ್ರೆಗೆ ಬಂಡೀಪುರ ಗಡಿಯಲ್ಲಿ ಸ್ವಾಗತ
- ಹಾದಿಯುದ್ದಕ್ಕೂ ಭಾರೀ ಆತಿಥ್ಯ
- ರಾರಾಜಿಸುತ್ತಿರುವ ಫ್ಲೆಕ್ಸ್, ಬ್ಯಾನರ್, ಮೊಳಗುತ್ತಿರುವ ಘೋಷಣೆಗಳು
- ಹಾರಾಡಿದ ಪೇಸಿಎಂ ಧ್ವಜ



ಗುಂಡ್ಲುಪೇಟೆಯಿಂದ ಶುಕ್ರವಾರ ಕರ್ನಾಟಕದಲ್ಲಿ ಆರಂಭವಾದ ರಾಹುಲ್ ಗಾಂಧಿಯವರ ಭಾರತ ಐಕ್ಯತಾ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ.

ಸಿದ್ದಲಿಂಗಸ್ವಾಮಿ/ಸೋಮ್ ಜಿ.

ಗುಂಡ್ಲುಪೇಟೆ, ಸೆ.30–ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್‌ಗಾಂಧಿ ನೇತೃತ್ವದ ಭಾರತ ಐಕ್ಯತಾ ಯಾತ್ರೆ ಗುಂಡ್ಲುಪೇಟೆಯಿಂದ ಶುಕ್ರವಾರ ಬೆಳಗ್ಗೆ ರಾಜ್ಯದಲ್ಲಿ ಆರಂಭವಾಗಿದ್ದು, ಈ ಯಾತ್ರೆಯಲ್ಲಿ ಸಾವಿರಾರು ಮಂದಿ ಭಾಗವಹಿಸುವ ಮೂಲಕ ಅಭೂತಪೂರ್ವ ಬೆಂಬಲ ನೀಡಿದ್ದಾರೆ.

ಗುಂಡ್ಲುಪೇಟೆಯ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂಭಾಗವಿರುವ ಮೈದಾನದಲ್ಲಿ ಬಹಿರಂಗ ಸಭೆ ನಡೆಸಿದ ನಂತರ ಬೆಳಗ್ಗೆ 10.30ರಲ್ಲಿ ಆರಂಭವಾದ ಯಾತ್ರೆ, ಊಟಿ–ಮೈಸೂರು ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿತು. ರಾಹುಲ್ ಗಾಂಧಿಯವರ ಜೊತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಶಾಸಕರಾದ ಕೃಷ್ಣ ಭೈರೇಗೌಡ, ▶ 7ನೇ ಪುಟಕ್ಕೆ

ಸಂವಿಧಾನ ಪೀಠಿಕೆ ಪ್ರತಿ ನೀಡಿದ ಸಾಹಿತಿ ದೇವ



ಗುಂಡ್ಲುಪೇಟೆ: ಭಾರತ ಐಕ್ಯತಾ ಯಾತ್ರೆ ಬಹಿರಂಗ ಸಭೆ ವೇದಿಕೆಯಲ್ಲಿ ಹಿರಿಯ ಸಾಹಿತಿ ದೇವನೂರು ಮಹದೇವ, ರೈತ ಪರ ಚಿಂತಕ ಯೋಗೇಂದ್ರ ಯಾದವ್, ರೈತ ಸಂಘದ ನಾಯಕ ಚಾಮರಸಮಾಲಿ ಪಾಟೀಲ್ ರಾಹುಲ್ ಗಾಂಧಿಯವರಿಗೆ ದೇವನೂರು ಮಹಾ ದೇವ ಅವರು ಬರೆದಿರುವ 'ಆರ್‌ಎಸ್‌ಎಸ್ ಆಳ–ಅಗಲ' ಇಂಗ್ಲೀಷ್ ಅನುವಾದಿತ ಪುಸ್ತಕ ಮತ್ತು ಸಂವಿಧಾನದ ಪೀಠಿಕೆ ಪ್ರತಿ ನೀಡಿದರು.

ನಮ್ಮ ವಿಚಾರವನ್ನು ಜನರಿಗೆ ತಲುಪಿಸಲು ಉಳಿದಿರುವ ಏಕೈಕ ಮಾರ್ಗ ಭಾರತ್ ಐಕ್ಯತಾ ಯಾತ್ರೆ ▶ ಪುಟ–7

ದೇಶದಲ್ಲಿ ದ್ವೇಷ ರಾಜಕಾರಣ ಮಿತಿಮೀರಿದೆ: ವಿಪಕ್ಷ ನಾಯಕ ಸಿದ್ದರಾಮಯ್ಯ ▶ ಪುಟ–7







ಇಂದು, ನಾಳೆ ಹೆಬ್ಬಾಳು ದಸರಾ ಉತ್ಸವ

ವಿವಿಧ ಸ್ಪರ್ಧೆಗಳು, ನವಭಾರತ ನಿರ್ಮಾಣ ಸಂಕಲ್ಪಿತ ಸೈಕಲ್ ಜಾಥಾ, ಸಂಗೀತ ರಸದೌತಣ

ಮೈಸೂರು, ಸೆ.30– ಮೈಸೂರು ನಗರ ಪಾಲಿಕೆ ಸದಸ್ಯರೂ ಆದ ಪರಿಸರ ಪ್ರೇಮಿ ಹಾಗೂ ಜೆಡಿಎಸ್ ನಾಯಕ ಕೆ.ವಿ.ಶ್ರೀಧರ್ ನೇತೃತ್ವದ ನವಭಾರತ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಇದೇ ಪ್ರಥಮ ಬಾರಿಗೆ ಹೆಬ್ಬಾಳು ದಸರಾ ಉತ್ಸವ ಆಚರಿಸಲಾಗುತ್ತಿದೆ.

ಹೆಬ್ಬಾಳು ಐತಿಹಾಸಿಕ ಹಿನ್ನೆಲೆಯುಳ್ಳಂತಹ ಗ್ರಾಮ. ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮರಸ್ಯ ದೃಷ್ಟಿಯಿಂದಲೂ ಹೆಬ್ಬಾಳು ಗ್ರಾಮಕ್ಕೆ ಮಹತ್ವದ ಸ್ಥಾನವಿದೆ. ಕುಂಬಾರಕೊಪ್ಪಲು, ಲಕ್ಷ್ಮೀಕಾಂತನಗರ, ಮಂಚೇಗೌಡನಕೊಪ್ಪಲು, ಲೋಕನಾಯಕನಗರ, ಮೇಟಗಳ್ಳಿ ಹಾಗೂ ಆಧುನಿಕ ವಿಜಯನಗರದ ಭಾಗಶಃ ಭೂ ಪ್ರದೇಶ ಹೆಬ್ಬಾಳು ವ್ಯಾಪ್ತಿಗೆ ಬರಲಿದೆ. ಅದನ್ನು ಹಿನ್ನೆಲೆಯಾಗಿಸಿಕೊಂಡು ನಾಳೆ (ಶನಿವಾರ) ಮತ್ತು ನಾಡಿದ್ದು (ಭಾನುವಾರ) ವಿಜಯನಗರ ರೈಲ್ವೆ ಬಡಾವಣೆ ಮೈದಾನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.



"ಈ ಭಾಗದ ಊರು–ಕೇರಿ, ಬಡಾವಣೆಗಳ ಹೆಸರು ಬೇರೆಯಾದರೂ ಇವೆಲ್ಲವೂ ಐತಿಹಾಸಿಕ ಹೆಬ್ಬಾಳು ಗ್ರಾಮದ ಒಡಲಲ್ಲೇ ಬರುತ್ತವೆ. ಸಹಜವಾಗಿಯೇ ಈ ಭಾಗದ ಜನರಲ್ಲಿ 'ಇದು ನಮ್ಮೂರು' ಎಂಬ ಭಾವನೆ ಗಾಢವಾಗಿ ಆವರಿಸಿದೆ. ಸಹಜವಾಗಿಯೇ ಸಾಮರಸ್ಯ ನೆಲೆಗೊಂಡಿದೆ. ಮೂಲತಃ ನಾನು ಇಲ್ಲಿಯವನೇ ಆಗಿರುವುದರಿಂದ ಎಲ್ಲರನ್ನೂ ಒಟ್ಟಾಗಿಸಿ ಬಾಂಧವ್ಯ ಬೆಸೆಯುವ, ಸಂಭ್ರಮಿಸುವ ಮಹದುದ್ದೇಶದೊಂದಿಗೆ ಈ ಕಾರ್ಯಕ್ರಮ ಮಾಡುತ್ತಿದ್ದೇವೆ.
–ಕೆ.ವಿ.ಶ್ರೀಧರ್

ನಾಳೆ ಕಾರ್ಯಕ್ರಮ ಉದ್ಘಾಟನೆಯಾಗಲಿದ್ದು, ಮ್ಯೂಸಿಕಲ್ ಚೇರ್, ಹಗ್ಗ ಜಗ್ಗಾಟ, ಓಟ, ಮಕ್ಕಳ ಫ್ಯಾನ್ಸಿ ಡ್ರೆಸ್, ರಾಗಿಮುದ್ದೆ ಊಟ, ಗುಂಡು ಎಸೆತ, ಮಡಕೆ ಒಡೆಯುವುದು, ರಂಗೋಲಿ, ಏಕಪಾತ್ರಾಭಿನಯ ಹೀಗೆ ನಾನಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಅ.2ರಂದು ಮನೆ ಮನೆ ಗೊಂಬೆ, ಬೆಂಕಿರಹಿತ ಅಡುಗೆ, ಚಿತ್ರಕಲೆ, ಸ್ಲೋ ಸೈಕಲ್ ರೇಸ್, ಲೆಮನ್ ಅಂಡ್ ಸ್ಪೂನ್, ಗಾಯನ, ನೃತ್ಯ ಹೀಗೆ ಮಹಿಳೆಯರು, ಮಕ್ಕಳು ಹಾಗೂ ಪುರುಷರಿಗೆ ಪ್ರತ್ಯೇಕ ನಾನಾ ಸ್ಪರ್ಧೆಗಳಿರುತ್ತವೆ. ಗಾಂಧಿ ಜಯಂತಿ ಹಾಗೂ ದಸರಾ ಪ್ರಯುಕ್ತ ಅ.2ರಂದು ಬೆಳಿಗ್ಗೆ 7 ಗಂಟೆಗೆ ಭ್ರಷ್ಟಮುಕ್ತ ಮತದಾನ ಹಾಗೂ ಪರಿಸರ ಉಳಿವಿಗಾಗಿ



ನವಭಾರತ ಕಟ್ಟೋಣ ಸಂಕಲ್ಪ ಯಾತ್ರೆಯಾಗಿ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ. ಈ ಜಾಥಾವು ವಿಜಯನಗರ ರೈಲ್ವೆ ಲೇಔಟ್ ಮೈದಾನದಿಂದ ಆರಂಭವಾಗಿ ಚಂದ್ರಕಲಾ ಆಸ್ಪತ್ರೆ, ಆದಿಪಂಪ ರಸ್ತೆ, ಚೆಲುವಾಂಬ ಪಾರ್ಕ್, ದಾಸಪ್ಪ ಸರ್ಕಲ್, ರೈಲ್ವೆ ನಿಲ್ದಾಣ, ಕೆ.ಆರ್.ಆಸ್ಪತ್ರೆ, ಅಶೋಕ ರಸ್ತೆ, ದೊಡ್ಡ ಗಡಿಯಾರ, ಮೈಸೂರು ಅರಮನೆ, ಡಿಸಿ ಕಚೇರಿ, ಕ್ರಾಫರ್ಡ್ ಭವನ, ಕುಕ್ಕರಹಳ್ಳಿ ಕೆರೆ, ಕಲಾಭವನ, ಕಾಳಿದಾಸ ರಸ್ತೆ ಮೂಲಕ ಪುನಃ ವಿಜಯನಗರ ರೈಲ್ವೆ ಬಡಾವಣೆ ಮೈದಾನದಲ್ಲಿ ಅಂತ್ಯಗೊಳ್ಳಲಿದೆ. ಅ.2ರ ಸಂಜೆ 6 ಗಂಟೆಗೆ ಖ್ಯಾತ ಗಾಯಕಿ, ರ್‍ಯಾಪರ್, ನಟ ಅಲೋಕ್ ಆರ್. ಬಾಬು ಅವರಿಂದ ಸಂಗೀತ ಸಂಜೆ ಏರ್ಪಡಿಸಲಾಗಿದೆ.

ಕೆಆರ್‌ಎಸ್ ಹಿನ್ನೀರಲ್ಲಿ ಜಲ ಸಾಹಸ ಕ್ರೀಡೆಗೆ ಶಾಸಕ ಜಿಟಿಡಿ ಚಾಲನೆ



ಮೈಸೂರು, ಸೆ. 30(ಆರ್‌ಕೆ)– ದಸರಾ ಕ್ರೀಡಾ ಉಪ ಸಮಿತಿಯಿಂದ ಉಂಡುವಾಡಿ ಬಳಿ ಕೆಆರ್‌ಎಸ್ ಹಿನ್ನೀರಲ್ಲಿ ಇಂದಿನಿಂದ ಆರಂಭವಾದ ಜಲ ಸಾಹಸ ಕ್ರೀಡೆಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು.

ಕಾವೇರಿಗೆ ಪೂಜೆ ಸಲ್ಲಿಸಿ, ಬಾಗಿನ ಸಮರ್ಪಿಸಿದ ನಂತರ ಬ್ಯಾಟರಿ ಚಾಲಿತ ದೋಣಿಯಲ್ಲಿ ವಿಹರಿಸಿದ ಶಾಸಕರು, ಸಾಹಸ ಕ್ರೀಡೆ ಯಶಸ್ವಿಯಾಗಲೆಂದು ಶುಭ ಕೋರಿದರು. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ ಆಯೋಜಿಸಿರುವ ಜಲಸಾಹಸ ಕ್ರೀಡೆಯಲ್ಲಿ ರ್‍ಯಾಫ್ಟಿಂಗ್, ಜೆಟ್‌ಸ್ಕಿ, ಸ್ಪೀಡ್ ಬೋಟ್, ಬನಾನ ರೈಡ್, ಬಂಪರ್ ರೈಡ್, ಕಯಾಕಿಂಗ್ ಹಾಗೂ ಸೇಲಿಂಗ್ ಕ್ರೀಡೆಗಳು ನಡೆಯಲಿವೆ.

ಅ.6ರವರೆಗೆ ನಡೆಯಲಿರುವ ಕ್ರೀಡೆಯಲ್ಲಿ ಭಾಗವಹಿಸುವವರಿಗೆ ವಿವಿಧ ಕ್ರೀಡೆಗಳಿಗೆ ವಿವಿಧ ರೀತಿಯ ಪ್ರವೇಶ ದರ ನಿಗದಿಪಡಿಸಲಾಗಿದೆ. ಕ್ರೀಡಾ ಉಪಸಮಿತಿ ವಿಶೇಷಾಧಿಕಾರಿಯಾದ ಎಸ್ಪಿ ಆರ್.ಚೇತನ್, ಅಧ್ಯಕ್ಷ ಕುಮರವಳ್ಳಿ ಸುಬ್ಬಣ್ಣ, ಉಪಾಧ್ಯಕ್ಷ ಶಿವರಾಜ್, ನಾಗಣ್ಣೇಗೌಡ, ಸದಸ್ಯರಾದ ಜಗದೀಶ್, ಚೇತನ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಭಾರತ ಐಕ್ಯತಾ ಯಾತ್ರೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಧ್ಯೆ ತೋಡೋ ಯಾತ್ರೆ ಆಗಲಿದೆ

ಕೃಷಿ ಸಚಿವ ಬಿ.ಸಿ.ಪಾಟೀಲ್ ವ್ಯಂಗ್ಯ



ಮೈಸೂರು,ಸೆ.30(ಪಿಎಂ)– ಭಾರತ ಐಕ್ಯತಾ ಯಾತ್ರೆಯು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಧ್ಯೆ ತೋಡೋ ಯಾತ್ರೆ ಆಗಲಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಟೀಕಿಸಿದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಎದುರು ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಅದು ಭಾರತ್ ಜೋಡೋ ಯಾತ್ರೆಯಲ್ಲ. ಬದಲಿಗೆ ಭಾರತ್ ತೋಡೋ ಯಾತ್ರೆ ಇಂದು ಭಾರತೀಯ ಸಮಾಜ ಒಡೆದು ಹೋಗಿಲ್ಲ. ಈ ಹಿಂದೆ ಇವರು ಅಧಿಕಾರದಲ್ಲಿದ್ದಾಗ ಒಡೆದಿತ್ತು. ಅದನ್ನು ಪ್ರಧಾನಿ ನರೇಂದ್ರ ಮೋದಿಯವರು ಬಂದು ಜೋಡಿಸಿದ್ದಾರೆ. ಕಾಂಗ್ರೆಸ್ ಜೀವಂತವಾಗಿದೆ ಎಂದು ತೋರಿಸಿಕೊಳ್ಳಲು ಈ ಯಾತ್ರೆ ಮಾಡುತ್ತಿದ್ದಾರೆ ಎಂದರು. ಈ ಪಾದಯಾತ್ರೆಯಿಂದ ಕಾಂಗ್ರೆಸ್ ಸಂಪೂರ್ಣ ನೆಲಕ್ಕಚ್ಚಲಿದೆ. ಈ ಯಾತ್ರೆ ಬಗ್ಗೆ ಬಿಜೆಪಿಗೆ ಯಾವ ಭಯವೂ ಇಲ್ಲ. 2023ಕ್ಕೆ ರಾಜ್ಯದಲ್ಲಿ ಹಾಗೂ 2024ಕ್ಕೆ ದೇಶದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರು.

ಆರ್‌ಎಸ್‌ಎಸ್ ಬಿಜೆಪಿ ಪಾಪದ ಕೂಸು ಎಂಬ ಸಿದ್ದರಾಮಯ್ಯ ಟೀಕೆಗೆ ಪ್ರತಿಕ್ರಿಯಿಸಿ, ಆರ್‌ಎಸ್‌ಎಸ್ ದೇಶಭಕ್ತಿ ಬೆಳೆಸುವ ಒಂದು ಸಂಘಟನೆ. ಪಿಎಫ್‌ಐ ರೀತಿಯಲ್ಲಿ ರಾಷ್ಟ್ರದೊಳಗೇ ಇದ್ದುಕೊಂಡು ರಾಷ್ಟ್ರ ದ್ರೋಹದ ಕೆಲಸ ಮಾಡಿಲ್ಲ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ನಕಲಿ ಬೀಜ–ಗೊಬ್ಬರ ಹಾಗೂ ಕೃತಕ ಅಭಾವ ಸೃಷ್ಟಿ ಸಂಬಂಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಕೃತಕ ಅಭಾವ ಸೃಷ್ಟಿ ಮಾಡಿ ಕಾಳ ಸಂತೆಯಲ್ಲಿ ಮಾರಾಟ ಮಾಡುವವರನ್ನು ಮಟ್ಟ ಹಾಕಿದ್ದೇವೆ. ಸುಮಾರು 28 ಕೋಟಿ ಮೊತ್ತದ ನಕಲಿ ಗೊಬ್ಬರ–ಬೀಜ ವಶಕ್ಕೆ ಪಡೆದು, ಈ ಸಂಬಂಧ 148 ಪರವಾನಗಿ ರದ್ದುಪಡಿಸಿದ್ದೇವೆ. ಸಮರ್ಥವಾಗಿ ಗೊಬ್ಬರ ಪೂರೈಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಗೋಲ್ಡ್ ಪಾಸ್ ಮತ್ತೊಬ್ಬರಿಗೆ ವರ್ಗಾಯಿಸಿದರೆ ಎಫ್‌ಐಆರ್



ಮೈಸೂರು,ಸೆ.30(ಪಿಎಂ)– ದಸರಾ ಗೋಲ್ಡ್ ಪಾಸ್ ಅನ್ನು ಮತ್ತೊಬ್ಬರಿಗೆ ವರ್ಗಾಯಿಸುವಂತಿಲ್ಲ. ಒಂದು ವೇಳೆ ವರ್ಗಾಯಿಸಿದ್ದು ಗೊತ್ತಾದರೆ ಕೂಡಲೇ ಸಂಬಂಧಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಲು ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 500 ಆನ್‌ಲೈನ್ ಮತ್ತು 500 ಆಫ್‌ಲೈನ್‌ನಲ್ಲಿ ಪಾಸ್ ಖರೀದಿಸಲು ಸಾವಿರ ಗೋಲ್ಡ್ ಪಾಸ್ ಬಿಡುಗಡೆ ಮಾಡಲಾಗಿತ್ತು ಯಾವುದೋ ಒಂದು ಏಜೆನ್ಸಿಯವರು ಒಬ್ಬರಿಗೆ ಸಾಕಷ್ಟು ಪಾಸ್ ನೀಡಿದ್ದಾರೆ ಎನ್ನಲಾಗುತ್ತಿದೆ. ಆದರೆ ಆ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ. ನಿಯಮ ಉಲ್ಲಂಘಿಸಿರುವುದು ಕಂಡು ಬಂದರೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದರು.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ಕೃಪಾ ಪೋಷಿತ ನಾಟಕ ಮಂಡಳಿ ವತಿಯಿಂದ ದಸರಾ ಮಹೋತ್ಸವ ಅಂಗವಾಗಿ ಪುರಭವನದಲ್ಲಿ ಆಯೋಜಿಸಿದ್ದ ದಕ್ಷಯಜ್ಞ ಪೌರಾಣಿಕ ನಾಟಕದಲ್ಲಿ ದಕ್ಷ ಬ್ರಹ್ಮನ ಪಾತ್ರದಲ್ಲಿ ಹುಯಿಲಾಳು ರಾಮಸ್ವಾಮಿ, ಚಂದ್ರಮ್ಮನ ಪಾತ್ರದಲ್ಲಿ ಸಿದ್ಧಾರ್ಥ, ರೋಹಿಣಿ ಪಾತ್ರದಲ್ಲಿ ದೀಪಿಕಾ, ಪುಷ್ಯವತಿ ಪಾತ್ರದಲ್ಲಿ ರೂಪ, ರೇವತಿ ಪಾತ್ರದಲ್ಲಿ ಸವಿತಾ ಮನೋಜ್ಞವಾಗಿ ಅಭಿನಯಿಸಿದರು.

ಉಮೇಶ್‌ಗೆ ಪಿಹೆಚ್.ಡಿ



ಮೈಸೂರು,ಸೆ.30–ಡಾ. ಎಸ್. ಸಿದ್ದರಾಜು ಅವರ ಮಾರ್ಗದರ್ಶನದಲ್ಲಿ ಕೆ.ಎಂ.ಉಮೇಶ ಅವರು ಸಹಕಾರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಉಡುಗೊರೆ ಸಂದೇಶಕ್ಕೆ ಪ್ರತಿಕ್ರಿಯಿಸಿ 1.05 ಲಕ್ಷ ಕಳೆದುಕೊಂಡ ಯೋಗ ಶಿಕ್ಷಕಿ

ಮೈಸೂರು, ಸೆ.30–ಉಡುಗೊರೆ ಕಳುಹಿಸುವುದಾಗಿ ವಾಟ್ಸಾಪ್‌ಗೆ ಮೆಸೇಜ್ ಮಾಡಿ ಯೋಗ ಶಿಕ್ಷಕಿಗೆ ಆನ್‌ಲೈನ್ ಮೂಲಕ 1.05 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಜಯಲಕ್ಷ್ಮೀಪುರಂನಲ್ಲಿ ವಾಸವಿರುವ ಯೋಗ ಶಿಕ್ಷಕಿ ಶಿಲ್ಪಾಶ್ರೀ(32) ವಂಚನೆಗೊಳಗಾದವರಾಗಿದ್ದು, ಇವರಿಗೆ ಸೆ.27ರಂದು ಥಾಮಸ್ ಎಂಬ ವ್ಯಕ್ತಿ, ತಾನು ಸ್ನೇಹಿತನಾಗಿದ್ದು, ಉಡುಗೊರೆ ಕಳುಹಿಸುತ್ತಿದ್ದೇನೆ ಎಂದು ವಾಟ್ಸಾಪ್ ಮೆಸೇಜ್ ರವಾನಿಸಿದ್ದಾನೆ. ನಂತರ ಕೊರಿಯರ್ ಆಫೀಸಿನಿಂದ ಎಂದು ಕರೆ ಮಾಡಿದ ವ್ಯಕ್ತಿ ಉಡುಗೊರೆ ಬಂದಿದೆ, ಅದಕ್ಕೆ 1.05 ಲಕ್ಷ ಆನ್‌ಲೈನ್ ಮೂಲಕ ಪಾವತಿ ಸಬೇಕು ಎಂದದ್ದನ್ನು ನಂಬಿದ ಶಿಲ್ಪಾಶ್ರೀ ಅವರು ಹಣ ವರ್ಗಾವಣೆ ಮಾಡಿದ್ದು, ಅವರಿಗೆ ಉಡುಗೊರೆಯಂತೂ ಬಂದಿಲ್ಲ. ಮೈಸೂರು ನಗರ ಸೆನ್ ಠಾಣೆಯಲ್ಲಿ ದೂರು ದಾಖಲಾಗಿದೆ

ಮೈಸೂರು ಹಾಗೂ ಸುತ್ತಮುತ್ತ ಇಂದು...

ದಸರಾ ಕಾರ್ಯಕ್ರಮಗಳು



■ **ಗ್ರಾಮೀಣ ಯೋಗ:** ಉದ್ಘಾಟನೆ : ಶಾಸಕ ಬಿ.ಹರ್ಷವರ್ಧನ್, ಸ್ಥಳ: ಶ್ರೀ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು, ಬೆಳಗ್ಗೆ 6ಕ್ಕೆ
■ **ಪಾರಂಪರಿಕ ಟಾಂಗಾ ಸವಾರಿ:** ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಸ್ಥಳ: ಮೈಸೂರು ಪುರಭವನ, ಬೆಳಗ್ಗೆ 7ಕ್ಕೆ
■ **ರೈತ ದಸರಾ ಕ್ರೀಡಾಕೂಟ :** ಉದ್ಘಾಟನೆ: ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಸ್ಥಳ: ಓವಲ್ ಮೈದಾನ, ಬೆಳಗ್ಗೆ 10ಕ್ಕೆ.
■ **ಪ್ರಾದೇಶಿಕ ಕವಿಗೋಷ್ಠಿ:** ಉದ್ಘಾಟನೆ: ಶಾಸಕ ಎಸ್.ಎ.ರಾಮದಾಸ್, ಅಧ್ಯಕ್ಷತೆ: ಕವಯಿತ್ರಿ ನೂತನ ದೋಶೆಟ್ಟಿ, ಮುಖ್ಯ ಅತಿಥಿಗಳು: ಕವಿ ಡಾ.ಯಲ್ಲಪ್ಪ ಕೆ.ಕೆ.ಪುರ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10.30ಕ್ಕೆ.
■ **ಕರಕುಶಲ ಪ್ರಾತ್ಯಕ್ಷತೆ, ಮಕ್ಕಳ ಚಿತ್ರಕಲಾ ಸ್ಪರ್ಧೆ :** ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 11ಕ್ಕೆ.
■ **ಹಾಲು ಕರೆಯುವ ಸ್ಪರ್ಧೆ:** ಉದ್ಘಾಟನೆ: ಪಶು ಸಂಗೋಪನಾ ಸಚಿವ ಪ್ರಭು ಬಿ.ಚವ್ಹಾಣ್, ಸ್ಥಳ: ಜೆ.ಕೆ.ಮೈದಾನ, ಬೆಳಗ್ಗೆ 11ಕ್ಕೆ.
■ **ಚಿಗುರು ಕವಿಗೋಷ್ಠಿ :** ಉದ್ಘಾಟನೆ : ಶಾಸಕ ಎಲ್.ನಾಗೇಂದ್ರ, ಅಧ್ಯಕ್ಷತೆ: ಕವಯಿತ್ರಿ ಶ್ರೀಮತಿ ಜ್ಯೋತಿ ಗುರುಪ್ರಸಾದ್, ಮುಖ್ಯ ಅತಿಥಿಗಳು : ಕವಿಗಳು ಹಾಗೂ ವಿಮರ್ಶಕರಾದ ಡಾ.ಸಿ.ಪಿ.ಸಿದ್ಧಾಶ್ರಮ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಧ್ಯಾಹ್ನ 2.30ಕ್ಕೆ.
■ **ಪೊಲೀಸ್ ಸಮೂಹ ವಾದ್ಯವೃಂದ :** ಉದ್ಘಾಟನೆ : ಗೃಹ ಸಚಿವ ಆರಗ ಜ್ಞಾನೇಂದ್ರ, ಸ್ಥಳ: ಅರಮನೆ ಆವರಣ, ಸಂಜೆ 7ಕ್ಕೆ
■ **ವೈದ್ಯಕೀಯ ವಸ್ತುಪ್ರದರ್ಶನ :** ಸ್ಥಳ: ಮೈಸೂರು ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ.
■ **ಫಲಪುಷ್ಪ ಪ್ರದರ್ಶನ:** ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ, ಸ್ಥಳ: ಅರಮನೆ ಆವರಣ, ಸಂಜೆ 5.30ಕ್ಕೆ.
■ **ದೀಪಾಲಂಕಾರ:** ದಸರಾ ವಿದ್ಯುತ್ ದೀಪಾಲಂಕಾರ, ಸ್ಥಳ: ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6.30ಕ್ಕೆ.
■ **ಮೈಸೂರು ಬೊಂಬೆ ರಂಗಮಂದಿರ :** ಬೊಂಬೆ ಆಟ ಪ್ರದರ್ಶನ, ಸ್ಥಳ: ಮೈಸೂರು ಬೊಂಬೆ ರಂಗ ಮಂದಿರ, ಜೆ.ಸಿ.ನಗರ, ಚಾಮುಂಡಿ ಬೆಟ್ಟ, ಸಂಜೆ 5 ರಿಂದ.

ಮೈಸೂರು ಅರಮನೆ

ಸಂಜೆ 5.30 ರಿಂದ: ವೇದವ್ಯಾಸ ಸೇವಾ ಟ್ರಸ್ಟ್‌ನ ಪನ್ನಗ ವಿಜಯಕುಮಾರ್ ಅವರಿಂದ ಜಾನಪದ ಗಾಯನ
ಸಂಜೆ 6 ರಿಂದ : ಬೆಂಗಳೂರಿನ ಟಿ.ಎಸ್. ನಾಗಾಭರಣ ಬೆನಕ ತಂಡದಿಂದ ರಂಗ ಗೀತೆಗಳು
ಸಂಜೆ 7 ರಿಂದ : ಮಾಸ್ ಬ್ಯಾಂಡ್ ಪೊಲೀಸ್ ಬ್ಯಾಂಡ್
ರಾ. 8 ರಿಂದ : ಬೆಂಗಳೂರಿನ ಮನೋ ಮ್ಯೂಸಿಕ್ ಲೈನ್ಸ್ ಅವರಿಂದ ಸಿತಾರ್ ಸಿಂಫೋನಿ

ಜಗನ್ಮೋಹನ ಅರಮನೆ

ಸಂಜೆ 6 ರಿಂದ : ಹಾಸನದ ಕುಮಾರಯ್ಯ ತಂಡದಿಂದ ಚಿತ್‌ಮೇಳ
ಸಂಜೆ 6.45 ರಿಂದ : ಬೆಂಗಳೂರಿನ ಕಡುಬಗೇರಿ ಮುನಿರಾಜು ಅವರಿಂದ ಜಾನಪದ ಗೀತೆಗಳು
ರಾ. 7.30 ರಿಂದ : ಮೈಸೂರಿನ ಎಂ.ಆರ್. ಶ್ರೀಕಾಂತ್ ಅವರಿಂದ ತಾಳವಾದ್ಯ
ರಾ. 8.30 ರಿಂದ : ಬೆಂಗಳೂರಿನ ಅರವಿಂದ ಕುಮಾರ ಚೈತನ್ಯ ಕಲಾ ಸಂಘದ ವಿದುಷಿ ಆಶಾ ಜಗದೀಶ್ ಮತ್ತು ಅನುಪಮ ಅವರಿಂದ ಕರ್ನಾಟಕ ಸಂಗೀತ

ಕಲಾಮಂದಿರ

ಸಂಜೆ 5.30 ರಿಂದ : ಹಾವೇರಿ ಹುರಳಿಕುಪ್ಪಿ ಶ್ರೀ ಕನಕ ಕಲಾತಂಡದಿಂದ ಕೋಲಾಟ
ಸಂಜೆ 6 ರಿಂದ : ಮಂಡ್ಯದ ಪ್ರಮೋದಿನಿ ಮತ್ತು ತಂಡದಿಂದ ಪೂಜಾ ಕುಣಿತ
ಸಂಜೆ 6.45 ರಿಂದ : ಧಾರವಾಡದ ಐಶ್ವರ್ಯ ದೇಸಾಯಿ ಅವರಿಂದ ವಚನ ಗಾಯನ
ರಾ. 7.30 ರಿಂದ : ವಿಜಯಪುರದ ಸ್ವಯಾಂಬೋ ಆರ್ಟ್ ಫೌಂಡೇಷನ್‌ನಿಂದ ನೃತ್ಯರೂಪಕ
ರಾತ್ರಿ 8.30 ರಿಂದ : ಮೈಸೂರಿನ ವಿ.ವಿ.ದತ್ತಾತ್ರೇಯ ಅವರಿಂದ ಸಮೂಹ ಕೊಳಲು ವಾದನ

ಗಾನಭಾರತಿ

ಸಂಜೆ 6 ರಿಂದ : ರಾಮನಗರದ ಅಪ್ಪಗೆರೆ ಸತೀಶ್ ಮತ್ತು ತಂಡದಿಂದ ಜಾನಪದ ಗೀತೆಗಳು
ಸಂಜೆ 6.45 ರಿಂದ : ಕೇರಳದ ಕಾಸರಗೋಡಿನ ಯೋಗೇಶ ಶರ್ಮ ಅವರಿಂದ ನಾದ ಮಾಧುರಿ ಗಾಯನ
ರಾ. 7.30 ರಿಂದ : ಬೆಂಗಳೂರಿನ ಡಾ. ಕೆ.ಎಸ್. ನಾಗೇಶ್ ಮತ್ತು ತಂಡದಿಂದ ಸುಗಮ ಸಂಗೀತ
ರಾ. 8.30 ರಿಂದ : ಮಂಗಳೂರಿನ ಸನಾತನ ನಾಟ್ಯಾಲಯದ ವಿದುಷಿ ಶ್ರೀಲತಾ ನಾಗರಾಜು ಶೆಟ್ಟಿ ಮತ್ತು ತಂಡದಿಂದ ನೃತ್ಯ

ಶ್ರೀ ನಾದಬ್ರಹ್ಮ ಸಂಗೀತ ಸಭಾ

ಸಂಜೆ 6 ರಿಂದ: ಮಂಡ್ಯದ ಎಂ.ಎಸ್.ಶಂಕರ್‌ರಿಂದ ತತ್ವಪದ
ಸಂಜೆ 6.45 ರಿಂದ : ಕಲಬುರ್ಗಿ ಸುಭಾಂಗಿ, ಓಂಕಾರ್ ನೃತ್ಯ ಸಾಧನ ಅವರಿಂದ ನೃತ್ಯ
ರಾ. 7.30 ರಿಂದ : ಬೆಂಗಳೂರಿನ ಎಸ್. ದತ್ತಶ್ರೀ ಅವರಿಂದ ಕನ್ನಡ ಗೀತ ಗಾಯನ
ರಾ. 8.30 ರಿಂದ : ಮೈಸೂರಿನ ಡಿಂಪಲ್ ಅವರಿಂದ ನೃತ್ಯರೂಪಕ



ಇಂದಿನ ಪಂಚಾಂಗ

1.10.2022 ಶನಿವಾರ, ಮಳೆ ನಕ್ಷತ್ರ: ಹಸ್ತ 27.09.2022ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಅಶ್ವಯುಜ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

ಚಿಕ್ಕಗಡಿಯಾರ

ಸಂಜೆ 5.30 ರಿಂದ : ಹಾಸನದ ರಾಜಗೇರಿ ಶಿವಣ್ಣ ಮತ್ತು ತಂಡದಿಂದ ಸೋಮನ ಕುಣಿತ
ಸಂಜೆ 6 ರಿಂದ : ಮೋಹನ್‌ಕುಮಾರ್ ಮತ್ತು ತಂಡ (ವಿಶೇಷಚೇತನ ಮಕ್ಕಳಿಂದ) ಸುಗಮ ಸಂಗೀತ
ರಾತ್ರಿ 7 ರಿಂದ : ಚಿಕ್ಕಮಗಳೂರಿನ ರುದ್ರಪ್ಪ ಮತ್ತು ತಂಡದಿಂದ ವೀರಗಾಸೆ, ಬಾಗಲಕೋಟೆಯ ಲಕ್ಕಪ್ಪ ಭಜಂತ್ರಿ ಅವರಿಂದ ತಾಳವಾದ್ಯ
ರಾತ್ರಿ 8 ರಿಂದ : ಋತ್ವಿಕ್ ಸಿ.ರಾಜನ್ ಅವರಿಂದ ಕನ್ನಡ ಗೀತೆಗಳು

ಪುರಭವನ

ಬೆಳಗ್ಗೆ 10.30 ರಿಂದ : ಕಲಬುರ್ಗಿ ಶ್ರೀ ಮಹಾತ್ಮ ಜ್ಯೋತಿಘುಲೆ ನಾಟಕ ಬಯಲಾಟ ಕಲಾಸಂಘದಿಂದ 'ದೇವಿ ಮಹಾತ್ಮೆ' ಬಯಲಾಟ
ಮಧ್ಯಾಹ್ನ 3 ರಿಂದ : ಚಿತ್ರದುರ್ಗದ ಕಲಾವಿದರಿಂದ ಸಾಮಾಜಿಕ ನಾಟಕ 'ಶ್ರೀ ಸಾಹಿತ್ಯ ಸಾಮ್ರಾಟ್'
ಸಂಜೆ 6 ರಿಂದ: ಹಾಸನದ ಶ್ರೀ ವೀರಭದ್ರೇಶ್ವರಸ್ವಾಮಿ ಕಲಾ ಸಂಘದಿಂದ ಶ್ರೀ ಕೃಷ್ಣರಾಯಭಾರ ನಾಟಕ ಪ್ರದರ್ಶನ

ಅರಮನೆ ಮಾಳ, ನಂಜನಗೂಡು

ಸಂಜೆ 5.30 ರಿಂದ: ಸಿಟಿಜನ್ ಸ್ಕೂಲ್ ವಿದ್ಯಾರ್ಥಿಗಳಿಂದ ಕರ್ನಾಟಕ ಸಾಂಸ್ಕೃತಿಕ ಸಂಬಂಧ–ಸಮೂಹ ನೃತ್ಯ
ಸಂಜೆ 6 ರಿಂದ : ಮೈಸೂರಿನ ಮಹದೇವ ಮತ್ತು ತಂಡದಿಂದ ಸುಗಮ ಸಂಗೀತ
ಸಂಜೆ 7 ರಿಂದ : ರಾಮನಗರದ ವಿದುಷಿ ಡಿ.ನಾಗವೇಣಿ ಅವರಿಂದ ನೃತ್ಯ ರೂಪಕ
ರಾತ್ರಿ 8 ರಿಂದ : ಸುತ್ತೂರು ಸ್ವಾಮಿ ಮತ್ತು ತಂಡದಿಂದ ಮಂಗಳವಾದ್ಯ

ಕಿರು ರಂಗಮಂದಿರ, ಕಲಾಮಂದಿರ

ಮ. 2 ರಿಂದ : ಚಾಮರಾಜನಗರ ಕಲಾವಿದರಿಂದ ಸೋಬಾನೆ ಪದ
ಮ. 3 ರಿಂದ : ಉಡುಪಿಯ ಸುಮನಸ ಕೊಡವೂರು ಅವರಿಂದ ನೆರಳಿಲ್ಲದ ಮನುಷ್ಯರು ನಾಟಕ
ರಾ. 7 ರಿಂದ : ಮೈಸೂರಿನ ನಾಲ್ವಡಿ ಟ್ರಸ್ಟ್‌ವತಿಯಿಂದ ಬೆರಳ್ ಗೆ ಕೊರಳ್ ನಾಟಕ

ಕುಸ್ತಿ ಪಂದ್ಯಾವಳಿ, ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ಕರ್ನಾಟಕ ವಸ್ತುಪ್ರದರ್ಶನ ಮೈದಾನ

ಬೆಳಗ್ಗೆ 8 ರಿಂದ : ಪಾಯಿಂಟ್ ಕುಸ್ತಿಗಳು
ಮಧ್ಯಾಹ್ನ 3 ರಿಂದ : ನಾಡ ಕುಸ್ತಿ ಪಂದ್ಯಾವಳಿ

ಆಹಾರ ಮೇಳ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ

ಸಂಜೆ 6 ರಿಂದ: ಸ್ಟಾರ್ ಸುವರ್ಣ ಕಲಾವಿದರಿಂದ ಮನರಂಜನಾ ಕಾರ್ಯಕ್ರಮ

ಯುವ ದಸರಾ ಮಹಾರಾಜ ಕಾಲೇಜು ಮೈದಾನ

ಸಂಜೆ 6ರಿಂದ : ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಕಾರ್ಯಕ್ರಮ
ಸಂಜೆ 6.15ರಿಂದ: ಶ್ರೀ ವಾಣಿ ವಿಲಾಸ ಅರಸು ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಕಾರ್ಯಕ್ರಮ
ಸಂಜೆ 6.30 ರಿಂದ: ಹಿನ್ನೆಲೆ ಗಾಯಕ ಸೋನು ನಿಗಮ್ ಮತ್ತು ಡಾ. ಶಮಿತ ಮಲ್ನಾಡ್ ಅವರಿಂದ ಸಂಗೀತ ಸಂಜೆ

ಶರನ್ನವರಾತ್ರಿ ಕಾರ್ಯಕ್ರಮ



■ **ತ್ರಯೀನ್ಯಾಸ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಕಾತ್ಯಾಯಿನಿ, ಶ್ರೀ ವಿದ್ಯಾ ಶಾಂತಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ರಿಂದ ಶ್ರೀ ಸುಬ್ರಹ್ಮಣ್ಯ ಆವರಣಾಂಗ ಹೋಮ, ಶ್ರೀ ದಶವಾರಾಹಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.
■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ:** ಶ್ರೀ ಶಾರದಾ ಶರನ್ನವರಾತ್ರೋತ್ಸವ, ಸಹಸ್ರ ಮೋದಕ ಗಣಪತಿ ಹೋಮ, ಸಂಜೆ ಲಕ್ಷಾ ಕುಂಕುಮಾರ್ಚನೆ, ಶ್ರೀ ಸುಬ್ರಹ್ಮಣ್ಯ ಹೋಮ, ಇಂದ್ರಾಣಿ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.
■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ಇಂದ್ರಾಣಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ, ಸಂಜೆ 6ರಿಂದ.
■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದ್ವಾನ್ ಆರ್.ಕೆ.ಕೌಶಿಕ್ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ರಾಮಮಂದಿರ, ಸಂಜೆ 6 ಗಂಟೆಗೆ.
■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ಉಮಾಮಹೇಶ್ವರಿ ಅಲಂಕಾರ, ಸಂಜೆ 7 ಗಂಟೆಗೆ.
■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರಪೂಜೆ, ನವಾವರಣ ಪೂಜೆ, ವಿದ್ವಾನ್ ಹೊಸಹಳ್ಳಿ ಕೆ.ವೆಂಕಟರಾಮ್, ವಿದ್ವಾನ್ ಹೊಸಹಳ್ಳಿ ಕೆ.ಸುಬ್ರಾವ್ ಮತ್ತು ವಿದ್ವಾನ್ ಹೊಸಹಳ್ಳಿ ವಿ.ರಘುರಾಮ್ ಅವರಿಂದ ಕರ್ನಾಟಕ ಪಿಟೀಲು ವಾದನ, ಮ.12ಕ್ಕೆ ಅನ್ನಾರ್ಚನೆ, ವಿಶಾಲಾಕ್ಷಿ ಪೂಜೆ, ಹೋಮ, ಪೂರ್ಣಾಹುತಿ, ಮ.3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.
■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9 ಗಂಟೆಗೆ ಶ್ರೀ ಸೂಕ್ತ ಹೋಮ, ಸರಸ್ವತಿ ಅಲಂಕಾರ, ಸಂಜೆ 7 ಗಂಟೆಗೆ ರಾತ್ರಿ ಸೂಕ್ತ ಹೋಮ, ಪೂರ್ಣಾಹುತಿ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 8ಕ್ಕೆ
■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಚೇತನಾ ಮಹಿಳಾ ಸಮಾಜ ಮತ್ತು ಶ್ರೀಮತಿ ಗಿರಿಜಾ ಮಲ್ಲೇಶ್ ಮತ್ತು ಶ್ರೀಮತಿ ಜಯಶ್ರೀ ವೃಂದದವರಿಂದ ಗೌರಿದಶಕ ಮತ್ತು ದೇವರ ನಾಮಗಳು, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.
■ **ಅಮೃತೇಶ್ವರ ದೇವಸ್ಥಾನ:** ಚಕ್ರನವಾವರಣೆ ಪೂಜೆ, ಕಾತ್ಯಾಯಿನಿ ದುರ್ಗಾ ಪೂಜೆ, ಶತಚಂಡಿ ಮಹಾಯಾಗ. ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ. ಸ್ಥಳ: ದೇವಸ್ಥಾನದ ಆವರಣದ, ದೇವರಾಜ ಮೊಹಲ್ಲಾ.
■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ಬೆಂಗಳೂರಿನ ಸ್ನೇಹರಂಗ ತಂಡದಿಂದ ಮಾರೀಚನ ಬಂಧುಗಳು ನಾಟಕ ಪ್ರದರ್ಶನ, ನಿರ್ದೇಶನ : ವಾಲ್ಟರ್ ಡಿಸೋಜ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.
■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.
■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವದ ಅಂಗವಾಗಿ ಗುಜರಾತಿ ಗರ್ಬಾ ಹಾಗೂ ದಾಂಡಿಯಾ ಜಾನಪದ ನೃತ್ಯ ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30ರಿಂದ.
■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್:** ಶರನ್ನವರಾತ್ರಿ ಪೂಜಾ ಮಹೋತ್ಸವ, ಬೆಳಗ್ಗೆ 10 ರಿಂದ ಶ್ರೀ ಧನ್ವಂತರಿ ಹೋಮ, ಸ್ಥಳ: ಶ್ರೀರಾಮ ಮಂದಿರ, ಜಯನಗರ.
■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ:** ಶರನ್ನವರಾತ್ರಿ, ಹೂ ಅಲಂಕಾರ, ಬೆಳಗ್ಗೆ ಮತ್ತು ಸಂಜೆ ರಾಮಕೃಷ್ಣನಗರದ ಶ್ರೀಮತಿ ಸ್ವರ್ಣ ನಾಗರಾಜ್ ಅವರಿಂದ ಭಕ್ತಿ ಸಂಗೀತ, ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.
■ **ಶ್ರೀ ಗಣಪತಿ ಸೇವಾ ಮಂಡಳಿ :** ಶರನ್ನವರಾತ್ರೋತ್ಸವ, ಗಜಗೌರಿ ಅಲಂಕಾರ, ಸ್ಥಳ: ಶ್ರೀ ಗಣಪತಿ ಸೇವಾ ಮಂಡಳಿ, ರಾಮಕೃಷ್ಣನಗರ.
■ **ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ವರ್ಧ್ಯಂತ್ಯೋತ್ಸವ, ಅಂತರರಾಷ್ಟ್ರೀಯ ಹಿರಿಯ ದಿನ, ಬೆಳಗ್ಗೆ 7 ಗಂಟೆಗೆ ಶ್ರೀ ಮಹಾಗಣಪತಿ ಪುರಸ್ಸರ ಗಂಗಾಭಾಗೀರಥಿ ಪೂಜಾ, ಸ್ವಸ್ತಿ ಪುಣ್ಯಾಹವಾಚನ, ನಾಂದೀ ಮಾತೃಕಾರಾಧನಾ, ಋತ್ವಿಕ್ ವರ್ಣ, ರಕ್ಷಾಬಂಧನ ಪೂಜ, ಧಾರಣ, ಪಂಚಗವ್ಯ ಪೂಜಾ, ಪ್ರಾಶನ, ನವಗ್ರಹಪೂರ್ವಕ ಕಲಶ ಸ್ಥಾಪನೆ, ಜಪಗಳು, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 5 ಗಂಟೆಗೆ ವೇದಪಾರಾಯಣ, ಮಹಾಗಣಪತಿ ಪೂಜಾ, ಕಲಶಪೂಜಾ, ಶ್ರೀ ದುರ್ಗಾ ಸಪ್ತಶತಿ ಪಾರಾಯಣ, ಮುತ್ತೈದೆಯರಿಂದ ಕುಂಕುಮಾರ್ಚನೆ, ಶ್ರೀ ಮಹಾಗಣಪತಿ ಹೋಮ, ಆದಿತ್ಯಾದನವಗ್ರಹ ಹೋಮ, ಪುರುಷ ಸೂಕ್ತ ಹೋಮ, ವಾಸ್ತು ಹೋಮ, ಬಲಿಪ್ರಧಾನ, ಮಂತ್ರಪುಷ್ಪ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಹಿರಿಯ ನಾಗರಿಕರ ನಿವಾಸ, ಆಲನಹಳ್ಳಿ ಬಡಾವಣೆ.
■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಪಾರ್ಕಿನ್‌ಸನ್ಸ್ ಕಾಯಿಲೆಯ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 9ರಿಂದ.
■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ.
■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್:** ಚಿತ್ರ ಮತ್ತು ಛಾಯಾಚಿತ್ರ ಕಲಾವಿದ ಬಿ.ಎಸ್. ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ ಏಕವ್ಯಕ್ತಿ ಛಾಯಾಚಿತ್ರ ಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.
■ **ದಸರಾ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ, ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ : ಗೋಪಾಲಗೌಡ ಶಾಂತವೇರಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ. ಸಂತೃಪ್ತ್, ಅಧ್ಯಕ್ಷತೆ : ಪ್ರೀತಿ ಗ್ರೂಪ್‌ನ ಡೈರೆಕ್ಟರ್ ಪ್ರದೀಪ್ ರಾಜಪ್ಪ, ಅತಿಥಿಗಳು : ಸ್ನೇಕ್ ಶ್ಯಾಮ್, ಡಿವೈಎಸ್ಪಿಗಳಾದ ಎಂ.ಎಚ್. ಖಾನ್, ರೇಣುಕಾರಾಧ್ಯ, ಸ್ಥಳ: ಹೋಟೆಲ್ ಪ್ರೀತಿ ಇಂಟರ್‌ನ್ಯಾಷನಲ್, ಪೈವ್‌ಲೈಟ್ ಸರ್ಕಲ್, ಬೆಳಗ್ಗೆ 10.30ಕ್ಕೆ.
■ **ಮೈಸೂರು ವಿಶ್ವವಿದ್ಯಾನಿಲಯ, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗ:** ಮಾತು ವಿತ್ ಮಾಲಿನಿ ಕನ್ನಡ ಯು–ಟ್ಯೂಬ್ ಚಾನಲ್ ಬಿಡುಗಡೆ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊಜಿ. ಹೇಮಂತ ಕುಮಾರ್, ಮುಖ್ಯ ಅತಿಥಿಗಳು : ಪಬ್ಲಿಕ್ ಟಿವಿ ವ್ಯವಸ್ಥಾಪಕ ನಿರ್ದೇಶಕ ಹೆಚ್.ಆರ್. ರಂಗನಾಥ್, ಸಂಸದ ಪ್ರತಾಪ್ ಸಿಂಹ, ಆಯಿಷ್ ನಿರ್ದೇಶಕಿ ಪ್ರೊ. ಎಂ.ಪುಷ್ಪವತಿ, ಪ್ರೊ. ಎಸ್.ಎನ್. ಹೆಗ್ಡೆ, ಉಪಸ್ಥಿತರು : ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗದ ಅಧ್ಯಕ್ಷ ಪ್ರೊ. ಸುತ್ತೂರು ಎಸ್. ಮಾಲಿನಿ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
■ **ಕರ್ನಾಟಕ ಸೇನಾ ಪಡೆ :** ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಪುಷ್ಪಾರ್ಚನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಉಪಸ್ಥಿತರು : ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಹೆಚ್.ಕೆ. ರಾಮು, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.
■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಜೈವಿಕ ರಸಾಯನಶಾಸ್ತ್ರ ವಿಭಾಗ :** ಎನ್‌ಎಂಆರ್ ಸ್ಪೆಕ್ಟ್ರಾ ಡೇಟಾ ವ್ಯಾಖ್ಯಾನ ಕುರಿತು ರಾಷ್ಟ್ರೀಯ ಮಟ್ಟದ ಕಾರ್ಯಾಗಾರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಜೈವಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಕೆ. ಕೆಂಪರಾಜು, ಅಧ್ಯಕ್ಷತೆ: ಮಹಾ ವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಕಾಲೇಜು ಸಭಾಂಗಣ, ಮಧ್ಯಾಹ್ನ 3ಕ್ಕೆ
■ **ತರಳಬಾಳು ಸಮಾಗಮ, ಶ್ರೀ ತರಳಬಾಳು ಶಿಕ್ಷಣ ಕೇಂದ್ರ :** ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮಿಗಳವರ 30ನೇ ಶ್ರದ್ಧಾಂಜಲಿ ಸಮಾರಂಭ, ಅಧ್ಯಕ್ಷತೆ : ಶ್ರೀ ತರಳಬಾಳು ಸಮಾಗಮ ಅಧ್ಯಕ್ಷ ಡಾ. ಎಸ್.ಬಿ. ವಸಂತಕುಮಾರ್, ಮುಖ್ಯ ಅತಿಥಿಗಳು : ಕರ್ನಾಟಕ ಮೃಗಾಲಯ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಬಿ.ಪಿ. ರವಿ, ನುಡಿನಮನ : ಮೈಸೂರು ವಿವಿ ಶ್ರೀ ಬಸವೇಶ್ವರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ. ಚಂದ್ರಶೇಖರಯ್ಯ, ಸ್ಥಳ: ಶ್ರೀ ತರಳಬಾಳು ಶಿಕ್ಷಣ ಕೇಂದ್ರ, ತೊಣಚಿಕೊಪ್ಪಲು, ಸಂಜೆ 5ಕ್ಕೆ.
■ **ಜೆಎಸ್‌ಎಸ್ ಕಾನೂನು ಕಾಲೇಜು :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಭಾಷಣ : ಸುಪ್ರೀಂ ಕೋರ್ಟ್ ನ್ಯಾಯಾಧೀಶ ಎ.ಎಸ್. ಬೋಪಣ್ಣ, ಮುಖ್ಯ ಅತಿಥಿಗಳು : ಹೈಕೋರ್ಟ್ ನ್ಯಾಯಾಧೀಶ ಪಿ.ಎಸ್. ದಿನೇಶ್‌ಕುಮಾರ್, ಅಧ್ಯಕ್ಷತೆ : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ಕಾಲೇಜು ಆವರಣ, ಸಂಜೆ 5ಕ್ಕೆ.
■ **ನಾದವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಮತ್ತು ಡ್ಯಾನ್ಸ್ ಸಂಸ್ಥೆ :** ಕು. ಶ್ರೇಯಾ ಅವರ ಭರತನಾಟ್ಯ ರಂಗ ಪ್ರವೇಶ, ಮುಖ್ಯ ಅತಿಥಿಗಳು : ಮಾಜಿ ಅಡ್ವೋಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್, ಕೆ. ಅರ್ಕೇಶ್, ವಿದುಷಿ ಶ್ರೀಮತಿ ಆರತಿ ಅರುಣ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.
■ **ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** 48ನೇ ಬ್ರಹ್ಮೋತ್ಸವ, ಬೆಳಗ್ಗೆ 10 ರಿಂದ ಕಲಶಾರಾಧನೆ, ನಿತ್ಯಹೋಮ, ಬಲಿಪ್ರಧಾನ, ಆಂಜನೇಯ ಸಹಸ್ರನಾಮ, ನಿವೇದನ, ಮಂಗಳಾರತಿ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸಂಜೆ ನಿತ್ಯ ಹೋಮ, ಶೇಷವಾಹನೋತ್ಸವ ನಿವೇದನ, ಮಂಗಳಾರತಿ, ಶಾತ್ತುಮೊರೈ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ದಸರಾ ವಿಶೇಷ ಗೀತಾರಾಧನ, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ–ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ', ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 9.15' ಹರಿಕೇಶಾಂಗಿ ಮಾತಂಗಿ' ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ–ಮೈಸೂರು ಎಸ್. ರಾಜಲಕ್ಷ್ಮಿ, 10.00 ಶ್ರೀ ಕಮಲಾಂಬ ಜಯಂತಿ–ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತೈರ ನವಾವರಣ ಕೀರ್ತನೆಗಳನ್ನಾಧರಿಸಿದ ವಿಶೇಷ ಸರಣಿ, 11.00ಅಮೃತ ಸ್ವಾತಂತ್ರ್ಯ ಮಹೋತ್ಸವದ ವಿಶೇಷ ಸರಣಿ 'ಸ್ವರಾಜ್' ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ ಮಧ್ಯಾಹ್ನ: 12.45 ಜನಪದ ಸಂಗೀತ–ನರಗನಹಳ್ಳಿ ಮಾಯಮ್ಮ ಮತ್ತು ತಂಡ, 1.20 'ಜಂಬೂ ಸವಾರಿ–ಮೈಸೂರು ದಸರಾ ಆನೆ ಸ್ಟೋರಿ' ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ, ಪ್ರಸ್ತುತಿ–ಅಬ್ದುಲ್ ರಶೀದ್ ಹಾಗೂ ಡಾ.ಮೈಸೂರು ಉಮೇಶ್, 3.30 ಮಕ್ಕಳ ಮಂಟಪ, 'ನಂದ ಗೋಕುಲ', ಪ್ರಸ್ತುತಿ– ಕೆ.ಬಿ.ಮೀನಾ, 5.30 ಚಾಮುಂಡಿ ಹಬ್ಬ– ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ–ಪಿ.ಕೆ.ರಾಜಶೇಖರ್, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.50 ಕೃಷಿರಂಗ–ಕಿಸಾನ್‌ವಾಣಿ–ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್ ಡೌನ್ ಕಥಾ ನಾಟಕ, ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, 11.00 ಸವಿನೆನಪು

ಮೈಸೂರು ಮಿತ್ರ

ಮೈಸೂರು ಅರಮನೆ ಮುಂದೆ ಯೋಗ ಸರಪಳಿಯಲ್ಲಿ ಸಾವಿರಾರು ಮಂದಿ ಭಾಗಿ



ಮೈಸೂರು, ಸೆ.30(ಎಂಟಿವೈ)– ನಾಡಹಬ್ಬ ದಸರಾ ಅಂಗವಾಗಿ ಯೋಗ ದಸರಾ ಉಪ ಸಮಿತಿಯು ಶುಕ್ರವಾರ ಮೈಸೂರಿನ ಅರಮನೆ ಮುಂಭಾಗ ಆಯೋಜಿಸಿದ್ದ ಯೋಗ ಸರಪಳಿ ಕಾರ್ಯಕ್ರಮದಲ್ಲಿ ಸಾವಿರಾರು ಯೋಗಪಟುಗಳು ಪಾಲ್ಗೊಂಡು ವಿವಿಧ ಆಸನಗಳನ್ನು ಪ್ರದರ್ಶಿಸಿದರು.


ಯೋಗ ದಸರಾ ಉಪಸಮಿತಿಯ ಐದನೇ ದಿನದ ಕಾರ್ಯಕ್ರಮದಲ್ಲಿ ಯೋಗಪಟುಗಳು ಒಬ್ಬರನ್ನೊಬ್ಬರು ಕೈ ಹಿಡಿದು ಯೋಗ ಸರಪಳಿಯಲ್ಲಿ ಯೋಗಾಸನ ಪ್ರದರ್ಶಿಸಿದರು. ಮೂರು ಪ್ರಮುಖ ವಿಭಾಗದಲ್ಲಿ ಯೋಗ ಸರಪಳಿ ನಡೆಸಲಾಯಿತು. ತ್ರಿಕೋನಾಕಾರದಲ್ಲಿ ಯೋಗ ಪ್ರದರ್ಶನ, ಕುಳಿತುಕೊಂಡು ಮಾಡುವ ಯೋಗಾಸನ ಹಾಗೂ ಒಬ್ಬರನ್ನೊಬ್ಬರ ಕೈ ಹಿಡಿದು ಮಾಡುವ ಯೋಗ ಪ್ರದರ್ಶಿಸಲಾಯಿತು. 45 ನಿಮಿಷ ನಡೆದ ಯೋಗ ಸರಪಳಿಯಲ್ಲಿ ನಿಂತಿರುವ ಭಂಗಿಯಲ್ಲಿ 8 ಆಸನ, ಕುಳಿತುಕೊಂಡು ಮಾಡುವ 2 ಆಸನವನ್ನು ಪ್ರದರ್ಶಿಸಿದರು.

ಇದಕ್ಕೂ ಮುನ್ನ ಸಂಸದ ಪ್ರತಾಪ ಸಿಂಹ ಯೋಗ ಸರಪಳಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆರೋಗ್ಯವಂತರಾಗಿರಲು ಯೋಗ ಮಹತ್ವದ ಪಾತ್ರವಹಿಸುತ್ತದೆ. ದಸರಾ ಮಹೋತ್ಸವದಲ್ಲಿ ಯೋಗ ಕಾರ್ಯಕ್ರಮ ಅತ್ಯುತ್ತಮವಾಗಿ ಮೂಡಿಬರುತ್ತಿದೆ. ಅಂತಾರಾಷ್ಟ್ರೀಯ ಯೋಗ ದಿನವಾದ ಜೂ.21ರಂದು ಒಂದೇ ದಿನಕ್ಕೆ ಸೀಮಿತವಾಗದೇ ಪ್ರತಿದಿನವೂ ಯೋಗಾಭ್ಯಾಸ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಆ ಮೂಲಕ ಯೋಗವನ್ನು ದೈನಂದಿನ ಜೀವನದ ಒಂದು ಭಾಗವಾಗಿದೆ ಎಂದರು.

ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ ಮಾತನಾಡಿ, ಯೋಗ ಕಾರ್ಯಕ್ರಮವನ್ನು 2015ರಿಂದ ನಡೆಸಲಾಗುತ್ತಿದೆ. ಮತ್ತಷ್ಟು ಪ್ರಚಾರ ಮಾಡುವ ಮೂಲಕ ಯೋಗಾಭ್ಯಾಸ ಮಾಡುವವರ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿವೆ. ಮೈಸೂರಲ್ಲಿ ಯೋಗ ಕಲಿಸಲು ಹೆಚ್ಚು ಯೋಗ ಶಾಲೆಗಳನ್ನು ತೆರೆಯುವ ಅಗತ್ಯವಿದೆ. ಮೈಸೂರಿನ ಪ್ರತಿ ಶಾಲೆಯಲ್ಲಿ ಯೋಗ ಕಲಿಸಲು ಕ್ರಮಕೈಗೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಆಯುಷ್ ವೈದ್ಯಾಧಿಕಾರಿಗಳಾದ ಡಾ.ಪುಷ್ಪ, ದಸರಾ ಯೋಗಾ ಉಪಸಮಿತಿ ಉಪ ವಿಶೇಷಾಧಿಕಾರಿ ಸೀಮಂತಿನಿ, ಅಧ್ಯಕ್ಷ ಬಾಲಕೃಷ್ಣ ಉಪಾಧ್ಯಕ್ಷರಾದ ಈಶ್ವರ್, ಯೋಗೇಶ್ ಕುಮಾರ್, ಕೆ.ವೈ.ಮಂಜು, ಅರುಣ್‌ಕುಮಾರ್, ಯೋಗ ಸಂಸ್ಥೆಗಳ ಮುಖ್ಯಸ್ಥರಾದ ಗಣೇಶ್‌ಕುಮಾರ್, ಜಲೇಂದ್ರಕುಮಾರ್, ಶಶಿಕುಮಾರ್, ಬಿ.ಪಿ.ಮೂರ್ತಿ, ರಮೇಶ್ ಕುಮಾರ್, ವಿರೂಪಾಕ್ಷ ಬೆಳವಾಡಿ, ಕೆ.ವೈ.ಮಂಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದಸರಾ ರಜೆ 9 ದಿವಸ; ಅದರಲ್ಲಿ ಐದು ದಿನ ಸರ್ಕಾರಿ ರಜೆ!

ಇದನ್ನು ಸರಿದೂಗಿಸಲು ಎಂಎಲ್‌ಸಿ ಮರಿತಿಬ್ಬೇಗೌಡ ಆಗ್ರಹ



ಮೈಸೂರು, ಸೆ.30– ಸರ್ಕಾರಿ ಪದವಿ ಕಾಲೇಜಿನ ಅಧ್ಯಾಪಕರುಗಳಿಗೆ ಮಾತ್ರ ರಜೆ ಘೋಷಿಸಿ, ಅನುದಾನಿತ, ಅನುದಾನ ರಹಿತ ಪದವಿ ಕಾಲೇಜುಗಳಿಗೆ ರಜೆ ಘೋಷಿಸದೆ ಉನ್ನತ ಶಿಕ್ಷಣ ಇಲಾಖೆ ದೊಡ್ಡ ತಪ್ಪನ್ನು ಎಸಗಿದೆ. ಅಲ್ಲದೆ ಕೇವಲ 9 ದಿನ ದಸರಾ ರಜೆ ಘೋಷಿಸಲಾಗಿದ್ದು, ಅದರಲ್ಲಿ 5 ದಿನಗಳ ಕಾಲ ಸರ್ಕಾರಿ ರಜೆಯೇ ಇದ್ದು, 4 ದಿನ ಮಾತ್ರ ದಸರಾ ರಜೆ. ಇದು ತೀರಾ ಅವೈಜ್ಞಾನಿಕ ನಿರ್ಧಾರ ಎಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಟೀಕಿಸಿದ್ದಾರೆ.

ಶೇ.70ರಷ್ಟು ಅತಿಥಿ ಉಪನ್ಯಾಸಕರು ಸದರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರುಗಳನ್ನು ಈಗಾಗಲೇ ಸಂಪೂರ್ಣವಾಗಿ ಬಿಡುಗಡೆಗೊಳಿಸಲಾಗಿದೆ. ಕೇವಲ ಶೇಕಡ 30 ಖಾಯಂ ಅಧ್ಯಾಪಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪರೀಕ್ಷೆ, ಮೌಲ್ಯಮಾಪನ ನಡೆಸಲು ಕೆಲವು ಕಾಲೇಜುಗಳಲ್ಲಿ ಕೊಠಡಿಗಳು, ಅಧ್ಯಾಪಕರ ಕೊರತೆ ಇದೆ. ಈ ರೀತಿ ಮೂಲ ಸೌಕರ್ಯಗಳ ಕೊರತೆ ಇರುವಾಗ ತರಗತಿಗಳನ್ನು ನಡೆಸುವುದು ಹೇಗೆ ಸಾಧ್ಯ. ಈ ಎಲ್ಲಾ ಕಾರಣಗಳಿಂದ ಪರೀಕ್ಷೆ ಮತ್ತು ಮೌಲ್ಯಮಾಪನ ಅವಧಿಯಲ್ಲಿ ಒಂದು ತಿಂಗಳು ರಜೆ ನೀಡಲಾಗುತ್ತಿತ್ತು. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಈ ಎಲ್ಲಾ ವಿಷಯಗಳ ಬಗ್ಗೆ ವಾಸ್ತವಾಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸದೆ, ಮನಬಂದಂತೆ ಅಧಿಕಾರಿಗಳು ಅವೈಜ್ಞಾನಿಕವಾಗಿ 9 ದಿನಗಳ ರಜೆ ಘೋಷಿಸಿದ್ದಾರೆ. ಈ ಸಂಬಂಧ ಉನ್ನತ ಶಿಕ್ಷಣ ಇಲಾಖೆ ಅವೈಜ್ಞಾನಿಕ ಆದೇಶವನ್ನು ಮಾರ್ಪಡಿಸಿ, ಸರ್ಕಾರಿ, ಅನುದಾನಿತ, ಅನುದಾನ ರಹಿತ ಪದವಿ ಕಾಲೇಜುಗಳ ಅಧ್ಯಾಪಕರುಗಳ ಒಳಗೊಂಡಂತೆ ಕನಿಷ್ಟ 25 ದಿನಗಳ ಕಾಲ ಕಡ್ಡಾಯ ರಜೆ ಘೋಷಿಸಬೇಕು. ತಪ್ಪಿದಲ್ಲಿ ಸರ್ಕಾರದ ನಿಯಮಾವಳಿಯಂತೆ ಸದರಿ 25 ದಿನಗಳ ಅವಧಿಯನ್ನು ಗಳಿಕೆ ರಜೆ ಅವಧಿಯೆಂದು ಪರಿಗಣಿಸಬೇಕೆಂದು ಉನ್ನತ ಶಿಕ್ಷಣ ಸಚಿವರನ್ನು ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.



ಮೈಸೂರು ನಗರದ ವಸಂತಮ್ಮ ಅವರು, ಪತಿ ರಾಮಸಮುದ್ರ ನಾಗರಾಜ ಅವರ ನೆನಪಿನಲ್ಲಿ 75 ಸಾವಿರ ರೂ. ಪಾವತಿಸಿ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಆಫ್ರಿಕಾದ ಬೇಟೆ ಚಿರತೆಯನ್ನು ದತ್ತು ಸ್ವೀಕರಿಸಿದರು. ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ನಾಳೆ ತಮಟೆ ಪ್ರದರ್ಶನ

ಮೈಸೂರು, ಸೆ.30(ಎಂಟಿವೈ)– ಬಿಡುಗಡೆಗೂ ಮೊದಲೇ 2ನೇ ಮುದ್ರಣ ಕಂಡ ಕಾದಂಬರಿ ಆಧಾರಿತ 'ತಮಟೆ' ಚಲನಚಿತ್ರ ಅ.2ರಂದು ಮಧ್ಯಾಹ್ನ 1.15ಕ್ಕೆ ದಸರಾ ಚಲನ ಚಿತ್ರೋತ್ಸವದಲ್ಲಿ ಐನಾಕ್ಸ್‌ನಲ್ಲಿ ಪ್ರದರ್ಶಿತವಾಗುತ್ತಿದೆ ಎಂದು ಚಿತ್ರೋದ್ಯಮಿ ಮದನ್ ಪಟೇಲ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಮಟೆ ಬಾರಿಸುವ ಅಮಾಯಕನೊಬ್ಬ ತನ್ನ ತಮಟೆ ಕಳೆದುಕೊಂಡಾಗ ಅದನ್ನು ಮತ್ತೆ ಪಡೆಯಲು ಪಡುವ ಪಡಿಪಾಟಲು ಆಧಾರಿತ ಕಥೆ ಹೊಂದಿರುವ ಚಿತ್ರ ಇದಾಗಿದೆ ಸಂವಿಧಾನ ಆಶಯದ ಎಳೆಯೂ ಇದರಲ್ಲಿದೆ. ಇದು ಕಮರ್ಷಿಯಲ್ ದೃಷ್ಟಿ ಕೋನದಿಂದ ನೋಡುವ ಚಿತ್ರವಲ್ಲ ಎಂದರು. ಗೋಷ್ಠಿಯಲ್ಲಿ ನಿರ್ದೇಶಕ ಮಯೂರ್ ಪಟೇಲ್, ಶಾಂತರಾಜು, ರವೀಶ್, ನಂಜುಂಡಸ್ವಾಮಿ, ಇದ್ದರು.

ಮುರಳೀಧರಗೆ ಪಿಹೆಚ್.ಡಿ



ಮೈಸೂರು,ಸೆ.30–ಡಾ.ಬಿ.ಎಸ್.ಸುಬ್ರಮಣ್ಯ ಅವರ ಮಾರ್ಗದರ್ಶನದಲ್ಲಿ ತಲಕಾಡಿನ ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಎಸ್.ವಿ.ಮುರಳೀಧರ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕೊಯಮತ್ತೂರಿನ ಭಾರತೀಯರ್ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಿಇಟಿ ಪರಿಷ್ಕೃತ ರ್‍ಯಾಂಕಿಂಗ್ ಇಂದು ಪ್ರಕಟ

ಬೆಂಗಳೂರು: ಹೈಕೋರ್ಟ್ ಆದೇಶವನ್ನು ಮನ್ನಿಸಿ ಸಿದ್ಧಪಡಿಸಿರುವ ಸಿಇಟಿ ಪರಿಷ್ಕೃತ ರಾಂಕಿಂಗ್ ಪಟ್ಟಿಯನ್ನು ಅ.1ರ ಮಧ್ಯಾಹ್ನ 2 ಗಂಟೆಗೆ ಪ್ರಕಟಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ್ ತಿಳಿಸಿದ್ದಾರೆ. ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್ ಸೈಟ್ karresults.nic.in ನಲ್ಲಿ ನೋಡಬಹುದು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಆರೋಗ್ಯ ಶೀಘ್ರ ಸುಧಾರಿಸಲೆಂದು ಮೈಸೂರಿನ ವಿಜಯನಗರದ ಯೋಗಾ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ದೇವಸ್ಥಾನದ ಶ್ರೀ ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಈ ವೇಳೆ ಎಸ್.ಎಂ. ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಪ್ರದೀಪ್, ಶೇಷಾದ್ರಿ ಅಯ್ಯಂಗಾರ್, ವೆಂಕಟಸುಬ್ಬಯ್ಯ ಇದ್ದರು.

ಮೈಸೂರಲ್ಲಿ ಮೋಡ ಕವಿದ ವಾತಾವರಣ

ಮುಂದಿನ ಐದು ದಿನ ತುಂತುರು ಮಳೆ ಸಾಧ್ಯತೆ

ಮೈಸೂರು,ಸೆ.29(ಆರ್‌ಕೆಬಿ)– ಭಾರತೀಯ ಹವಾಮಾನ ಇಲಾಖೆ ಪ್ರಕಾರ ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಅ.1ರಿಂದ 5ರವರೆಗೆ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಬರುವ ಸಾಧ್ಯತೆ ಇದೆ. ಕೊಡಗಿನಲ್ಲಿ ಅ.1ರಂದು 15 ಮಿ.ಮೀ, 2ರಂದು 7 ಮಿ.ಮೀ, 3ರಂದು 6 ಮಿ.ಮೀ., 4 ಮತ್ತು 5ರಂದು ತಲಾ 5 ಮಿ.ಮೀ. ಮಳೆ ಬರಲಿದೆ. ಮೈಸೂರು ಜಿಲ್ಲೆಯಲ್ಲಿ ಇದೇ ಅವಧಿಯಲ್ಲಿ ಕ್ರಮವಾಗಿ 5, 5, 5, 4, 4 ಮಿ.ಮೀ. ಮಳೆ ಬರಲಿದೆ. ಚಾಮರಾಜನಗರ ಜಿಲ್ಲೆಯಲ್ಲಿಯೂ ಕ್ರಮವಾಗಿ 6, 5,5,5, 4 ಮಿ.ಮೀ. ಹಾಗೂ ಮಂಡ್ಯ ಜಿಲ್ಲೆಯಲ್ಲಿ ಕ್ರಮವಾಗಿ 7, 6, 5, 5, 4 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ.



ಈ ಅವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಗರಿಷ್ಠ 28 ಡಿಗ್ರಿ ಸೆಲ್ಸಿಯಸ್, ಕನಿಷ್ಟ 18 ಮಿ.ಮೀ., ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ 29ರಿಂದ 31, ಕನಿಷ್ಟ 20 ಮಿ.ಮೀ., ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ಮಳೆಯಾಗಲಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ದೀರ್ಘಾವಧಿ ಹವಾಮಾನ ಮನ್ಸೂಚನೆಯ ಪ್ರಕಾರ ಅ.7ರಿಂದ 13ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬಟ್ಟೆ ಅಂಗಡಿಯಲ್ಲಿ 1.45 ಲಕ್ಷ ನಗದು ಕಳವು

ಮೈಸೂರು, ಸೆ.30–ಬಟ್ಟೆ ಅಂಗಡಿಯ ಕ್ಯಾಶ್ ಡ್ರಾಯರ್‌ನಿಂದ 1.45 ಲಕ್ಷ ರೂ. ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಲಷ್ಕರ್ ಮೊಹಲ್ಲಾದ ಕುಂಬಾರಗೇರಿಯಲ್ಲಿರುವ 'ಮಹೇಶ್ ಕಲೆಕ್ಷನ್' ಬಟ್ಟೆ ಅಂಗಡಿ ಮಾಲೀಕ ರಂಜಿತ್ ಸಿಂಗ್ (26) ಅವರು ಸೆ.27ರಂದು ರಾತ್ರಿ ತಮ್ಮ ಅಂಗಡಿಯ ಕ್ಯಾಶ್ ಡ್ರಾಯರ್‌ನಲ್ಲಿ 1.47 ಲಕ್ಷ ರೂ.ಗಳನ್ನು ಇಟ್ಟು ಅಂಗಡಿ ಬೀಗ ಹಾಕಿಕೊಂಡು ಹೋಗಿದ್ದಾರೆ. ಮರುದಿನ ಬೆಳಗ್ಗೆ ಅಂಗಡಿ ಬಾಗಿಲು ತೆರೆದಾಗ ಕ್ಯಾಶ್ ಡ್ರಾಯರ್‌ನಲ್ಲಿ ಕೇವಲ 2 ಸಾವಿರ ರೂ. ಮಾತ್ರ ಇದ್ದು 1.45 ಲಕ್ಷ ರೂ.ಗಳನ್ನು ಕಳವು ಮಾಡಲಾಗಿದೆ. ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗರು ಕಳವು ಮಾಡಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ಅವರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ನೀರು ಸರಬರಾಜು ಸೇವಾ ಕೇಂದ್ರದಲ್ಲಿ ಕಳವು

ಮೈಸೂರು, ಸೆ.30–ಮೈಸೂರಿನ ಕಲ್ಯಾಣಗಿರಿಯಲ್ಲಿರುವ ನೀರು ಸರಬರಾಜು ಸೇವಾ ಕೇಂದ್ರದ ಬಾಗಿಲು ಮುರಿದು ಕಂಪ್ಯೂಟರ್ ಸೇರಿದಂತೆ ಕೆಲ ವಸ್ತುಗಳನ್ನು ಕಳವು ಮಾಡಿರುವ ಪ್ರಕರಣ ನಡೆದಿದೆ.

ಸೇವಾ ಕೇಂದ್ರದ ಕ್ಯಾಶ್ ಕಲೆಕ್ಟರ್ ಆಗಿರುವ ಸೈಫ್ ಉಲ್ಲಾ ಅವರು, ಸೆ.27ರಂದು ಮಧ್ಯಾಹ್ನ ಕೇಂದ್ರಕ್ಕೆ ಬೀಗ ಹಾಕಿಕೊಂಡು ಹೋಗಿದ್ದು, ಮರುದಿನ ಬೆಳಗ್ಗೆ 6.30ರಲ್ಲಿ ಹಿಂತಿರುಗಿದಾಗ ಸೇವಾ ಕೇಂದ್ರದ ಬಾಗಿಲು ಮುರಿದು ಖದೀಮರು ಕಂಪ್ಯೂಟರ್, ಸಿಪಿಯು, ಕೀ ಪ್ಯಾಡ್, ಮೌಸ್ ಮತ್ತು ಕ್ಯಾಶ್ ಕೌಂಟಿಂಗ್ ಮಿಷನ್ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದ ಇಂಜಿನಿಯರ್ ರಕ್ಷಿತ್ ಆರ್.ಕೆ.ಗೌಡ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : (ತಮ್ಮ ಹೊಸ ಕಾರಿನಲ್ಲಿ ಸುತ್ತಾಡಿ ಮನೆಗೆ ಹಿಂತಿರುಗುವಾಗ) "ಸೆಕೆ ಆಗ್ತಿದೆ. ಕಾರಿನ ಕಿಟಕಿಗಳನ್ನು ತೆಗೆದು ಬಿಡೋಣವೇ?"

ಹೆಂಡತಿ : "ಬೇಡ, ಬೇಡ. ಕಿಟಕಿ ತೆಗೆದಿದ್ದರೆ ಅಕ್ಕ ಪಕ್ಕದ ಮನೆಯವರು ನಮ್ಮ ಕಾರಿಗೆ ಎ.ಸಿ. ಇಲ್ಲ ಅಂದ್ಕೊತಾರೆ!"

ಮೈಸೂರು ಮಿತ್ರ

ಶನಿವಾರ, 1 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಲೋಕವನ್ನೇ ಬೆಳಗುವ ಸೂರ್ಯ ತನ್ನ ಸಾಮರ್ಥ್ಯಕ್ಕಾಗಿ ಹೆಮ್ಮೆ ಪಡುವುದಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಿತ್ತಿದ್ದನ್ನು ಬೆಳೆದುಕೋ

ನಾಲ್ವಡಿ ಪ್ರೇರಣೆಯಂತೆ ಕಾರ್ಯಪ್ರವೃತ್ತರಾದರೆ ನಾಡು ಸಮೃದ್ಧ

● ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ್ ಅಭಿಮತ ● ಮೈಸೂರಲ್ಲಿ ರಾಜರ್ಷಿ ನಾಲ್ವಡಿ ಜಯಂತಿ ● ಸರ್ವ ಜನರಿಗೂ ಸವಲತ್ತು ಕಲ್ಪಿಸಿದ ಮಹಾಪುರುಷ



ಮೈಸೂರು ಅರಮನೆ ಮುಂಭಾಗದ ಪರ್ಯಾಯ ವೇದಿಕೆಯಲ್ಲಿ ಶುಕ್ರವಾರ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಸಾಧಕರು ಹಾಗೂ ಸೇವಾ ಸಂಸ್ಥೆಗೆ 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ' ಪ್ರದಾನ ಮಾಡಿ, ಅಭಿನಂದಿಸಲಾಯಿತು. ಸಚಿವರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ್, ಎಸ್.ಟಿ.ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಸೆ.30(ಎಸ್‌ಬಿಡಿ)– ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರೇರಣೆಯಿಂದ ಪ್ರತಿಯೊಬ್ಬರೂ ತಮ್ಮ ಪಾಲಿನ ಜವಾಬ್ದಾರಿಯನ್ನು ಬದ್ಧತೆ, ಪ್ರಾಮಾಣಿಕತೆಯಿಂದ ಸಮರ್ಥವಾಗಿ ನಿಬಾಯಿಸಿದರೆ ಇಡೀ ರಾಜ್ಯ ಸಮೃದ್ಧವಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಅಭಿಪ್ರಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮೈಸೂರು ಮಹಾನಗರ ಪಾಲಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವ ಸಮಿತಿ, ಅರಸು ಬಳಗಗಳ ಒಕ್ಕೂಟದ ಸಹಯೋಗದಲ್ಲಿ ಅರಮನೆ ಮುಂಭಾಗದ ಪರ್ಯಾಯ ವೇದಿಕೆಯಲ್ಲಿ ಶುಕ್ರವಾರ ಆಯೋಜಿಸಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಡೀ ವಿಶ್ವದಲ್ಲೇ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರದ್ದು ಮಾದರಿ ಆಡಳಿತ. ಮೈಸೂರು ಮಾತ್ರವಲ್ಲದೆ ಇಡೀ ರಾಜ್ಯದ ಅಭಿವೃದ್ಧಿಗೆ ಅವರು ಶ್ರಮಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಆಳಿದ ಮಣ್ಣಿನಲ್ಲಿ ಹುಟ್ಟಿರುವುದು ನಮ್ಮೆಲ್ಲರ ಭಾಗ್ಯ. ಅವರು ಜನರಿಗೆ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟಿದ್ದ ಮಹಾನ್ ಪುರುಷರು. ರಾಜ್ಯದ ಯಾವ ಭಾಗದಲ್ಲಾದರೂ ರಾಜರ್ಷಿಯವರ ಸೇವೆಗೆ ಸಾಕ್ಷಿ ಸಿಗುತ್ತದೆ. ಅವರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಎಷ್ಟು ವರ್ಣಿಸಿದರೂ ಸಾಲದು. ಡಿವಿಜಿ ಅವರು ಹೇಳಿದಂತೆ ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಕಾಲ ಸುವರ್ಣ ಯುಗವಾಗಿತ್ತು ಎಂದು ಸ್ಮರಿಸಿಕೊಂಡರು.

ನಾಲ್ವಡಿ ಅವರಂತಹ ಮಹಾನ್ ಪುರುಷರು ಉದಾಹರಣೆಯಾಗಿ ಉಳಿಯಬಾರದು. ಅವರ ಪ್ರೇರಣೆ, ಆಶೀರ್ವಾದ ಪಡೆದು ಸರಿಯಾದ ಹಾದಿಯಲ್ಲಿ ನಡೆಯಬೇಕು. ನಮ್ಮ ವೃತ್ತಿಯಲ್ಲಿ ಗುಣಮಟ್ಟದ ಸೇವೆ ನೀಡುವ ಮೂಲಕ ಸಮಾಜದ ಬಡವರು, ಹಿಂದುಳಿದವರಿಗೆ ಕೈಲಾದಷ್ಟು ನೆರವಾಗಬೇಕು. ನಾಲ್ವಡಿ ಅವರ ಹೆಸರು ಕೇಳಿದಾಕ್ಷಣ ನನಗೆ ರೋಮಾಂಚನ ವಾಗುತ್ತದೆ. ನನಗೆ ಯಾವಾಗಲೂ ಅವರೇ ಸ್ಫೂರ್ತಿ. ಅವರ ಆಶೀರ್ವಾದದಿಂದ ಸಮೃದ್ಧ ನಾಡು ಕಟ್ಟಲು ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದರು.'

ನಾಡಹಬ್ಬ ದಸರಾ ಸಂದರ್ಭದಲ್ಲಿ ನಾಲ್ವಡಿ ಅವರ ಹೆಸರಿನಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಿ ಅಭಿನಂದಿಸುತ್ತಿರುವುದು ಸ್ತುತ್ಯಾರ್ಹವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಕಳೆದ ವರ್ಷದಿಂದ ಈ ಮಹತ್ವದ ಕಾರ್ಯಕ್ರಮ ನಡೆಯಲು ಪ್ರಮುಖ ಕಾರಣಕರ್ತರಾಗಿದ್ದಾರೆ. ಜಿಲ್ಲೆಯ ಅಭಿವೃದ್ಧಿಗಾಗಿ ಸೋಮಶೇಖರ್ ಅದ್ಭುತವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ನಾಡಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರವಾಗಿದ್ದು, ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಮೂಲಕ ಅವರ ಮಹತ್ತರ ಸಾಧನೆಯನ್ನು ಸ್ಮರಿಸಿಕೊಳ್ಳುವುದು ನಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು.

> ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಅಧ್ಯಕ್ಷನಾಗಿ 18 ತಿಂಗಳು ಕಾರ್ಯ ನಿರ್ವಹಿಸುವ ಭಾಗ್ಯ ನನಗೆ ಸಿಕ್ಕಿತ್ತು. ಅದರಿಂದಲೇ ಸಾವಿರಾರು ಕುಟುಂಬಗಳಿಗೆ ಸೂರು ಕಲ್ಪಿಸುವ ಸೇವೆ ಸಾಕಾರವಾಯಿತು. ನಾಲ್ವಡಿ ಅವರು ಸದಾ ಸ್ಫೂರ್ತಿ. ಪ್ರತಿಯೊಬ್ಬರೂ ತಮ್ಮ ಮನೆಯ ಮುಂದೆ, ರಸ್ತೆ ಬದಿಯಲ್ಲಿ ಗಿಡ ನೆಡುವ ಸಂಕಲ್ಪ ಮಾಡಬೇಕು. **-ಪ್ರಶಸ್ತಿ ಪುರಸ್ಕೃತ ಡಿ.ಮಾದೇಗೌಡರು**

ಹತ್ತು ಸಾಧಕರಿಗೆ ಪ್ರಶಸ್ತಿ: ಇದೇ ಸಂದರ್ಭದಲ್ಲಿ ವರ್ಣಚಿತ್ರಕಲೆ ಕ್ಷೇತ್ರದಲ್ಲಿ ಮೈಸೂರಿನ ಎಲ್.ಶಿವಲಿಂಗಪ್ಪ, ರೋಗಿಗಳ ಶುಶ್ರೂಷೆ(ಮಮತೆಯ ಮಡಿಲು)ಯಲ್ಲಿ ಮಂಡ್ಯದ ಕೆ.ಪಿ.ಅರುಣ್ ಕುಮಾರಿ, ವಿಶೇಷಚೇತನರ ಸಬಲೀಕರಣ ಸೇವೆಗೆ ಮೈಸೂರಿನ ರತ್ನ ಬಿ.ಶೆಟ್ಟಿ, ಸಮಾಜಸೇವೆ ಹಾಗೂ ಧರ್ಮದರ್ಶಿತ್ವ ಕ್ಷೇತ್ರದ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರು, ಜಾನಪದ ಕ್ಷೇತ್ರದಲ್ಲಿ ಚಾಮರಾಜನಗರದ ಸಿ.ಎಂ.ನರಸಿಂಹಮೂರ್ತಿ, ಪತ್ರಕರ್ತರಾದ ಮೈಸೂರಿನ ಬಿ.ಎಸ್.ಹರೀಶ್, ಸಮಾಜ ಸೇವೆಯಲ್ಲಿ ಹಾಸನದ ಜಿ. ಮಹಾಂತಪ್ಪ, ಶಿಕ್ಷಣ ಕ್ಷೇತ್ರದಲ್ಲಿ ಮೈಸೂರಿನ ಶ್ರೀಧರ ರಾಜೇ ಅರಸ್ ಹಾಗೂ ಸೇವಾಸಂಸ್ಥೆ ವಿಭಾಗದಲ್ಲಿ ಮೈಸೂರಿನ ಶಕ್ತಿಧಾಮಕ್ಕೆ (ಸಂಸ್ಥೆಯ ಸುಮನಾ ಪ್ರತಿನಿಧಿಸಿದ್ದರು) 'ರಾಜ್ಯ ಮಟ್ಟದ 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು. ಸಾಹಿತ್ಯ ಕ್ಷೇತ್ರದಲ್ಲಿ ಪ್ರಶಸ್ತಿಗೆ ಆಯ್ಕೆಯಾಗಿರುವ ಚಾಮರಾಜನಗರದ ಮಲೆಯೂರು ಗುರುಸ್ವಾಮಿ ಅವರು ಅನಾರೋಗ್ಯ ಕಾರಣದಿಂದ ಗೈರಾಗಿದ್ದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಲ್ಲಾ ಪಂಚಾಯಿತಿ ಸಿಇಒ ಡಾ.ಬಿ.ಆರ್. ಪೂರ್ಣಿಮಾ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರಾದ ಪ್ರೊ.ಸಿ.ನಾಗಣ್ಣ, ಪ್ರೊ.ಹಿ.ಶಿ.ರಾಮಚಂದ್ರೇಗೌಡ, ಸಾಹಿತ್ಯ ವಿಮರ್ಶಕ ಸತ್ಯನಾರಾಯಣ್ ಮತ್ತಿತರರು ಉಪಸ್ಥಿತರಿದ್ದರು.

ಮಳೆ ಕಾರಣದಿಂದ ಅರಮನೆ ಪ್ರಧಾನ ವೇದಿಕೆಯಿಂದ ಕಾರ್ಯಕ್ರಮವನ್ನು ಪಕ್ಕದ ಪರ್ಯಾಯ ವೇದಿಕೆಗೆ ಸ್ಥಳಾಂತರಿಸಲಾಯಿತು. ಪರಿಣಾಮ ಸಿದ್ಧತಾ ಕಾರ್ಯ ತಡವಾಗಿದ್ದರಿಂದ ಸಚಿವ ಎಸ್.ಟಿ. ಸೋಮಶೇಖರ್ ಅವರೇ ವೇದಿಕೆಯಲ್ಲಿ ನಿಂತು ಸಿದ್ಧತೆಗೆ ಸಲಹೆ ನೀಡಿದರು.

ನಿಮ್ಮ ಪತ್ರಗಳು

ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ

ಮಾನ್ಯರೆ,

ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೇ ದೇವತಾಃ
ಯತ್ರೈತಾಸ್ತು ನ ಪೂಜ್ಯಂತೆ ಸರ್ವಾಸ್ತತ್ರಾಫಲಾಃ ಕ್ರಿಯಾ.

ಎಂದರೆ ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಸಂತುಷ್ಟರಾಗಿರುತ್ತಾರೆ. ಸ್ತ್ರೀಯರನ್ನೆಲ್ಲಿ ಅವಮಾನಗೊಳಿಸಲಾಗುತ್ತದೋ ಅಲ್ಲಿ ಮಾಡಿದ ಕಾರ್ಯಗಳೆಲ್ಲವೂ ವ್ಯರ್ಥ ಎಂದು. ಈ ಮಾತು ಭಾರತೀಯ ಪರಂಪರೆಯಲ್ಲಿ ಹೆಣ್ಣಿಗಿರುವ ಉನ್ನತ ಸ್ಥಾನವನ್ನು ಸೂಚಿಸುತ್ತದೆ.

ಇದೆ ಹಾದಿಯಲ್ಲಿ ಭಾರತ ದೇಶ ಸರ್ವೋಚ್ಚ ನ್ಯಾಯಾಲಯವು ಪ್ರತಿಯೊಬ್ಬ ಮಹಿಳೆಯರು ಸುರಕ್ಷಿತ ಮತ್ತು ಕಾನೂನು ಬದ್ದ ಗರ್ಭಪಾತಕ್ಕೆ ಆರ್ಹರೆಂದು ಮಹತ್ವದ ತೀರ್ಪು ನೀಡುವ ಮೂಲಕ ಬಲವಂತದ ಗರ್ಭಪಾತದಿಂದ ಮಹಿಳೆಯರಿಗಾಗುತ್ತಿದ್ದ ತೊಂದರೆಯನ್ನು ಕಡಿಮೆ ಮಾಡಿದಂತಾಗಿದೆ.

ಅತ್ಯಚಾರಕ್ಕೆ ಒಳಗಾದ ಮಹಿಳೆಯರು ಮಕ್ಕಳನ್ನು ಹೆತ್ತರೆ ಅವರ ಪಾಲನೆ ಪೋಷಣೆ ಮಾಡುವುದು ಕಷ್ಟವಾಗಿರುತ್ತದೆ ಮತ್ತು ಹಾಗೆ ಹುಟ್ಟಿದ ಮಕ್ಕಳಿಗೆ ಅನಾಥ ಪ್ರಜ್ಞೆ ಕಾಡುವುದು ಸಾಮಾನ್ಯವಾಗಿರುತ್ತದೆ. ಒಪ್ಪಿಗಿಯಿಲ್ಲದೆ ಬಲವಂತವಾಗಿ ಗರ್ಭಿಣಿಯಾದ ಮಹಿಳೆಯರ ಆರೋಗ್ಯದ ದೃಷ್ಟಿಯಿಂದಲು ಗರ್ಭಪಾತ ಮಾಡಿಸಿಕೊಳ್ಳವುದು ಒಳ್ಳೆಯ ಕ್ರಮವಾಗಿದೆ.

ವೈದ್ಯಕೀಯ ಗರ್ಭಪಾತ ಮಸೂದೆ ನಿಯಮಗಳಡಿಯಲ್ಲಿ ಮಹಿಳೆಯರು ಗರ್ಭಪಾತ ಮಾಡಿಸುವ ಹಕ್ಕನ್ನು 24 ವಾರಗಳ ಹೊಂದಿರುತ್ತಾರೆಂದು ತ್ರೀಸದಸ್ಯ ಪೀಠ ತಿಳಿಸಿದೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಬಿ ವೈ ಚಂದ್ರಚೂಡ ನೇತೃತ್ವದ ತ್ರಿಸದಸ್ಯ ಪೀಠದ ಈ ತೀರ್ಪು ಅಸಂಖ್ಯಾತ ಬಡ ಮತ್ತು ದುರ್ಬಲ ಮಹಿಳೆಯರ ಪಾಲಿಗೆ ಆಶಾದಾಯಕವಾಗಿದೆ. ಸರ್ವೋಚ್ಚ ನ್ಯಾಯಾಲಯದ ಈ ತೀರ್ಪು ಸ್ವಾಗತಾರ್ಹ ಬೆಳವಣಿಗೆಯಾಗಿದ್ದು, ಭಾರತ ದೇಶದ ಎಲ್ಲಾ ಮಹಿಳೆಯರ ಪರವಾಗಿ ನ್ಯಾಯಾಲಯಕ್ಕೆ ಧನ್ಯವಾದಗಳನ್ನು ಅರ್ಪಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ಜಯಲಕ್ಷ್ಮಿ ವಿಲಾಸ ಅರಮನೆಗಿಲ್ಲ ದಸರೆ ವೈಭವ

ಮಾನ್ಯರೆ,



ಈ ಬಾರಿ ಮೈಸೂರು ನಗರದಲ್ಲಿ ದಸರೆ ವೈಭವವು ಇಮ್ಮಡಿಯಾಗಿದೆ. ಇಡೀ ನಗರವೇ ದೀಪದ ಬೆಳಕಿನಲ್ಲಿ ಝಗಮಗಿಸುತ್ತಿದೆ. ವೃಕ್ಷಗಳು, ರಸ್ತೆಗಳು, ವಿವಿಧ ಕಟ್ಟಡಗಳು, ಸ್ಮಾರಕಗಳು, ಪ್ರತಿಮೆಗಳು, ಪಾರಂಪರಿಕ ಕಟ್ಟಡಗಳು ಹೀಗೆ ಎಲ್ಲಾ ಕಡೆ ದೀಪಾಲಂಕೃತಗೊಂಡು ಪಾರಂಪರಿಕ ಕಟ್ಟಡಗಳು ಅದ್ಭುತವಾಗಿ ಕಾಣುತ್ತಿವೆ. ಆದರೆ, ಏನು ಶಾಪವೋ ಕಾಣೆ ಮೈಸೂರಿನ ಅರಮನೆಗೂ ಮುಂಚೆಯೇ ನಾಲ್ವಡಿ ಕೃಷ್ಣರಾಜ ಒಡೆಯರಿಂದ ನಿರ್ಮಾಣಗೊಂಡ" ಜಯಲಕ್ಷ್ಮಿ ವಿಲಾಸ ಅರಮನೆ" ಯಾವುದೇ ವೈಭವವಿಲ್ಲದೆ ಹಳೆಯ ಬಂಗಲೆಯಂತೆ ಕಾಣುತ್ತಿದೆ. ಜಯಲಕ್ಷ್ಮಿ ವಿಲಾಸ ಅರಮನೆಯು ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿದ್ದು ಇದು ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಿದೆ. ಇದನ್ನು ವಸ್ತು ಸಂಗ್ರಹಾಲಯವಾಗಿಯೂ ಸಹ ಮಾರ್ಪಾಡು ಮಾಡಲಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಅರಮನೆಯು ಶೀತಲಾವಸ್ಥೆ ತಲುಪಿದ್ದು ಸರಿಯಾದ ಮೇಲ್ವಿಚಾರಣೆ ಇಲ್ಲದೆ ಅರಮನೆಯ ಮಾಳಿಗೆಗಳು ಸೋರುತ್ತಿವೆ. ದಸರಾ ಸಂದರ್ಭದಲ್ಲಿ ಇದನ್ನು ಸರಿಪಡಿಸುವ ಕೆಲಸ ಮಾಡಬೇಕು. ಇಡಿ ಮೈಸೂರು ದೀಪಾಲಂಕಾರದಿಂದ ಕಂಗೊಳಿಸುತ್ತಿರುವಾಗ ಜಯಲಕ್ಷ್ಮಿ ಅರಮನೆಯು ಇದರಿಂದ ವಂಚಿತವಾಗಿ ರಾತ್ರಿ ಸಮಯದಲ್ಲಿ ಒಂದು ವಿದ್ಯುತ್ ದೀಪವು ಸಹ ಇಲ್ಲದೆ ಕತ್ತಲೆಯಲ್ಲಿ ಕಾಲ ಕಳೆಯುತ್ತಿದೆ. ಇಲ್ಲಿಗೆ ಬರುವ ಪ್ರವಾಸಿಗರು ಹಾಗೂ ವಿದ್ಯಾರ್ಥಿಗಳು ಜಯಲಕ್ಷ್ಮಿ ಅರಮನೆಯ ಸ್ಥಿತಿಗೆ ಮರುಗುತಿದ್ದಾರೆ. ಸರ್ಕಾರ ಹಾಗೂ ಸಂಬಂಧಪಟ್ಟವರು ಈ ಪಾರಂಪರಿಕ ಕಟ್ಟಡವನ್ನು ಉಳಿಸುವ ಕಡೆ ಗಮನ ಹರಿಸಬೇಕು ಹಾಗೂ ದಸರೆ ಸಂದರ್ಭದಲ್ಲಿ ಅರಮನೆಗೆ ದೀಪಾಲಂಕಾರ ಮಾಡಬೇಕೆಂದು ಸಾರ್ವಜನಿಕರ ಮನವಿ.

–ಲಕ್ಷ್ಮಿ ಕಿಶೋರ್ ಅರಸ್, ಯುವ ಲೇಖಕರು, ಮಾನಸಗಂಗೋತ್ರಿ, ಮೈಸೂರು

ಧ್ವನಿವರ್ಧಕದ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರು–ಹುಣಸೂರು ಮುಖ್ಯರಸ್ತೆಯ ಪಡುವಾರಹಳ್ಳಿ ಬಳಿಯಿರುವ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಯ ಸಂಬಂಧ ಆಗಾಗ್ಗೆ ಒಂದಲ್ಲ ಒಂದು ಕಾರ್ಯಕ್ರಮದ ಅಭ್ಯಾಸವನ್ನು ಅಲ್ಲಿನ ವಿದ್ಯಾರ್ಥಿಗಳಿಗೆ ಮಾಡಿಸುತ್ತಿರುತ್ತಾರೆ. ಈಗ ಶಾಲೆಗೆ ರಜೆ ಇರುವುದರಿಂದ ಮೂರು ದಿನಗಳ ಕಾಲ ಕಾರ್ಯಕ್ರಮದ ಅಭ್ಯಾಸ ನಡೆಯಿತು. ಹೀಗೆ ಅಭ್ಯಾಸದಲ್ಲಿ ತೊಡಗುವ ವಿದ್ಯಾರ್ಥಿಗಳಿಗೆ ಧ್ವನಿವರ್ಧಕದ ಮೂಲಕ ಜೋರಾದ ಶಬ್ದದೊಂದಿಗೆ (ಆಂಗ್ಲಭಾಷೆಯಲ್ಲಿ ಮಾತ್ರ) ಹೇಳಿಕೊಡುತ್ತಾರೆ. ಅದು ಎಷ್ಟರ ಮಟ್ಟಿಗೆ ಅಂದರೆ, ಸುತ್ತಮುತ್ತಲಿನ ಸುಮಾರು ಒಂದು ಕಿಲೋಮೀಟರ್ ದೂರಕ್ಕೂ ಅದು ಕೇಳಿಸುವ ಹಾಗೆ! ಇದರಿಂದ, ಅಕ್ಕಪಕ್ಕದಲ್ಲೇ ಇರುವ ವಿದ್ಯಾಶ್ರಮ, ಕರ್ನಾಟಕ ರಾಜ್ಯ ಮುಕ್ತ ವಿವಿ ಹಾಗೂ ಮೈಸೂರು ವಿವಿಯಲ್ಲಿನ ವಿದ್ಯಾರ್ಥಿಗಳು ಹಾಗೂ ನೌಕರರಿಗೆ ಬಹಳ ಕಿರಿಕಿರಿಯಾಗುತ್ತಿದೆ. ಹೀಗಾಗಿ, ಸಂಬಂಧಪಟ್ಟವರು ಧ್ವನಿವರ್ಧಕದ ಶಬ್ದ ಸಂಸ್ಥೆಯ ಆವರಣಕ್ಕೆ ಮಾತ್ರ ಸೀಮಿತವಾಗುವಂತೆ ಸೂಕ್ತ ತಿಳುವಳಿಕೆ ನೀಡಿ ಜೋರಾದ ಕರ್ಕಶ ಶಬ್ದದಿಂದ ಮುಕ್ತಿ ನೀಡಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಸಮಿ(ನ್ಮ)ತಿ!

ಮಾನ್ಯರೆ,

ಯಾವುದೇ ವಿಷಯ ಚರ್ಚಾಸ್ಪದವಾದಾಗ, ಸರ್ವಾನುಮತದಿಂದ ತೆಗೆದುಕೊಳ್ಳುತ್ತಾರೆ ತೀರ್ಮಾನ: "ಮುಂದೆ ನೋಡಿಕೊಳ್ಳೋಣ; ಸದ್ಯಕ್ಕೆ ರಚಿಸಿ ಅದಕ್ಕೊಂದು ಸಮಿತಿ!" ಸಮಿತಿ, ಗಿಮಿತಿ, ತಿಥಿ ಯಾವುದೂ ಬೇಕಿಲ್ಲ; ಇದ್ದರೆ ಸಾಕಲ್ಲವೆ ಸನ್ಮತಿ?

ಆಶಾವಾದ : ಹಿಂದೊಮ್ಮೆ ನಾನು ಮತ್ತು ಎಚ್.ಡಿ. ಕುಮಾರಸ್ವಾಮಿ ಯಾವುದೋ ಸಮಾರಂಭದಲ್ಲಿ ಭಾಗವಹಿಸಿದ್ದೆವು. (ಆಗ ಅವರು ಮುಖ್ಯಮಂತ್ರಿಯಾಗಿರಲಿಲ್ಲ). ನಾನು ಇಂದಿನ ಪರಿಸ್ಥಿತಿಯ ಬಗೆಗೆ ನಿರಾಶೆಯಿಂದ ಮಾತನಾಡಿದೆ. ಎಚ್‌ಡಿಕೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ನನ್ನ ತೀರ್ಥರೂಪ ಸಮಾನರಾದ ಸಿಪಿಕೆಯವರೇ!" ಎಂದು ನನ್ನನ್ನು ವಿನಯದಿಂದ ಸಂಬೋಧಿಸಿ ನನ್ನ ನಿರಾಶಾವಾದವನ್ನು ಮೃದುವಾಗಿ ಖಂಡಿಸಿದರು! (ರಾಜಕಾರಣಿಗಳು ಸದಾ ಆಶೀರ್ವಾದದಿಂದ ಇರಬೇಕು).

ಗೊಂದಲ : ನನ್ನ ಸೆ. 26ರ ಗಂರ(ರು)ವೇ' ಪತ್ರದಲ್ಲಿ ತುಸು ಗೊಂದಲಕ್ಕೆ ಆಸ್ಪದವಾಗಿದೆ. ಅಚ್ಚಿನ ತಪ್ಪುಗಳಿಂದ ಅದಕ್ಕಾಗಿ ವಿಷಾದಿಸುತ್ತೇನೆ. ಸಾರಾಂಶವಿಷ್ಟು : 'ಗುರವೇ' ಸರಿ: 'ಗುರುವೇ' ತಪ್ಪು.

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.

ದಸರಾ ಕ್ರೀಡಾಕೂಟದಲ್ಲಿ ಸೆಣಸಾಟದ ನಡುವೆ ಹಲವರು ಯಶಸ್ವಿ ಪದಕ ಬೇಟೆ

ಮೈಸೂರು, ಸೆ.30(ಎಂಕೆ)– ರಾಜ್ಯಮಟ್ಟದ ದಸರಾ ಕ್ರೀಡಾಕೂಟದ ಮೊದಲ ದಿನವೇ ಕ್ರೀಡಾಪಟುಗಳು ಪದಕ ಬೇಟೆ ಆರಂಭಿಸಿದ್ದಾರೆ.

ಏರ್ ಪಿಸ್ತೂಲ್: ಪುರುಷರ ವಿಭಾಗದಲ್ಲಿ ಇವ್ರೋಜ್ ಅಹಮದ್ ಚಿನ್ನ, ಜೋನಾಥನ್ ಗವಿ ಬೆಳ್ಳಿ ಹಾಗೂ ರಕ್ಷಿತ್ ಶಾಸ್ತ್ರಿ ಕಂಚಿನ ಪದಕ ಗೆದ್ದರು. ಮಹಿಳೆಯ ವಿಭಾಗದಲ್ಲಿ ಸೆಮಲ್ ಫಾತಿಮಾ ಚಿನ್ನ, ಪೂರ್ವಿ ನಾಯ್ಕ್ ಬೆಳ್ಳಿ ಹಾಗೂ ವಿನುತ ಲಕಮನಹಳ್ಳಿ ಕಂಚಿನ ಸಾಧನೆ ಮಾಡಿದರು. **ಏರ್ ರೈಫಲ್:** ಪುರುಷರ ವಿಭಾಗದಲ್ಲಿ ಆಕಾಶ್ ಪ್ರಸಾದ್ ನೋನಿಯಾ ಚಿನ್ನ, ರಾಮ್ ಅಯಾಲಸೋಮಯಾಜುಲಾ ಬೆಳ್ಳಿ ಹಾಗೂ ಪವನ್ ಕೆ ರಾವ್ ಕಂಚು ಗೆದ್ದರು.

ಸೈಕ್ಲಿಂಗ್: ಪುರುಷರ ವಿಭಾಗದಲ್ಲಿ(80 ಕಿ.ಮೀ) ಮೈಸೂರಿನ ಕೆ.ವಿ.ವೈಶಾಕ್ ಪ್ರಥಮ, ಬಿಜಾಪುರದ ಉದಯ್ ಗುಳೇದ್ ದ್ವಿತೀಯ ಹಾಗೂ ರಾಘವೇಂದ್ರ ವಂದಾಲ ತೃತೀಯ ಬಹುಮಾನ ಗೆದ್ದ ಸಾಧನೆ ಮಾಡಿದರು. ಮಹಿಳೆಯರ ವಿಭಾಗದಲ್ಲಿ(50 ಕಿ.ಮೀ) ಬಿಜಾಪುರದ ಫಾಯಲ್ ಚವ್ಹಾಣ್ ಚಿನ್ನ, ಬಾಗಲಕೋಟೆಯ ಕೀರ್ತಿ ನಾಯಕ್ ಬೆಳ್ಳಿ ಹಾಗೂ ಬಿಜಾಪುರದ ಛಾಯಾ ಎನ್.ನಾಗಶೆಟ್ಟಿ ಕಂಚಿನ ಸಾಧನೆ ಮಾಡಿದರು.

ಫೆನ್ಸಿಂಗ್: ಇಪಿ(Epee) ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಲಕ್ಷ್ಮಿ ಚಿನ್ನ, ಶ್ರೀವಿದ್ಯಾ ಬೆಳ್ಳಿ, ಲೇಖನ ಹಾಗೂ ಲತಾ ಕಂಚಿನ ಸಾಧನೆ ಮಾಡಿದರು. ಫಾಯಿಲ್(Foil) ವಿಭಾಗದಲ್ಲಿ ಬೆಂಗಳೂರಿನ ಸೈಯದಾ ಪ್ರಥಮ, ಅಮೃತಾ ದ್ವಿತೀಯ, ಧೃತಿಕಾ ಎನ್.ಅಂದನ್ ತೃತೀಯ ಸ್ಥಾನ ಪಡೆದರೆ, ಲೆಟಿಟಿಯಾ ಗಿಲ್ಬರ್ಟ್ ನಾಲ್ಕನೆ ಸ್ಥಾನ ಪಡೆದುಕೊಂಡರು.

4x400 ಮೀಟರ್ ರಿಲೆ ಓಟ: ಮಹಿಳೆಯ ವಿಭಾಗದಲ್ಲಿ ಮೈಸೂರಿನ ಪಿ.ಚೈತ್ರ, ದೀಪಶ್ರೀ, ಹೆಚ್.ಎಂ.ಸಹನಾ ತಂಡ ಪ್ರಥಮ ಸ್ಥಾನ, ಬೆಳಗಾವಿಯ ಎಂ.ಮೇಘ, ಕೆ.ಜ್ಯೋತಿ, ವಚನಶ್ರೀ ಹಾಗೂ ಬಿ.ವೈಭವಿ ತಂಡ ದ್ವಿತೀಯ ಹಾಗೂ ಬೆಂಗಳೂರಿನ ಎಂ.ಕೃತಿಕಾ ಲಕ್ಷ್ಮಿ, ಡಿ.ಹರಿಪ್ರಿಯಾ, ಆರ್.ಉಷಾ ಹಾಗೂ ಪಿ.ಜೆ.ಸ್ನೇಹ ತಂಡ ತೃತೀಯ ಸ್ಥಾನ ಪಡೆಯಿತು.



ಪುರುಷರ ವಿಭಾಗದಲ್ಲಿ ಮೈಸೂರಿನ ಸಿ.ಸುಪ್ರೀತ್, ಎಂ.ಸಿ.ಮಿಲನ್, ಸಿ.ಗುರುಪ್ರಸಾದ್ ಹಾಗೂ ಜೆ.ನಟರಾಜ್ ತಂಡ ಪ್ರಥಮ, ಬೆಂಗಳೂರಿನ ಎಂ.ಎನ್. ಶಿವಕುಮಾರ್, ಎ.ಶ್ರೀನಾಥ್, ಬಿ.ಜಿ.ಯಶವಂತ್ ಹಾಗೂ ಟಿ.ಹೆಚ್.ದೇವಯ್ಯ ತಂಡ ದ್ವಿತೀಯ ಹಾಗೂ ಬೆಳಗಾವಿಯ ಸಮೀರ್ ಜಾಮ್ದಾರ್, ಮಣಿಕಾಂತ್ ಮಡಿವಾಳರ್, ಶ್ರೀನಾಥ ದಳವಿ, ಪ್ರಸನ್ನ ಕುಮಾರ್ ತೃತೀಯ ಸ್ಥಾನ ಪಡೆಯಿತು.

100 ಮೀಟರ್ ಓಟ: ಪುರುಷರ ವಿಭಾಗದಲ್ಲಿ ಬೆಂಗಳೂರಿನ ಜೋನಾಥನ್ ಸ್ಯಾಮ್ಯುಯೆಲ್ ಜಾರ್ಜ್ ಪ್ರಥಮ, ಮೈಸೂರಿನ ಸುಮನ್ ಕುಲಾಲ್ ದ್ವಿತೀಯ ಹಾಗೂ ಬೆಂಗಳೂರಿನ ಸುಸರ್ಲಾ ಶ್ರೇಯಸ್ ತೃತೀಯ ಸ್ಥಾನ ಪಡೆದರು. **ಮಹಿಳೆಯರ ವಿಭಾಗದಲ್ಲಿ** ಮೈಸೂರಿನ ಹೆಚ್.ಆರ್.ನವಮಿ ಪ್ರಥಮ, ಬೆಂಗಳೂರಿನ ಪಿ.ಜೆ.ಸ್ನೇಹ ದ್ವಿತೀಯ ಹಾಗೂ ಮೈಸೂರಿನ ಆರ್.ಹರ್ಷಿಣಿ ತೃತೀಯ ಸ್ಥಾನ ಗೆದ್ದರು.

800 ಮೀಟರ್ ಓಟ: ಪುರುಷರ ವಿಭಾಗದಲ್ಲಿ ಬೆಂಗಳೂರಿನ ಟಿ.ಹೆಚ್.ದೇವಯ್ಯ ಪ್ರಥಮ, ಬೆಂಗಳೂರು ಗ್ರಾಮಾಂತರದ ಆಕಾಶ್ ಗೊಲ್ಲರ್ ದ್ವಿತೀಯ ಹಾಗೂ ಕೆ.ಎ.ಭರತ್ ತೃತೀಯ ಸ್ಥಾನ ಪಡೆದರು. **ಮಹಿಳೆಯ ವಿಭಾಗದಲ್ಲಿ** ಮೈಸೂರಿನ ಹೆಚ್.ಎಂ.ಸಹನಾ ಪ್ರಥಮ, ಬೆಂಗಳೂರಿನ ಆರ್.ಉಷಾ ದ್ವಿತೀಯ ಹಾಗೂ ಮೈಸೂರಿನ ಪಿ.ಚೈತ್ರ ತೃತೀಯ ಸ್ಥಾನ ಪಡೆದಿದ್ದಾರೆ.

ಗುಂಡು ಎಸೆತ: ಮಹಿಳೆಯ ವಿಭಾಗದಲ್ಲಿ ಮೈಸೂರಿನ ಶಿಲ್ಪಾ ಪ್ರಥಮ, ಬೆಂಗಳೂರಿನ ನಿವೇತಾ ದ್ವಿತೀಯ ಹಾಗೂ ಬೃಂದಾ ಎಸ್ ಗೌಡ ತೃತೀಯ ಬಹುಮಾನ ಪಡೆದರು. ಪುರುಷರ ವಿಭಾಗದಲ್ಲಿ ಮೈಸೂರಿನ ಬಿ.ಮನುಷ್ ಪ್ರಥಮ, ರಾಹುಲ್ ಕಶ್ಯಪ್ ದ್ವಿತೀಯ ಹಾಗೂ ಬೆಂಗಳೂರಿನ ಬಲಕುಂದಿ ಕಾರ್ತಿಕ್ ತೃತೀಯ ಬಹುಮಾನ ಗೆದ್ದರು.

ಉದ್ದ ಜಿಗಿತ: ಮಹಿಳೆಯ ವಿಭಾಗದಲ್ಲಿ ಮೈಸೂರಿನ ಶ್ರೀದೇವಿಕಾ ಪ್ರಥಮ, ಬೆಳಗಾವಿಯ ಸ್ಮಿತಾ ಕಾಕತ್ಕರ್ ದ್ವಿತೀಯ ಹಾಗೂ ರೇಷ್ಮಾ ತೃತೀಯ ಸ್ಥಾನ ಪಡೆದರು. ಪುರುಷರ ವಿಭಾಗದಲ್ಲಿ ಬೆಂಗಳೂರಿನ ಆರ್.ರಾಧಕೃಷ್ಣನ್ ಪ್ರಥಮ, ಬೆಳಗಾವಿಯ ಜಾಫರ್ ಖಾನ್ ಸೌಕಾರ್ ದ್ವಿತೀಯ ಹಾಗೂ ಬೆಂಗಳುರು ಗ್ರಾಮಾಂತರದ ಸೈಯದ್ ಇರ್ಫಾನ್ ತೃತೀಯ ಸ್ಥಾನ ಪಡೆದರು.

ಈಜು: 400 ಮೀಟರ್ ಫ್ರೀಸ್ಟೈಲ್ ವಿಭಾಗದಲ್ಲಿ ಮೈಸೂರಿನ ಎನ್.ದೋನಿಷ್ ಪ್ರಥಮ, ಬೆಂಗಳೂರಿನ ಬಿ.ಮನೋಜ್ ನಾಯಕ್ ದ್ವಿತೀಯ, ಅನಿಶ್ ಅಚ್ಯುತ ತೃತೀಯ ಸ್ಥಾನ ಪಡೆದರು. **100 ಮೀಟರ್ ಬಟರ್ ಫ್ಲೈನಲ್ಲಿ** ಬೆಂಗಳೂರಿನ ಕಾರ್ತಿಕೆಯನ್ ನಾಯರ್ ಪ್ರಥಮ, ರಾಜ್ ವಿನಾಯಕ್ ದ್ವಿತೀಯ, ಬೆಂಗಳೂರು ಗ್ರಾಮಾಂತರದ ಮಣಿಕಂಠ್ ಲಕ್ಷ್ಮೀಶನ್ ತೃತೀಯ ಸ್ಥಾನ ಪಡೆದರು. **200 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ** ಬೆಂಗಳೂರಿನ ಬಿ.ಜತಿನ್ ಪ್ರಥಮ, ಕೆ.ಕುಶಾಲ್ ದ್ವಿತೀಯ ಹಾಗೂ ಬೆಳಗಾವಿಯ ಸಂತ್ ಅವದೂತ್ ಅನಂತ್‌ಭಟ್ ತೃತೀಯ ಸ್ಥಾನ ಪಡೆದರು. **100 ಮೀಟರ್ ಬ್ಯಾಕ್ಸ್ ಸ್ಟ್ರೋಕ್‌ನಲ್ಲಿ** ಬೆಂಗಳೂರು ಗ್ರಾಮಾಂತರದ ಮಣಿಕಂಠ ಲಕ್ಷ್ಮಣ್ ಪ್ರಥಮ, ಮೈಸೂರಿನ ಸೂರ್ಯ ಜೋಯಪ್ಪ ದ್ವಿತೀಯ ಹಾಗೂ ಬೆಂಗಳೂರಿನ ಶ್ರೇಯಸ್ ಮಂಜುನಾಥ್ ತೃತೀಯ ಸ್ಥಾನ ಪಡೆದರು. **200 ಮೀಟರ್ ವೈಯಕ್ತಿಕ ವಿಭಾಗದಲ್ಲಿ** ಬೆಂಗಳೂರಿನ ರಾಜ್ ವಿನಾಯಕ್ ಪ್ರಥಮ, ಬಿ.ಜತಿನ್ ದ್ವಿತೀಯ ಹಾಗೂ ಸೂರ್ಯ ಜೋಯಪ್ಪ ತೃತೀಯ ಬಹುಮಾನ ಗೆದ್ದರು.





ರಾಜ್ಯದಲ್ಲಿ ಪಿಎಫ್‌ಐನ 42 ಕಚೇರಿಗಳು ಮುಟ್ಟುಗೋಲು

● ಗೃಹಸಚಿವ ಆರಗ ಜ್ಞಾನೇಂದ್ರ ಮಾಹಿತಿ ● ಜ್ಯೋತಿನಗರದಲ್ಲಿ ಡಿಎಆರ್ ಕಚೇರಿ ಕಟ್ಟಡ ಉದ್ಘಾಟನೆ



ಮೈಸೂರು, ಸೆ.30(ಜಿಎ)– ರಾಜ್ಯದಲ್ಲಿ ಗುರುವಾರ ಸಂಜೆಯವರೆಗೆ 42 ಪಿಎಫ್‌ಐ ಕಚೇರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ತರುವಂತಹ ಯಾವುದೇ ಚಟುವಟಿಕೆಗಳು ನಡೆಯಲು ಬಿಡುವುದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಎಚ್ಚರಿಕೆ ನೀಡಿದರು.

ಮೈಸೂರಿನ ಜ್ಯೋತಿ ನಗರದ ಡಿಎಆರ್ ಮೈದಾನದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ಡಿಎಆರ್ ಘಟಕದ ಆಡಳಿತ ಕಚೇರಿ ಮತ್ತು ಶಸ್ತ್ರಾಗಾರ ಕಟ್ಟಡ ಲೋಕಾರ್ಪಣೆಗೊಳಿಸಿ, ಮಾಧ್ಯಮಗಳೊಂದಿಗೆ ಮಾತನಾಡಿದರು.

ಪೊಲೀಸರು ನೆಮ್ಮದಿಯಿಂದ ಕೆಲಸ ಮಾಡಲು ಕಚೇರಿ, ನೆಮ್ಮದಿ ಬದುಕಿಗೆ ಮನೆಗಳನ್ನು ನಿರ್ಮಿಸಿ ಕೊಡಲು ರಾಜ್ಯ ಸರಕಾರ ಬದ್ದವಾಗಿದ್ದು, ರಾಜ್ಯದೆಲ್ಲೆಡೆ ಈ ವರ್ಷ 200 ಕೋಟಿ ರೂ. ವೆಚ್ಚದಲ್ಲಿ 117 ಪೊಲೀಸ್ ಠಾಣೆ ನಿರ್ಮಾಣ ಮಾಡಲಾಗುತ್ತಿದೆ. ಗೃಹ 20–25 ಯೋಜನೆಯಡಿ 11 ಸಾವಿರ ಪೊಲೀಸರಿಗೆ ಮನೆ ನಿರ್ಮಾಣ ಮಾಡಲಾಗುತ್ತಿದೆ. ನೆಮ್ಮದಿಯಿಂದ ಪೊಲೀಸರು ಕೆಲಸ ಮಾಡಲು, ವಾಸಿಸಲು ಅಗತ್ಯವಾದ ವ್ಯವಸ್ಥೆಯನ್ನು ಸರಕಾರ ಮಾಡುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಅಪರಾಧಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಪ್ರಮಾಣ ಕಡಿಮೆಯಾಗುತ್ತಿದ್ದು, ಈ ನಿಟ್ಟಿನಲ್ಲಿ ಅಪರಾಧಿಗಳು ತಪ್ಪಿಸಿಕೊಳ್ಳದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸರ ಕೈ ಬಲಪಡಿಸಲಾಗುತ್ತಿದೆ. ಹಲವಾರು ವರ್ಷಗಳಿಂದ ಈ ರೀತಿಯ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಬೇಕು ಎಂಬ ಆಶಯ ಸರ್ಕಾರದಾಗಿತ್ತು. ಆದರೆ, ಕಾರಣಾಂತರದಿಂದ ಸಾಧ್ಯವಾಗಿರಲಿಲ್ಲ. ಈಗ ಪೂರ್ಣಗೊಂಡು ಲೋಕಾರ್ಪಣೆಯಾಗಿರುವ ಈ ಕಟ್ಟಡವನ್ನು 195 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಈ ಕಟ್ಟಡದಲ್ಲಿ ಡಿಎಸ್‌ಪಿ ಕೊಠಡಿ, ನಾಲ್ಕು ಆರ್.ಎಸ್.ಐ.ಓ ಕೊಠಡಿ, ಕಂಪ್ಯೂಟರ್ ಮತ್ತು ವೈರ್‌ಲೆಸ್ ವಿಭಾಗ, ಶಸ್ತ್ರಾಗಾರ ಕೊಠಡಿ ಸೇರಿದಂತೆ ನಾನಾ ಸೌಲಭ್ಯಗಳನ್ನು ಒಳಗೊಂಡಿದ್ದು, ಸಮಾಜದಲ್ಲಿ ಅಮಾನುಷ ಕೃತ್ಯ ಮಾಡಿ ತಪ್ಪಿಸಿಕೊಳ್ಳುವವರನ್ನು ಈ ಎಲ್ಲಾ ಆಧುನಿಕ ತಂತ್ರಜ್ಞಾನ ಉಪಯೋಗಿಸಿಕೊಂಡು ಶೀಘ್ರ ಪತ್ತೆ ಹಚ್ಚಬಹುದಾಗಿದೆ ಎಂದರು.

ಪಿಎಫ್‌ಐ ಕಚೇರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ 42 ಪಿಎಫ್‌ಐ ಕಚೇರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಅಲ್ಲಿ ಸಿಕ್ಕ ಕಂಪ್ಯೂಟರ್, ಲ್ಯಾಪ್ ಟಾಪ್ ಮತ್ತು ಕೆಲ ಹಾರ್ಡ್ ಡಿಸ್ಕ್ ಸೇರಿದಂತೆ ಕೆಲ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದ್ದು, ಈ ಮೂಲಕ ಅದರ ಜಾಲವನ್ನು ಪತ್ತೆ ಹಚ್ಚುವ ಕೆಲಸ ನಡೆಯುತ್ತಿದೆ ಎಂದರು.

ಶಾಸಕ ತನ್ವೀರ್ ತಮ್ಮ ಮೇಲಿನ ಹಲ್ಲೆಯ ಪ್ರಕರಣವನ್ನು ಮರು ತನಿಖೆಗೆ ಆಗ್ರಹಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಅನೇಕ ವರ್ಷಗಳಿಂದ ಸಾಮಾಜಿಕ ಜೀವನದಲ್ಲಿರುವ ವ್ಯಕ್ತಿ ಮೇಲೆ ಅಮಾನುಷವಾದ ಕೃತ್ಯ ನಡೆದಿತ್ತು. ಅವರು ಮರು ತನಿಖೆ ವಿಚಾರವಾಗಿ ನನ್ನ ಜೊತೆ ಚರ್ಚಿಸಿದ್ದು, ತಮ್ಮ ಸ್ವಂತ ಹಣದಲ್ಲಿ ಲಾಯರ್ ನೇಮಕ ಮಾಡಿಕೊಂಡು ಕೇಸ್ ಮುಂದುವರೆಸುತ್ತೇನೆ ಎಂದು ಕೇಳಿಕೊಂಡಿದ್ದಾರೆ. ಅದಕ್ಕೆ ನಾನು ಸಮ್ಮತಿಸಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತ ಪ್ರಸನ್ನ, ಜಿಲ್ಲಾ ಎಸ್ಪಿ ಆರ್.ಚೇತನ್ ಮತ್ತು ಎಎಸ್ಪಿ ನಂದಿನಿ ಸೇರಿದಂತೆ ಮತ್ತಿತರರು ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಆಹಾರ ಮೇಳಕ್ಕೆ ಹರಿದು ಬಂದ ಜನ ಸಾಗರ



ಮೈಸೂರು, ಸೆ.30(ಎಸ್‌ಪಿಎನ್)– ಮೈಸೂರಲ್ಲಿ ಶುಕ್ರವಾರ ತುಂತುರು ಮಳೆ ನಡುವೆಯೂ ಭಾರತ್ ಸ್ಕೌಟ್ ಮತ್ತು ಗೈಡ್ಸ್ ಮೈದಾನದಲ್ಲಿ ಏರ್ಪಡಿಸಿರುವ ದಸರಾ ಆಹಾರ ಮೇಳಕ್ಕೆ ಶುಕ್ರವಾರ ಸಾಗರೋಪಾದಿಯಾಗಿ ಸಾರ್ವಜನಿಕರು ಆಗಮಿಸಿ, ರುಚಿ–ರುಚಿಯಾದ ತಿಂಡಿ–ತಿನಿಸುಗಳನ್ನು ಸವಿದರು.

ಬಂಬೂ ಬಿರಿಯಾನಿ, ಜಂಕ್‌ಫುಡ್, ಐಸ್‌ಕ್ರಿಂ, ದಾವಣಗೆರೆ ಬೆಣ್ಣೆದೋಸೆ, ಬೆಳಗಾವಿ ಕುಂದ ಪೇಡ, ಇತರೆ ತಿಂಡಿ–ತಿನಿಸುಗಳನ್ನು ಸವಿದರಲ್ಲದೆ, ಮಡಿಕೆ ಬಿರಿಯಾನಿ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ, ಉತ್ತರ ಭಾರತ ಶೈಲಿ ಖಾದ್ಯಗಳು, ಚೈನೀಸ್ ಮತ್ತು ಕಾಂಟಿನೆಂಟಲ್ ಫುಡ್‌ಗಳಿಗೆ ಗಂಟೆಗಟ್ಟಲೇ ಕಾದು ಸವಿಯುತ್ತಿದ್ದ ದೃಶ್ಯಗಳು ಕಂಡು ಬಂದವು. ಇದರ ನಡುವೆ ದಸರಾ ಮಹೋತ್ಸವದ ಆಹಾರ ಮೇಳ ಉಪಸಮಿತಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖ್ಯಾತ ನೃತ್ಯಪಟು ಶ್ರೀಧರ್ ಜೈನ್ ಮತ್ತು ತಂಡದಿಂದ 'ನೃತ್ಯ ವೈಭವ'ವನ್ನು ಕುಟುಂಬ ಸಮೇತ ಬಂದಿದ್ದ ಪ್ರೇಕ್ಷಕರು ವೀಕ್ಷಿಸಿ, ಆನಂದಿಸಿದರು. ಕಲಾವಿದರಾದ ಸುನಿತಾ ಎಸ್ ತಂಡದಿಂದ ಭರತನಾಟ್ಯ, ವಿಷ್ಣುವರ್ಧನ್ ಮ್ಯೂಜಿಕಲ್ ಗ್ರೂಪ್ ಕಲಾವಿದರಿಂದ 'ರಸಮಂಜರಿ' ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.

ಕಳ್ಳರಿದ್ದಾರೆ ಎಚ್ಚರ: ಆಹಾರ ಮೇಳದಲ್ಲಿ ಜನಸಂದಣಿ ಹೆಚ್ಚಾಗಿರುವುದರಿಂದ ಕಳ್ಳರು ತಮ್ಮ ಕೈಚಳಕ ತೋರಲಿದ್ದು, ಹಾಗಾಗಿ ಸಾರ್ವಜನಿಕರೇ ನಿಮ್ಮ ಮೊಬೈಲ್, ಚಿನ್ನದ ಸರ, ಪರ್ಸ್‌ಗಳ ಬಗ್ಗೆ ಜೋಪಾನವಹಿಸಿ ಎಂದು ಹೋಂ ಗಾಡ್‌ವೊಬ್ಬರು ಪ್ರವೇಶ ದ್ವಾರದ ಟೇಬಲ್ ಮೇಲೆ ನಿಂತು ಮೈಕ್‌ನಲ್ಲಿ ಪದೆಪದೇ ಅನೌನ್ಸ್ ಮಾಡುತ್ತಿದ್ದರು.

ಸೆಲ್ಫಿಗೆ ಮುಗಿಬಿದ್ದ ಮಕ್ಕಳು: ಆಹಾರ ಮೇಳದ ಮಧ್ಯದಲ್ಲಿ ಅಳವಡಿಸಿದ್ದ ಹಳ್ಳಿಮನೆ ಮಾದರಿ ಮುಂದೆ ಮಹಿಳೆಯರು, ಯುವತಿಯರು ಹಾಗೂ ಮಕ್ಕಳು ದಸರಾ ನೆನಪಿಗಾಗಿ ಕೆಲವರು ಫೋಟೋ ತೆಗೆದುಕೊಂಡರೇ, ಇನ್ನು ಕೆಲವರು ಸೆಲ್ಫಿ ತೆಗೆದುಕೊಂಡು ಆನಂದಿಸಿದರು. ಡಿಸಿ ಕಚೇರಿ ಹಿಂಭಾಗದ ರಸ್ತೆಯ ದೀಪಾಲಂಕಾರಕ್ಕೆ ಮನಸೋತ ಯುವಕ–ಯುವತಿಯರು ನೇತಾಡುತ್ತಿದ್ದ ಎಲ್‌ಇಡಿ ಬಲ್ಬ್ ಗುಚ್ಛವನ್ನು ಕೈಯಲ್ಲಿ ಹಿಡಿದು ಸೆಲ್ಫಿ ತೆಗೆದುಕೊಳ್ಳುತ್ತಿದ್ದ ದೃಶ್ಯ ಕಂಡು ಬಂತು.

ಮೈಸೂರಲ್ಲಿ ಸಿಕ್ಕಿಬಿದ್ರು ಹತ್ತು ಮಂದಿ ಕುಖ್ಯಾತ ಸರಗಳ್ಳರು

●50 ಲಕ್ಷ ಮೌಲ್ಯದ 1 ಕೆಜಿ ಆಭರಣ ವಶಕ್ಕೆ ●ಸಿಸಿಬಿ ಪೊಲೀಸರ ಯಶಸ್ವಿ ಕಾರ್ಯಾಚರಣೆ ●ಕದಿಯುವುದನ್ನೇ ಕಸುಬು ಮಾಡಿಕೊಂಡ ಮಂಜನ ವಿರುದ್ಧ ಗೂಂಡಾ ಕಾಯ್ದೆ ●ಕದ್ದ ಮಾಲು ಮಾರಲು ಹೋದ ಹಳೆ ಕಳ್ಳನ ಬಂಧನ ●ಕದ್ದ ಮಾಲು ಖರೀದಿಸಿದವರ ವಿರುದ್ಧ ಅಗತ್ಯಬಿದ್ದರೆ ಕೇಸ್



ಚಂದನ್ | ಗೋಪಾಲ್ | ಸೂರಪ್ಪ | ರಮೇಶ್ | ರಂಗಸ್ವಾಮಿ | ಹೃತಿಕ್ | ಮಂಜು

ಮೈಸೂರು, ಸೆ.30(ಆರ್‌ಕೆ)– ಹತ್ತು ಮಂದಿ ಕುಖ್ಯಾತ ಸರಗಳ್ಳರ ಬಂಧಿಸಿರುವ ಮೈಸೂರಿನ ಸಿಸಿಬಿ ಪೊಲೀಸರು, 50 ಲಕ್ಷ ರೂ. ಮೌಲ್ಯದ 1 ಕೆಜಿ ಸರಗಳನ್ನು ವಶ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಸರಗಳ್ಳತನ, ಮನೆ ಕಳವು ಸೇರಿ ಒಟ್ಟು 25 ಪ್ರಕರಣಗಳನ್ನು ಭೇದಿಸಿರುವ ಬಗ್ಗೆ ಮಾಹಿತಿ ನೀಡಿದರು. ಚಾಮರಾಜನಗರದ ಮಂಜು ಅಲಿಯಾಸ್ ಕಳ್ಳ ಮಂಜ(35), ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಚಂದನ್(21), ಚಾಮರಾಜನಗರ ಜಿಲ್ಲೆ, ಸಾಗಡೆ ಗ್ರಾಮದ ಗೋಪಾಲ(40), ರಮೇಶ(50), ಮೇಗಲಹುಂಡಿ ಗ್ರಾಮದ ಸುರೇಶ್(25), ರಂಗಸ್ವಾಮಿ(24), ಎಸ್. ಹೃತಿಕ್(27), ಚಾಟಿಪುರ ಗ್ರಾಮದ ಮನು(23) ಹಾಗೂ ಸೈಯದ್ ಮೌಲಾನ(30) ಬಂಧಿತ ಖದೀಮರು.

ಆರೋಪಿಗಳಿಂದ 50 ಲಕ್ಷ ರೂ. ಮೌಲ್ಯದ 1 ಕೆಜಿ ಆಭರಣಗಳು, ಕೃತ್ಯಕ್ಕೆ ಬಳಸಿದ್ದ 5 ದ್ವಿಚಕ್ರ ವಾಹನ, ಕಳವು ಮಾಡಿದ್ದ 2 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರ ಪೈಕಿ ಇಬ್ಬರು ಅಪ್ರಾಪ್ತರಾಗಿದ್ದು, ಉಳಿದ 8 ಮಂದಿಯನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ. ಮೈಸೂರಿನ ನಜರ್‌ಬಾದ್ ಠಾಣೆ ವ್ಯಾಪ್ತಿ 2, ಕುವೆಂಪುನಗರದ 4, ವಿವಿಪುರಂನ 2, ಎನ್‌ಆರ್‌ನ 1, ಸರಸ್ವತಿಪುರಂನ 4, ಅಶೋಕಪುರಂನ 1, ಕೆಆರ್‌ನ 1, ಆಲನಹಳ್ಳಿ 2, ವಿಜಯನಗರ 3, ಲಕ್ಷ್ಮೀಪುರಂ 1, ಹೆಬ್ಬಾಳು ಠಾಣೆಯ 2 ಸರಗಳವು, ಮನೆಗಳವು ಪ್ರಕರಣ ಪತ್ತೆಯಾದಂತಾಗಿದೆ.

ಅಲ್ಲದೆ ನಂಜನಗೂಡು ತಾಲೂಕಿನ ಕವಲಂದೆ ಮತ್ತು ಚಾಮರಾಜನಗರ ಗ್ರಾಮಾಂತರ ಠಾಣೆಯ ತಲಾ 1 ಪ್ರಕರಣಗಳನ್ನು ಸಿಸಿಬಿ ಪೊಲೀಸರು ಭೇದಿಸಿದ್ದಾರೆ. ಆರೋಪಿತರ ಪೈಕಿ ಮಂಜು ಅಲಿಯಾಸ್ ಕಳ್ಳಮಂಜ ಮತ್ತು ಚಂದನ್ ವೃತ್ತಿನಿರತ ಸರಗಳ್ಳರಾಗಿದ್ದು, ಜೈಲುವಾಸ ಅನುಭವಿಸಿ ಬಂದ ನಂತರವೂ ತಮ್ಮ ಹಳೇ ಚಾಳಿ ಮುಂದುವರೆಸಿದ್ದರು.

ಮಂಜು ಈವರೆಗೆ ಒಟ್ಟು 27 ಸರ ಅಪಹರಣ ಪ್ರಕರಣಗಳಲ್ಲಿ ಭಾಗಿಯಾಗಿದ್ದರೆ, ಚಂದನ್ 4 ಪ್ರಕರಣಗಳಲ್ಲಿ ಆರೋಪಿಯಾಗಿದ್ದ. ಉಳಿದಂತೆ ಗೋಪಾಲ, ರಮೇಶ, ಸುರೇಶ, ರಂಗಸ್ವಾಮಿ, ಮನು ಮತ್ತು ಹೃತಿಕ್ ಎಲ್ಲರೂ ರಕ್ತ ಸಂಬಂಧಿಗಳಾಗಿದ್ದು, ಗಾರೆ ಕೆಲಸ, ಛತ್ರಗಳಲ್ಲಿ ಸೆಕ್ಯೂರಿಟಿ ಕೆಲಸ ಮಾಡಿಕೊಂಡು ಆಗಾಗ ಮೈಸೂರು ನಗರದಲ್ಲಿ ಸರಗಳವು ಮಾಡುವಲ್ಲಿ ನಿರತರಾಗಿದ್ದರು. ಚಾಳಿಗೆ ಬಿದ್ದ ಆರೋಪಿ ಮಂಜನ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗುವುದು ಎಂದರು.

ಅದೇ ರೀತಿ ಹಳೇ ಕಳ್ಳನಾದ ಸೈಯದ್ ಮೌಲಾನ ಎಂಬುವನು ಮನೆಗಳ್ಳತನದಲ್ಲಿ ಕದ್ದ ಚಿನ್ನದ ಪದಾರ್ಥಗಳನ್ನು ಮಾರಾಟ ಮಾಡಲೆತ್ನಿಸಿದಾಗ ಆತನನ್ನು ವಶಕ್ಕೆ ಪಡೆದು 70 ಗ್ರಾಂ ಆಭರಣವನ್ನು ಎನ್‌ಆರ್ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕಳ್ಳತನ ಮಾಡಿದ ಚಿನ್ನಾಭರಣಗಳನ್ನು ಗಿರವಿ ಅಂಗಡಿ, ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಒತ್ತೆ ಇಟ್ಟು ಹಣ ಪಡೆದು ಐಷಾರಾಮಿ ಜೀವನ ನಡೆಸುತ್ತಿದ್ದರು. ಕಳವು ಮಾಲು ಸ್ವೀಕರಿಸಿದವರನ್ನೂ ವಿಚಾರಣೆಗೊಳಪಡಿಸಿದ್ದು, ಕದ್ದ ಮಾಲು ಎಂದು ತಿಳಿದೂ ಪಡೆದಿರುವುದು ದೃಢಪಟ್ಟಲ್ಲಿ ಅವರ ವಿರುದ್ಧವೂ ಪ್ರಕರಣ ದಾಖಲಿಸಲು ಕ್ರಮ ವಹಿಸುತ್ತೇವೆ ಎಂದು ತಿಳಿಸಿದರು. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್. ಗೀತಾ ಪ್ರಸನ್ನ, ಸಿಸಿಬಿ ಎಸಿಪಿ ಸಿ.ಕೆ.ಅಶ್ವಥ ನಾರಾಯಣ ಮಾರ್ಗದರ್ಶನದ ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಜಿ.ಶೇಖರ್, ಸಿಬ್ಬಂದಿಗಳಾದ ಉಮೇಶ್, ಅಸ್ಗರ್‌ಖಾನ್, ಸಲೀಂಖಾನ್, ರಾಮಸ್ವಾಮಿ, ಯಾಕೂಬ್ ಷರೀಫ್, ಎಂ.ಆರ್.ಗಣೇಶ್, ಸಿ.ಚಿಕ್ಕಣ್ಣ, ಉಮಾ ಮಹೇಶ್, ಪಿ.ಎನ್.ಲಕ್ಷ್ಮೀಕಾಂತ, ಆನಂದ, ಟಿ.ಪ್ರಕಾಶ್, ಸಿ.ಎನ್.ಶಿವರಾಜು, ಚಂದ್ರಶೇಖರ್, ಗೋವಿಂದ, ಸಿ.ಎಲ್. ಮಧುಸೂದನ್, ಮೋಹನಾರಾಧ್ಯ, ಕೆ. ಮಹೇಶ್, ನರಸಿಂಹರಾಜು, ನಬೀಪಟೇಲ್, ಮಾರುತಿ ಪವನ್, ಮಮತಾ, ರಮ್ಯ, ಚಾಲಕರಾದ ಗೌತಮ್, ಶಿವಕುಮಾರ್ ಭಾಗವಹಿಸಿದ್ದರು.

ಖದೀಮರಿಗೆ ಸಹಕರಿಸುತ್ತಿದ್ದ ವಕೀಲ!



ಮೈಸೂರು, ಸೆ. 30(ಆರ್‌ಕೆ)– ಕಳೆದ ಒಂದು ತಿಂಗಳ ಹಿಂದೆ ನಡೆದ ಮನೆ ಕಳವು ಪ್ರಕರಣವೊಂದರಲ್ಲಿ ವಕೀಲರೊಬ್ಬರು ಆರೋಪಿಗಳಿಗೆ ಸಹಕಾರ ನೀಡಿದ್ದರು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಉಮೇಶ ಎಂಬ ವಕೀಲರು ಮನೆ ಕಳವು ಮಾಡಿದ ಮೇಲೆ ಮಾಲನ್ನು ಮಾರಾಟ ಮಾಡಲು ದಾರಿ ತೋರಿದ್ದು, ಸಿಕ್ಕಿ ಬಿದ್ದ ಮೇಲೆ ಆರೋಪಿಗಳಿಗೆ ಜಾಮೀನು ಕೊಡಿಸುತ್ತಿದ್ದರು ಎಂಬುದು ತನಿಖೆಯಿಂದ ತಿಳಿದು ಬಂದ ಹಿನ್ನೆಲೆಯಲ್ಲಿ ಅವರನ್ನೂ ಆರೋಪಿಯನ್ನಾಗಿ ಮಾಡಿ ಬಂಧಿಸಲಾಗಿತ್ತು ಎಂದರು.

ಮನೆ ಕಳವು ಮಾಡಲು ಪ್ಲಾನ್ ಮಾಡಿಕೊಡುವುದು, ಕಳ್ಳತನ ಮಾಡಿದ ಮಾಲನ್ನು ತಾವೇ ನಿಂತು ಮಾರಾಟ ಮಾಡಿಸುವುದು, ಆರೋಪಿಗಳಿಗೆ ಅಪರಾಧ ಕೃತ್ಯವೆಸಗಲು ಸಹಕರಿಸುವುದು ಕೃತ್ಯದಲ್ಲಿ ಪಾಲ್ಗೊಂಡಂತೆಯೇ ಸರಿ. ಆದ್ದರಿಂದ ಅವರ ವಿರುದ್ಧವೂ ಪ್ರಕರಣ ದಾಖಲಿಸಿ ಆ ವಕೀಲರನ್ನೂ ಬಂಧಿಸಲಾಗಿತ್ತು ಎಂದರು.

ಕೆಲವರ ಪ್ರಚೋದನೆ, ಕುಮ್ಮಕ್ಕು ಹಾಗೂ ಶಾಮೀಲಾಗುತ್ತಿರುವುದರಿಂದ ಮೈಸೂರು ನಗರದಲ್ಲಿ ಅಪರಾಧ ಕೃತ್ಯಗಳು ನಡೆಯುತ್ತಿವೆ. ಒಬ್ಬ ವಕೀಲನಾಗಿ ಮನೆ ಕಳವು ಮಾಡುವವರಿಗೆ ನೆರವಾಗುವುದು ಅಪರಾಧ ಕೃತ್ಯವೆಸಗಿದಂತೆಯೇ. ತಿಳಿದವರೇ ಇಂತಹ ಕೃತ್ಯವೆಸಗಿದರೆ ಸಮಾಜಕ್ಕೆ ಇದರಿಂದ ಕೆಟ್ಟ ಸಂದೇಶ ರವಾನೆಯಾಗುತ್ತದೆ ಎಂದರು.

ಎಐಸಿಸಿ ಅಧ್ಯಕ್ಷ ಗಾದಿಯತ್ತ ಖರ್ಗೆ



●ಜಿ–23 ನಾಯಕರು, ಗೆಹ್ಲೋಟ್ ಬೆಂಬಲ
●ಶಶಿ ತರೂರ್‌ರಿಂದಲೂ ನಾಮಪತ್ರ ಸಲ್ಲಿಕೆ

ನವದೆಹಲಿ: ತೀವ್ರ ಕುತೂಹಲ ಕೆರಳಿಸಿರುವ ಕಾಂಗ್ರೆಸ್ ಅಧ್ಯಕ್ಷ ಹುದ್ದೆಯ ಚುನಾವಣೆಯಲ್ಲಿ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷ ಗಾದಿಯತ್ತ ದಾಪುಗಾಲಿರಿಸಿದ್ದಾರೆ. ರಾಜಸ್ಥಾನ ಸಿಎಂ ಹಾಗೂ ಕಾಂಗ್ರೆಸ್ ಹಿರಿಯ ನಾಯಕ ಅಶೋಕ್ ಗೆಹ್ಲೋಟ್ ಹಾಗೂ ಮತ್ತೋರ್ವ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅಧ್ಯಕ್ಷ ಹುದ್ದೆ ಚುನಾವಣಾ ರೇಸ್‌ನಿಂದ ಹಿಂದೆ ಸರಿದಿರುವುದು ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷ ಗಾದಿ ಹಾದಿ ಸುಗಮವಾದಂತಾಗಿದೆ. ಇಂದು ಬೆಳಗ್ಗೆ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಬೆಂಬಲಿತ ನಾಯಕರೊಂದಿಗೆ ದೆಹಲಿಯ ಎಐಸಿಸಿ ಪ್ರಧಾನ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಕೆ ಮಾಡಿದರು.

ಅಧ್ಯಕ್ಷ ಸ್ಥಾನಕ್ಕೆ ಸಂಸದ ಶಶಿ ತರೂರ್ ನಾಮಪತ್ರ ಸಲ್ಲಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಂಸದ ಶಶಿ ತರೂರ್, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಗಾಂಧಿ ಕುಟುಂಬದವರು ಬೆಂಬಲ ನೀಡಿರುವುದು ಅಚ್ಚರಿಯೇನಲ್ಲ ಎಂದು ಹೇಳಿದ್ದಾರೆ. ಸ್ಥಾಪಿತ ನಾಯಕತ್ವದ ಯಥಾಸ್ಥಿತಿಯನ್ನು ಮುಂದುವರೆಸಲು ಒಟ್ಟುಗೂಡುತ್ತಿರುವುದರಲ್ಲಿ ಅಚ್ಚರಿಯೇನು ಇಲ್ಲ. ಯಥಾಸ್ಥಿತಿ ಬೇಕೆಂದರೆ ನೀವು ಖರ್ಗೆ ಅವರಿಗೆ ಮತ ಹಾಕಬೇಕು, 21ನೇ ಶತಮಾನದ ಉಳಿದ ಭಾಗದಲ್ಲಿ ನಿಮಗೆ ಬದಲಾವಣೆ, ಪ್ರಗತಿ ಬೇಕು ಎನ್ನುವುದಾದರೆ, ನಾನು ಆ ಬದಲಾವಣೆಗಾಗಿ ನಿಲ್ಲುತ್ತೇನೆ ಎಂದು ಸಂಸದರೂ ಆಗಿರುವ ಶಶಿ ತರೂರ್ ಹೇಳಿದ್ದಾರೆ.



ಪೊಗರದಸ್ತು ಎತ್ತು, ಕೊಬ್ಬಿದ ಟಗರು, ಕಲಾತಂಡಗಳ ಮೆರಗಿನಲ್ಲಿ ಜರುಗಿದ ರೈತ ದಸರಾ ಮೆರವಣಿಗೆ

ಹಸಿರು ಪೇಟ ಧರಿಸಿ ಎತ್ತಿನ ಗಾಡಿ ಸವಾರಿ ಮಾಡಿದ ಸಚಿವ ಬಿ.ಸಿ.ಪಾಟೀಲ್



ರೈತ ದಸರಾ ಮೆರವಣಿಗೆಯಲ್ಲಿ ಎತ್ತಿನ ಗಾಡಿನಲ್ಲಿ ಸಾಗಿದ ಸಚಿವರಾದ ಬಿ.ಸಿ.ಪಾಟೀಲ್, ಎಸ್.ಟಿ.ಸೋಮಶೇಖರ್, ಶಾಸಕ ಜಿ.ಟಿ.ದೇವೇಗೌಡ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಸೆ.30(ಪಿಎಂ)– ದಷ್ಟಪುಷ್ಟ ಮೈಕಟ್ಟಿನ ಹಳ್ಳಿಕಾರ್ ತಳಿಯ ಎತ್ತುಗಳು, ಕೊಬ್ಬಿದ ಟಗರು ಹಾಗೂ ಎತ್ತಿನ ಗಾಡಿಗಳ ಪ್ರಮುಖ ಆಕರ್ಷಣೆಯೊಂದಿಗೆ ವಿವಿಧ ಕಲಾತಂಡಗಳ ಕಲಾ ಮೆರುಗಿಗೆ ಶುಕ್ರವಾರ ನಡೆದ ರೈತ ದಸರಾ ಮೆರವಣಿಗೆ ಸಾಕ್ಷಿಯಾಯಿತು.

ನಂದಿಧ್ವಜ, ಪೂರ್ಣಕುಂಭ, ನಾದಸ್ವರ, ಗಾರುಡಿ ಗೊಂಬೆ, ಡೊಳ್ಳು ಕುಣಿತ, ಪೂಜಾ ಕುಣಿತ ಸೇರಿದಂತೆ ನಾನಾ ಕಲಾ ತಂಡಗಳ ಸಾಂಸ್ಕೃತಿಕ ಸಡಗರದೊಂದಿಗೆ ಮೆರವಣಿಗೆ ಮನಸೂರೆಗೊಂಡಿತು. ಮೈಸೂರು ಅರಮನೆಯ ಉತ್ತರದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ನಡೆದ ಮೆರವಣಿಗೆಯ ಉದ್ಘಾಟನಾ ಸಮಾರಂಭದಲ್ಲಿ ನಂದಿ ಧ್ವಜಕ್ಕೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಪೂಜೆ ನೆರವೇರಿಸಿದರು.

ಬಳಿಕ ನಗಾರಿ ಬಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದ ಬಿ.ಸಿ. ಪಾಟೀಲ್, ಹಸಿರು ಪೇಟ ಧರಿಸಿ ಎತ್ತಿನ ಗಾಡಿ ಹೇರಿ ಸವಾರಿ ಮಾಡುವ ಮೂಲಕ ಗಮನ ಸೆಳೆದರು. ಅವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಮತ್ತಿತರ ಗಣ್ಯರು ಎತ್ತಿನ ಗಾಡಿಯಲ್ಲಿ ಸಾಗಿದರು.

ಇದಕ್ಕೂ ಮುನ್ನ ವೇದಿಕೆಯಲ್ಲಿ ಮಾತನಾಡಿದ ಬಿ.ಸಿ.ಪಾಟೀಲ್, ರೈತರು ಇದ್ದರೆ ಮಾತ್ರವೇ ಇಡೀ ಜಗತ್ತು ಬದುಕಲು ಸಾಧ್ಯ. ಕೋವಿಡ್ ದೂರವಾಗಿ ಮೊದಲಿನ ಸಹಜ ಪರಿಸ್ಥಿತಿ ಇರುವ ಹಿನ್ನೆಲೆಯಲ್ಲಿ ಇಂದು ಮೈಸೂರು ದಸರಾ ಅದ್ಧೂರಿಯಾಗಿ ಆಚರಣೆಗೊಳ್ಳುತ್ತಿದ್ದು, ಅದೇ ರೀತಿ ರೈತ ದಸರಾ ಸಹ ವಿಜೃಂಭಣೆಯಿಂದ ನಡೆಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಜಿಲ್ಲೆಯ ಪ್ರತಿ ತಾಲೂಕಲ್ಲೂ ರೈತ ದಸರಾ ಆಚರಣೆಗೆ ಚಾಲನೆ ನೀಡಿದ್ದೇವೆ. ಬಿ.ಸಿ.ಪಾಟೀಲ್ ಅವರ ತಂದೆ 80 ಎಕರೆ ಕೃಷಿ ಭೂಮಿ ಮಾಡಿದ್ದರು. ಅದರಲ್ಲಿ ಬಿ.ಸಿ.ಪಾಟೀಲ್ ಕೃಷಿ ಮಾಡುತ್ತಿದ್ದು, ಕೃಷಿ ಖಾತೆಯೇ ಬೇಕೆಂದು ಬಯಸಿ ಪಡೆದು, ರೈತರ ಸೇವೆ ಮಾಡುತ್ತಿದ್ದಾರೆ. 'ರೈತರಿಗಾಗಿ ಒಂದು ದಿನ' ಎಂಬ ಕಾರ್ಯಕ್ರಮದ ಮೂಲಕ ರೈತ ಸಮುದಾಯದ ಅಹವಾಲು ಆಲಿಸುತ್ತಿದ್ದಾರೆ ಎಂದು ತಿಳಿಸಿದರು.

ಆಕರ್ಷಿಸಿದ ಟಗರಿನ ಬಂಡಿ: ಹಾವೇರಿ ಜಿಲ್ಲೆ ರಾಣೇಬೆನ್ನೂರಿನ ಕುರಿ ವ್ಯಾಪಾರಿಗಳ ಟಗರಿನ ಬಂಡಿ ಮೆರವಣಿಗೆಯಲ್ಲಿ ಗಮನ ಸೆಳೆಯಿತು. ಕೊಬ್ಬಿದ ಟಗರುಗಳೆರಡು ನೊಗ ಹೊತ್ತು ಬಂಡಿ ಎಳೆದು ಸಾಗುತ್ತಿದ್ದ ಪರಿ ನೋಡುಗರಲ್ಲಿ ಕೌತುಕ ಮೂಡಿಸಿತು. ಅಲ್ಲದೆ, ಇನ್ನು ಹಲವು ಕೊಬ್ಬಿದ ಟಗರು ಹೆಜ್ಜೆ ಹಾಕಿ ಮೆರವಣಿಗೆಗೆ ಮೆರಗು ನೀಡಿದವು.

ಬನ್ನೂರಿನ 5 ಜೊತೆ ಹಳ್ಳಿಕಾರ್ ಎತ್ತು: ಬನ್ನೂರಿನ 5 ಜೊತೆ ಹಳ್ಳಿಕಾರ್ ತಳಿಯ ಎತ್ತುಗಳು ಮೆರವಣಿಗೆಯಲ್ಲಿ ಸಾಗಿದವು. ಕಟ್ಟುಮಸ್ತಾದ ಮೈಕಟ್ಟಿನ ಈ ಹೋರಿಗಳನ್ನು ಕಂಡು ನೆರೆದಿದ್ದವರು ಪುಳಕಗೊಂಡು ಮೊಬೈಲ್‌ಗಳಲ್ಲಿ ಫೋಟೋ ಕ್ಲಿಕ್ಕಿಸಿಕೊಂಡರು.

ಈ ಎತ್ತುಗಳನ್ನು ಕರೆತಂದಿದ್ದ ಬನ್ನೂರಿನ ಗಂಗಾ ಸೇನೆಯ ಡಾ.ರಾಹುಲ್ ಗೌಡ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಹಳ್ಳಿಕಾರ್ ತಳಿಯ ಸಂತತಿ ಉಳಿಸಲು ಅರಿವು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಜಂಬೂ ಸವಾರಿ ಮೆರವಣಿಗೆಯಲ್ಲಿ ನಮ್ಮ ಹಳ್ಳಿಕಾರ್ ಹೋರಿಗಳು ಪಾಲ್ಗೊಳ್ಳಲು ಅವಕಾಶ ಕೋರಿದ್ದೇವೆ ಎಂದು ತಿಳಿಸಿದರು.

ಸ್ತಬ್ಧಚಿತ್ರ ಸಾಮಾಜಿಕ ಅರಣ್ಯ ಮೈಸೂರು ವಿಭಾಗ, ಮೀನುಗಾರಿಕೆ ಇಲಾಖೆ, ಕೃಷಿ ಇಲಾಖೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸ್ತಬ್ಧಚಿತ್ರಗಳೂ ಮೆರವಣಿಗೆಯಲ್ಲಿ ಸಾಗಿದವು. ಆ ಮೂಲಕ ಇಲಾಖೆಯಲ್ಲಿ ದೊರೆಯುವ ಸರ್ಕಾರದ ಯೋಜನೆಗಳ ಪ್ರಯೋಜನವನ್ನು ಪಸರಿಸಿದವು. ಗೋ ಸಂರಕ್ಷಣೆಯ ಪುಣ್ಯಕೋಟಿ ಯೋಜನೆ ಸೇರಿದಂತೆ ರೈತರ ಶ್ರೇಯೋಭಿವೃದ್ಧಿ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಮಾಹಿತಿ ಇಲ್ಲಿ ಪ್ರಕಟಗೊಂಡಿತು.

ಮೆರವಣಿಗೆಯು ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್–ವಿಕ್ಟರ್ ರಸ್ತೆ, ಕೆಆರ್ ವೃತ್ತ, ಡಿ.ದೇವರಾಜ ಅರಸು ರಸ್ತೆ, ದಿವಾನ್ಸ್ ರಸ್ತೆ ಮಾರ್ಗವಾಗಿ ಕೃಷಿ ವಸ್ತು ಪ್ರದರ್ಶನ ಹಮ್ಮಿಕೊಂಡಿರುವ ಜೆಕೆ ಮೈದಾನ ತಲುಪಿ ಅಂತ್ಯಗೊಂಡಿತು.

ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಂಗಲ್ಸ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷ ಅಪ್ಪಣ್ಣ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ರೈತ ದಸರಾ ಉಪಸಮಿತಿ ಅಧ್ಯಕ್ಷ ಮಹೇಶ್‌ಕುಮಾರ್ (ಮಡವಾಡಿ) ಮತ್ತಿತರರು ಹಾಜರಿದ್ದರು.

ಧಾನ್ಯ ಎಕ್ಕಿ ತಿನ್ನಲು ಪರದಾಡಿದ ಪಾರಿವಾಳ! ಕಾಲ ಕಸವಾಯಿತು ಕಾಳು–ಕಡ್ಡಿ!!

ಮೈಸೂರು,ಸೆ.30(ಪಿಎಂ)– ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ನಿತ್ಯ ಬೆಳಗಿನ ಜಾವಾ ಪರಿವಾಳಗಳಿಗಾಗಿ ಅನೇಕರು ಕಾಳು–ಕಡ್ಡಿ ಹಾಕುತ್ತಾರೆ. ಇಲ್ಲಿ ಹಾಕುವ ಧಾನ್ಯ ತಿನ್ನಲು ನೂರಾರು ಪಾರಿವಾಳಗಳು ಗುಂಪುಗೂಡಿ ಇಲ್ಲಿಗೆ ಧಾವಿಸುತ್ತವೆ.

ಆದರೆ ಶುಕ್ರವಾರ ಬೆಳಗ್ಗೆ ಪಾರಿವಾಳಗಳು ಕಣ್ಮರೆಯಾಗಿದ್ದವು. ಕಾರಣ ಅಲ್ಲಿ ರೈತ ದಸರಾ ಮೆರವಣಿಗೆ ಉದ್ಘಾಟನಾ ಸಮಾರಂಭ ಏರ್ಪಡಿಸಿದ್ದರಿಂದ ನೂರಾರು ಸಂಖ್ಯೆಯಲ್ಲಿ ಜನ ನೆರೆದಿದ್ದರು. ಜನ ಸೇರುವ ಮುನ್ನವೇ ಪಕ್ಷಿ ಪ್ರಿಯರು ಎಂದಿನಂತೆ ಈ ಆವರಣದಲ್ಲಿ ಉರಿಗಡಲೆ, ಮುಸುಗಿನ ಜೋಳ ಸೇರಿದಂತೆ ನಾನಾ ಬಗೆಯ ಧಾನ್ಯಗಳನ್ನು ಹಾಕಿದ್ದರು. ಆದರೆ ಪಾರಿವಾಳಗಳು ನಿತ್ಯದಂತೆ ನಿರಾಳವಾಗಿ ಧಾನ್ಯ ಸೇವಿಸಲು ಜನದಟ್ಟಣೆ ಉಂಟಾದ್ದರಿಂದ ಸಾಧ್ಯವಾಗದೇ ಹೋಗಿರಬೇಕು.

ಇನ್ನೂ ದುರುತವೆಂದರೆ ರಾಶಿಯಾಗಿ ನೆಲದಲ್ಲಿ ಬಿದ್ದಿದ್ದ ಧಾನ್ಯಗಳನ್ನು ಒಂದೆಡೆ ಗೂಡಿಸಿ ಸಂಗ್ರಹಿಸಿಡದೇ ಹಾಗೆಯೇ ಕಾರ್ಯಕ್ರಮ ಮಾಡಲಾಯಿತು. ಇದರಿಂದ ಅಲ್ಲಿ ನೆರೆದಿದ್ದವರೆಲ್ಲರೂ ಧಾನ್ಯಗಳನ್ನು ತುಳಿದುಕೊಂಡೇ ಓಡಾಡುವ ಅನಿವಾರ್ಯತೆ ಎದುರಾಗಿತ್ತು. ಈ ಮಧ್ಯೆ ಒಂದೇ ಒಂದು ಪಾರಿವಾಳ ಸಮಾವೇಶಗೊಂಡಿದ್ದ ಜನತೆ ನಡುವೆಯೇ ಧಾನ್ಯ ಎಕ್ಕಿ ತಿನ್ನಲು ಪ್ರಯತ್ನಿಸಿತು. ಆದರೆ ಪಡ್ಡೆ ಹುಡುಗರ ಕೀಟಲೆಗೆ ಬೆದರಿ ಅದೂ ಹಾರಿ ಹೋಯಿತು. ಧಾನ್ಯಗಳನ್ನು ಹೀಗೆ ತುಳಿಯಲು ಅವಕಾಶವಾಗದಂತೆ ಎಚ್ಚರ ವಹಿಸಿದ್ದರೆ ಸೂಕ್ತವಿತ್ತು ಎಂಬುದು ಅಲ್ಲಿದ್ದ ಕೆಲ ಪ್ರಜ್ಞಾವಂತರ ಅಭಿಮತವಾಗಿತ್ತು.



ಕೊಬ್ಬಿದ ಟಗರುಗಳ ಬಂಡಿ

ದಿಗಿಲು ಮೂಡಿಸಿದ ಬಲಶಾಲಿ ಕೃಷ್ಣ!



ಮೈಸೂರು,ಸೆ.30(ಪಿಎಂ)– ಆರೂವರೆ ಅಡಿ ಎತ್ತರದ ಆ ಕೃಷ್ಣನಿಗೆ ಎರಡು ಕೊಂಬು! ನಾಲ್ಕು ಕಾಲುಗಳು!! ಬರೋಬ್ಬರಿ 900 ಕೆಜಿ ತೂಕದ ಈ ಕೃಷ್ಣನ ಪೊಗರದಸ್ತಾದ ಮೈಕಟ್ಟು ಕಂಡು ಅಲ್ಲಿ ನೆರೆದಿದ್ದವರು ದಿಗಿಲುಗೊಂಡರು.

ಇಂತಹ ಸದೃಢ, ಬಲಶಾಲಿ ದೇಹದ ಕೃಷ್ಣ ಯಾರೆಂದು ಹುಬ್ಬೇರಿಸಬೇಡಿ. ಮಂಡ್ಯ ಜಿಲ್ಲೆ ಮಳವಳ್ಳಿ ಪಟ್ಟಣದ ಬೋರೇಗೌಡ ಎಂಬುವರು ಸಾಕಿರುವ ಹಳ್ಳಿಕಾರ್ ಹೋರಿಯ ಮೈಕಟ್ಟಿನ ಚಿತ್ರಣವಿದು. 8 ಅಡಿ ಉದ್ದದ ಈ ದೊಡ್ಡ ಹೋರಿ, ರೈತ ದಸರಾ ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿತ್ತು. ಕಟ್ಟುಮಸ್ತಾದ ಮೈಕಟ್ಟಿನ ಈ ಹೋರಿ ನೋಡುಗರನ್ನು ಚಕಿತಗೊಳಿಸಿತು. ಅದರ ಮೈಕಟ್ಟು ದಿಗಿಲು ಹುಟ್ಟಿಸಿದರೂ ಸಮೀಪಕ್ಕೆ ಹೋಗಿ ಹಲವರು ಸೆಲ್ಫಿ ತೆಗೆದುಕೊಂಡು, ಸಂಭ್ರಮಿಸಿದರು.

ಈ ಭಾರೀ ಹೋರಿಯ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಬೋರೇಗೌಡರು, ನಮ್ಮ ಹಳ್ಳಿಕಾರ್ ಹೋರಿ ಕೃಷ್ಣನ ವೀರ್ಯಾಣು ಸಂಗ್ರಹ ಮಾಡಲಾಗಿದೆ. ಖಾಸಗಿಯಾಗಿ ಈ ಪ್ರಕ್ರಿಯೆ ನಡೆದಿರುವುದು ಇಡೀ ಭಾರತದಲ್ಲಿ ಪ್ರಪ್ರಥಮ. ಈ ತಳಿ ಸಂರಕ್ಷಣೆ ನಿಟ್ಟಿನಲ್ಲಿ ಇದರ ವೀರ್ಯಾಣು ಸಂಗ್ರಹ ಮಾಡಲಾಗಿದೆ ಎಂದು ಹೇಳಿದರು.



ರಂಗು ರಂಗಿನ ರಂಗೋಲಿಯಲ್ಲಿ ಸ್ವಚ್ಛತೆ ಪಾಠ!

ಅನೈರ್ಮಲ್ಯ ಸ್ಥಳಗಳೀಗ ಅಂದ-ಚಂದದ ತಾಣ!!




ಮೈಸೂರು,ಸೆ.30(ಪಿಎಂ)– ನಿತ್ಯ ಸ್ವಚ್ಛತೆ ಮಾಡುತ್ತಲೇ ಇದ್ದರೂ ಆಯಾಯ ಪ್ರದೇಶದ ಕೆಲವರ ನಿರ್ಲಕ್ಷ್ಯವೋ ಏನೋ ಕೆಲ ಸ್ಥಳಗಳು ಗಬ್ಬು ನಾರುತ್ತಲೇ ಇದ್ದವು. ಇದನ್ನು ನಿವಾರಿಸಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲು ಮೈಸೂರು ಮಹಾನಗರ ಪಾಲಿಕೆ ರಂಗು ರಂಗಿನ ರಂಗೋಲಿ ತಂತ್ರ ಪ್ರಯೋಗಿಸಿದೆ!



ಹೌದು, ಪಾಲಿಕೆಯು ಎಲ್ಲಾ 65 ವಾರ್ಡ್‌ಗಳಲ್ಲಿ ಶುಕ್ರವಾರ ಏಕಕಾಲಕ್ಕೆ 100ಕ್ಕೂ ಹೆಚ್ಚು ಅನೈರ್ಮಲ್ಯದ ಸ್ಥಳಗಳನ್ನು ಗುರುತಿಸಿ ಸ್ವಚ್ಛಗೊಳಿಸಲಾಗಿದೆ. ಇಷ್ಟು ಮಾತ್ರವಲ್ಲದೆ, ಅಂತಹ ಸ್ಥಳಗಳಲ್ಲಿ ರಂಗೋಲಿ ಬಿಡಿಸಿ ಅಂದಗೊಳಿಸಲಾಗಿದೆ. ಅಷ್ಟೇ ಅಲ್ಲದೆ, ರಂಗೋಲಿಗೆ ಬಗೆಬಗೆಯ ಬಣ್ಣಗಳನ್ನು ತುಂಬಲಾಗಿದೆ.

ಮೊದಲಿಗೆ ಅನೈರ್ಮಲ್ಯ ಸ್ಥಳಗಳನ್ನು ಶುಚಿಗೊಳಿಸಿದ ಪೌರಕಾರ್ಮಿಕರು, ಬಳಿಕ ಅಲ್ಲಿ ರಂಗು ರಂಗಿನ ರಂಗೋಲಿ ಹಾಕಿದ್ದಾರೆ. ನಾಡಹಬ್ಬ ದಸರಾ ಹಾಗೂ ಗಾಂಧಿ ಜಯಂತಿ ಪ್ರಯುಕ್ತ ಪಾಲಿಕೆ ಮತ್ತು ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ವತಿಯಿಂದ ಇಂತಹ ವಿಭಿನ್ನ ರೀತಿಯಲ್ಲಿ ಜಾಗೃತಿ ಮೂಡಿಸಲಾಗಿದೆ.





ಪೌರಕಾರ್ಮಿಕರ ರಂಗೋಲಿ ಬಿಡಿಸುವ ಕಾರ್ಯಕ್ಕೆ ಪಾಲಿಕೆ ಅಧಿಕಾರಿ ಮತ್ತು ಸಿಬ್ಬಂದಿಯೂ ಕೈಜೋಡಿಸಿದರು. ಮೂರು ಸ್ಥಳಗಳಲ್ಲಿನ ಉತ್ತಮ ರಂಗೋಲಿ ಹಾಕಿದವರಿಗೆ ಅ.2ರಂದು ಪುರಭವನದಲ್ಲಿ ನಡೆಯುವ ಗಾಂಧಿ ಜಯಂತಿಯಲ್ಲಿ ಪ್ರಶಂಸಾ ಪ್ರಮಾಣ ಪತ್ರ ನೀಡಲು ಪಾಲಿಕೆ ಮುಂದಾಗಿದೆ.

ಉಪಸಮಿತಿ ಅಧ್ಯಕ್ಷ ಶ್ರೀನಿವಾಸ, ಉಪಾಧ್ಯಕ್ಷರಾದ ಎಸ್.ನಂದಕುಮಾರ್, ಲಕ್ಷ್ಮಣ್, ಕಾ.ಪು.ಸಿದ್ದವೀರಪ್ಪ, ಉಪಸಮಿತಿಯ ಕಾರ್ಯಾಧ್ಯಕ್ಷರೂ ಆದ ಪಾಲಿಕೆ ಉಪ ಆಯುಕ್ತರಾದ ಎಂ.ಕೆ.ಸವಿತಾ, ಉಪಸಮಿತಿ ಕಾರ್ಯದರ್ಶಿಗಳೂ ಆದ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್ ಮತ್ತಿತರರು ಈ ವಿಭಿನ್ನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮಳೆ ನಿಂತ ಮೇಲೆ ಅರಮನೆ ಆವರಣದಲ್ಲಿ ಹರಿಯಿತು ಸಂಗೀತ ಝರಿ

ನೆರೆದ ಸಂಗೀತ ಪ್ರಿಯರಿಗೆ ಕರ್ಣಾನಂದ...





ಮೈಸೂರು, ಸೆ.30(ಎಸ್‌ಬಿಡಿ)– ಜೋರು ಮಳೆಯಿಂದ ಇಳೆ ತಂಪಾಗಿ ಆಹ್ಲಾದಕರ ವಾತಾವರಣ ಸೃಷ್ಟಿಯಾಗಿತ್ತು. ನಿಲ್ಲದ ತುಂತುರು ಹನಿಗಳ ನಡುವೆಯೇ ವಿದ್ಯುತ್ ದೀಪಾಲಂಕೃತ ಅರಮನೆ ವೇದಿಕೆಯಲ್ಲಿ ಮಾರ್ದನಿಸಿದ ಸಂಗೀತ–ನೃತ್ಯ ಲಹರಿ ನೆರೆದಿದ್ದವರಿಗೆ ಕರ್ಣಾನಂದ ನೀಡಿತು.

ಅರಮನೆ ಆವರಣದಲ್ಲಿ ಶುಕ್ರವಾರ ಜನ ಸಾಗರವೇ ನೆರೆದಿತ್ತು. ಆದರೆ ಮಳೆ ಪರಿಣಾಮ ಐದನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮ ಒಂದು ಗಂಟೆ ತಡವಾಗಿ ಆರಂಭವಾಯಿತು. ಮೊದಲಿಗೆ ಕೋಲಾರದ ವಿದ್ವಾನ್ ಜ್ಞಾನಮೂರ್ತಿ ಅವರು 'ಭಕ್ತಿ ಸಂಗೀತ' ಕಾರ್ಯಕ್ರಮ ನಡೆಸಿಕೊಟ್ಟರು. 'ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ...' 'ಹಿಮಗಿರಿ ತನಯೇ ಹೇಮಲತೆ...', 'ಶಂಭೋ ಮಹಾದೇವ...', ಹಾಗೂ 'ದೇವಿ ಜಗದ ಜನನೀ ಪರಿಪಾಲಿಸು...' ಗೀತೆಗಳನ್ನು ಭಕ್ತಿಭಾವದಿಂದ ಪ್ರಸ್ತುತಪಡಿಸಿ, ಪ್ರೇಕ್ಷಕರನ್ನು ಆಕರ್ಷಿಸಿದರು.

'ಒಡೆಯರ್ ಕೃತಿಗಳ ಗಾನ ವಾದ್ಯ ವೈಭವ' ಕಾರ್ಯಕ್ರಮ ಆರಂಭಿಸುವ ಸಂದರ್ಭದಲ್ಲಿ ತುಂತುರು ಮಳೆ ಶುರುವಾಯಿತು. ವೇದಿಕೆ ಮುಂಭಾಗ ಆಸೀನರಾಗಿದ್ದವರು, ಖಾಲಿ ಆವರಣದಲ್ಲಿ ನಿಂತಿದ್ದವರಲ್ಲಿ ಹಲವರು ಪರ್ಯಾಯ ವೇದಿಕೆಯಡಿ ಆಶ್ರಯ ಪಡೆದರು. ಕೆಲವರು ಕೊಡೆ ಹಿಡಿದು, ಮತ್ತಷ್ಟು ಮಂದಿ ಮಳೆಗೆ ಸೆಡ್ಡು ಹೊಡೆದವರಂತೆ ಸಂಗೀತ ಆಸ್ವಾದನೆಗೆ ಕಾದಿದ್ದರು. ಮೈಸೂರಿನ ವಿದುಷಿ ಡಾ.ಸುಕನ್ಯಾ ಪ್ರಭಾಕರ್, ಬಳ್ಳಾರಿ ಎಂ.ರಾಘವೇಂದ್ರ, ನರಸಿಂಹಮೂರ್ತಿ ಹಾಗೂ ತಂಡದ ಕಲಾವಿದರು ಮಳೆಹನಿಯ ನಡುವೆಯೇ ಕಾರ್ಯಕ್ರಮ ಆರಂಭಿಸಿದರು. ಕೆಲಹೊತ್ತಿನಲ್ಲಿ ವರುಣಾ ಕೃಪೆ ತೋರಿ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟಿತು. 'ಮಹಾಗಣಪತಿಂ ಭಜೆ...', ಶ್ರೀ ಜಯಚಾಮರಾಜೇಂದ್ರ ಒಡೆಯರ್ ಲಲಿತಾ ರಾಗದಲ್ಲಿ ರಚಿಸಿರುವ 'ಶ್ರೀ ರಾಜರಾಜೇಶ್ವರಿ...' ಸೇರಿದಂತೆ ಹಲವು ಕೃತಿಗಳ ಗಾಯನ ಹಾಗೂ ವಾದ್ಯ ಸಂಗೀತದಲ್ಲಿ ಮೊಳಗಿಸಿದರು.

ಬೆಂಗಳೂರಿನ ರೂಪಾ ರಾಜೇಶ್ ತಂಡದ ಕಲಾವಿದರು ಗಣಪತಿಯನ್ನು ಸ್ತುತಿಸುವ 'ಪಾಹಿ ಗಣಾಧಿಪಾ...' ನೃತ್ಯ ರೂಪಕದ ಮೂಲಕ 'ಕೂಚುಪುಡಿ ನೃತ್ಯ' ಆರಂಭಿಸಿದರು. 'ಭಜರೇ ಗೋಪಾಲಂ...' ಗೀತೆಗೆ ಮನಮೋಹಕ ನೃತ್ಯ ಪ್ರದರ್ಶಿಸಿ ಕೃಷ್ಣನ ಮನ ಮೋಹಕ ಬಾಲ ಲೀಲೆಯನ್ನು ಕಣ್ಣಿಗೆ ಕಟ್ಟಿದರು. ಕೊನೆಯಲ್ಲಿ ಕೊಲ್ಕತ್ತಾದ ವಿದುಷಿ ಕೌಶಿಕಿ ಚಕ್ರವರ್ತಿ ಅವರು ಹಿಂದೂಸ್ತಾನಿ ಗಾಯನದ ಮೂಲಕ ಪ್ರೇಕ್ಷಕರ ಹೃನ್ಮನ ತಣಿಸಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಇನ್ನಿತರ ಗಣ್ಯರು ಒಡೆಯರ್ ಕೃತಿಗಳ ಗಾಯನ ವಾದ್ಯ ವೈಭವ ಹಾಗೂ ಕೂಚುಪುಡಿ ನೃತ್ಯರೂಪಕ ವೀಕ್ಷಿಸಿ, ಕಲಾವಿದರನ್ನು ಅಭಿನಂದಿಸಿದರು.

ಈ ವೇಳೆ ಸಚಿವ ಆರಗ ಜ್ಞಾನೇಂದ್ರ ಮಾತನಾಡಿ, ಈ ನಾಡಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಮೈಸೂರು ದಸರಾ ನೋಡಬೇಕೆಂಬ ಕನಸಿದೆ. ಮೈಸೂರು ಮಹಾರಾಜರು ವಿಶ್ವದಲ್ಲೇ ಮಾದರಿ ಆಡಳಿತ ನೀಡಿದ ದೊರೆಗಳಾಗಿದ್ದಾರೆ. ಈ ನೆಲ ಅದೆಷ್ಟೋ ಮಹಾನ್ ಕಲಾವಿದರಿಗೆ ನೆಲೆ ನೀಡಿ ಬೆಳೆಸಿದೆ. ಇಂತಹ ರಾಜರಾಳಿದ ನಾಡಲ್ಲಿ ಹುಟ್ಟಿರುವ ನಾವೆಲ್ಲಾ ಧನ್ಯರು ಎಂದು ಕೊಂಡಾಡಿದರು.

ಸಾಹಿತ್ಯಕ್ಕೆ ಸಮಾಜ ಬದಲಿಸುವ ಶಕ್ತಿ ಇದೆ: ಜಿಟಿಡಿ

ದಸರಾ ಯುವ ಕವಿಗೋಷ್ಠಿಗೆ ಚಾಲನೆ



ಮೈಸೂರಿನಲ್ಲಿ ದಸರಾ ಯುವ ಕವಿಗೋಷ್ಠಿಗೆ ಚಾಲನೆ ನೀಡಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು. ಸಚಿವರಾದ ಎಸ್.ಟಿ.ಸೋಮಶೇಖರ್, ಬಿ.ಸಿ.ಪಾಟೀಲ್, ಪ್ರಸಿದ್ಧ ಕವಿ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ, ವಿಮರ್ಶಕಿ ಡಾ.ಮಂಗಳಾ ಪ್ರಿಯದರ್ಶಿನಿ ಇನ್ನಿತರರು ಇದ್ದರು.


ಮೈಸೂರು, ಸೆ.30(ಆರ್‌ಕೆಬಿ)– ಸಾಹಿತ್ಯಕ್ಕೆ ಸಮಾಜ ಬದಲಾಯಿಸುವ ಶಕ್ತಿಯಿದೆ. ಕುವೆಂಪು, ಬೇಂದ್ರೆ, ಕಾರಂತರಂತಹ ಹಿರಿಯ ಸಾಹಿತಿಗಳನ್ನು ಯುವ ಸಾಹಿತಿಗಳು ಸ್ಫೂರ್ತಿಯಾಗಿಸಿಕೊಂಡು ನೆಲ, ಜಲ, ಭಾಷೆ ಸಂರಕ್ಷಿಸಬೇಕು. ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಅವರ ದಾರಿಯಲ್ಲಿ ಸಾಗಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಯುವ ಕವಿಗಳಿಗೆ ಸಲಹೆ ನೀಡಿದರು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಶುಕ್ರವಾರ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಯುವ ಕವಿಗೋಷ್ಠಿ'ಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕೃಷಿ ಸಚಿವ ಬಿ.ಸಿ.ಪಾಟೀಲ್ ಸಮ್ಮುಖದಲ್ಲಿ ಕವಿಗೋಷ್ಠಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಎಲೆಮರೆಕಾಯಂತಿರುವ ಯುವ ಕವಿಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕಾರ್ಯ ಆಗಬೇಕಿದೆ. ಜೀವನ ಮೌಲ್ಯಗಳನ್ನು ಬೆಳೆಸುವ ಹಾಗೂ ಸಾಮಾಜಿಕ, ಮಾನವೀಯ ನೆಲೆಯಲ್ಲಿ ಸಾಹಿತ್ಯ ರಚಿಸುವ ಜವಾಬ್ದಾರಿ ಯುವ ಕವಿಗಳದ್ದಾಗಿದೆ ಎಂದು ಹೇಳಿದರು.

ಶಬ್ಧ, ಸಂಗೀತ ಸೇರಿದಾಗ ಅದುವೇ ಕವಿತೆ

ಪ್ರಸಿದ್ಧ ಕವಿ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ ಅಭಿಮತ



ಮೈಸೂರು, ಸೆ.30(ಆರ್‌ಕೆಬಿ)– ಒಬ್ಬ ಮನುಷ್ಯ ಮತ್ತೊಬ್ಬ, ಮನುಷ್ಯನ ನಡುವೆ ನಡೆಯುವ ಪಿಸುಮಾತುಗಳೇ ಕವಿತೆಯ ರೂಪವಾಗಿದೆ. ಕವಿತೆ ಕೇವಲ ಅರ್ಥದ ಅಭಿವ್ಯಕ್ತಿಯಲ್ಲ. ನಾದದ ಅಭಿವ್ಯಕ್ತಿ. ಶಬ್ಧ ಮತ್ತು ಸಂಗೀತ ಸೇರಿದಾಗ ಅದು ಕವಿತೆಯಾಗುತ್ತದೆ ಎಂದು ಪ್ರಸಿದ್ಧ ಕವಿ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ ತಿಳಿಸಿದರು.

ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ದಸರಾ ಕವಿಗೋಷ್ಠಿಯಲ್ಲಿ ಯುವ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾಷೆಯ ಶಕ್ತಿಯನ್ನು ಪೂರ್ಣವಾಗಿ ಬಳಸಿಕೊಂಡಾಗ ಕವಿತೆಗೆ ಶಕ್ತಿ ಬರುತ್ತದೆ. ಕವಿತೆಗಳ ಸೂಕ್ಷ್ಮತೆಯನ್ನು ಗಮನಿಸಬೇಕು. ಹಾಗೆ ನೋಡದಿದ್ದರೆ ಕವಿತೆಯ ಸ್ವಾರಸ್ಯವನ್ನು ನಾವು ಕಳೆದುಕೊಳ್ಳುತ್ತೇವೆ. ಕವಿತೆಯನ್ನು ಎಲ್ಲಿ ಹುಡುಕಿದರೆ ಸ್ಪಂದನೆ ಸಿಗುತ್ತದೆ ಎಂಬುದು ಮುಖ್ಯ. ಕವಿತೆಯಲ್ಲಿ ಸೂಕ್ಷ್ಮಗಳೆಲ್ಲವೂ ಅಡಗಿರುತ್ತದೆ. ಅದನ್ನು ಹುಡುಕಿದರೆ ಅದರ ಅನುಭವ ಸಿಗುತ್ತದೆ. ಯುವ ಕವಿಗಳು ದೊಡ್ಡ ದೊಡ್ಡ ವಿಮರ್ಶಕರು ಬರೆದ ವಿಮರ್ಶೆಗಳನ್ನು ಓದಿಕೊಳ್ಳಬೇಕು. ಕವಿತೆ ಎಂದರೆ ಹಿಂದಿನವರು, ಇಂದಿನವರು ಮತ್ತು ಮುಂದಿನವರೊಂದಿಗೆ ಮಾತಾಡಬೇಕು. ಕವಿತೆಗಳಲ್ಲಿ ತ್ರಿಕಾಲದ ವಿಚಾರ ಇರಬೇಕು. ಹಾಗಾಗಿ ಯುವ ಕವಿಗಳು ತ್ರಿಕಾಲ ವಾದ, ಸತ್ಯ ಶೋಧನೆಯ ಸೂಕ್ಷ್ಮ ಕವಿತೆಗಳನ್ನು ಬರೆದು ಕನ್ನಡ ಸಾಹಿತ್ಯದ ಹಿರಿಮೆ ಹೆಚ್ಚಿಸಬೇಕು ಎಂದರು.

ರಾಜಕಾರಣಿಗಳು ಮಾತನಾಡುವಾಗ ಎಷ್ಟು ಜನ ಸಭಿಕರಿದ್ದಾರೆ ಎಂಬುದು ಮುಖ್ಯವಾಗುತ್ತದೆ. ಆದರೆ ಕವಿಗಳ ಕಾವ್ಯ ಓದುವಾಗ ಎಷ್ಟು ಜನ ಸೂಕ್ಷ್ಮ ಕಾವ್ಯ ಸಂವೇದಿಗಳಿದ್ದಾರೆ ಎಂಬುದು ಮುಖ್ಯವಾಗುತ್ತದೆ ಎಂದು ಹೇಳಿದರು.

ಕವಿಗೋಷ್ಠಿಯಲ್ಲಿ 30ಕ್ಕೂ ಹೆಚ್ಚು ಕವಿಗಳು ತಮ್ಮ ಕವಿತೆಗಳನ್ನು ವಾಚಿಸಿದರು. ದುರ್ಗೆ, ಧರ್ಮ ಕಾಯುವುದಿಲ್ಲ, ಎನ್ನಾತ್ಮದ ರೊಟ್ಟಿ, ನನ್ನ ರಾಮ, ಪಯಣ, ಯುವಕರು, ನನ್ನೂರು ಎಂಬಿತ್ಯಾದಿ ಕವಿತೆಗಳು ಕೇಳುಗರನ್ನು ರಂಜಿಸಿದವು.

ಪ್ರಸಿದ್ಧ ಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಖ್ಯಾತ ವಿಮರ್ಶಕಿ ಡಾ.ಮಂಗಳಾ ಪ್ರಿಯದರ್ಶಿನಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಮೇಯರ್ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್, ದಸರಾ ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ, ಕಾರ್ಯಾಧ್ಯಕ್ಷ ಡಾ.ಎಂ.ಜಿ.ಮಂಜುನಾಥ್, ಕಾರ್ಯದರ್ಶಿ ಹೆಚ್.ಡಿ.ಗಿರೀಶ್, ಉಪಸಮಿತಿ ಅಧ್ಯಕ್ಷ ಸಿ.ಬಿ.ಬಸವರಾಜಪ್ಪ ಉಪಾಧ್ಯಕ್ಷರಾದ ಎನ್.ರವಿ, ರಾಜಮಣಿ, ಶಿವಣ್ಣ ಸದಸ್ಯರಾದ ಡಾ.ಜಯಪ್ಪ ಹೊನ್ನಾಳಿ, ಪುರುಷೋತ್ತಮ್, ಗುರುಸ್ವಾಮಿ, ಭಾಸ್ಕರ್, ಭ್ರಮರ ಸಂಜೀವ್, ಭೈರಪ್ಪ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 1 ಅಕ್ಟೋಬರ್ 2022

ರಾಜ್ಯದಲ್ಲಿ ರಾಹುಲ್ ಗಾಂಧಿ ಭಾರತ ಐಕ್ಯತಾ ಯಾತ್ರೆ ಆರಂಭ: ಸಾವಿರಾರು ಮಂದಿ ಸಾಥ್

ಒಂದನೇ ಪುಟದಿಂದ

ಎಂ.ಬಿ.ಪಾಟೀಲ್, ಕೆ.ಜೆ.ಜಾರ್ಜ್, ಹೆಚ್.ಸಿ.ಮಹದೇವಪ್ಪ, ಡಾ.ಜಿ.ಪರಮೇಶ್ವರ್, ಮಾಜಿ ಸಂಸದ ಕೆ.ಹೆಚ್.ಮುನಿಯಪ್ಪ ಸೇರಿದಂತೆ ನೂರಾರು ಮುಖಂಡರು ಹಾಗೂ ಸಾವಿರಾರು ಕಾರ್ಯಕರ್ತರು ಹೆಜ್ಜೆ ಹಾಕಿದರು.

ದಾರಿಯುದ್ದಕ್ಕೂ ಆತಿಥ್ಯ: ಪಾದಯಾತ್ರೆ ಆರಂಭದ ಸ್ಥಳದಿಂದ ಅರ್ಧ ಕಿ.ಮೀ ದೂರ ಕ್ರಮಿಸುತ್ತಿದ್ದಂತೆ ಹೆದ್ದಾರಿಯ ಎರಡೂ ಬದಿಗಳಲ್ಲಿ ಸ್ಥಳೀಯ ಮುಖಂಡರು ಎಳನೀರು, ತಂಪು ಪಾನೀಯ, ಮಜ್ಜಿಗೆ, ಬ್ರೆಡ್, ಬಿಸ್ಕತ್, ಬಾಟಲಿ ನೀರು ವ್ಯವಸ್ಥೆ ಮಾಡಿ ಬಿಸಿಲಿನಲ್ಲಿ ನಡೆದು ಬಂದ ಪಾದಯಾತ್ರಿಗಳ ದಣಿವು ನೀಗಿಸಿದರು.

ಕಲಾ ತಂಡಗಳ ಮೆರಗು: ಕಂಸಾಳೆ, ವೀರಗಾಸೆ, ವೀರಭದ್ರ ಕುಣಿತ, ಗೊರವ ಕುಣಿತ, ಬುಡಕಟ್ಟು ಹಾಡಿ ಜನರ ನೃತ್ಯ, ಡೋಲು ಸೇರಿದಂತೆ ಇನ್ನಿತರ ವಿವಿಧ ಬಗೆಯ ಕಲಾ ತಂಡಗಳು ಪಾದಯಾತ್ರೆಯ ಮೆರಗು ಹೆಚ್ಚಿಸಿದವು. ವೇದಿಕೆ ಕಾರ್ಯಕ್ರಮ ಆರಂಭಕ್ಕೂ ಮುನ್ನ ವೇದಿಕೆ ಮುಂಭಾಗ ನೃತ್ಯ ಪ್ರದರ್ಶಿಸಿ ಗಮನ ಸೆಳೆದವು.

ಫ್ಲೆಕ್ಸ್, ಬ್ಯಾನರ್ ರಂಗು: ರಾಹುಲ್ ಗಾಂಧಿ ಬಂಡೀಪುರ ಮಾರ್ಗವಾಗಿ ರಾಜ್ಯ ಪ್ರವೇಶಿಸುವ ಮಾರ್ಗ ಮಧ್ಯೆ ಹಂಗಳ ಗ್ರಾಮದಿಂದ ಅಳವಡಿಸಿದ್ದ ಫ್ಲೆಕ್ಸ್, ಬಂಟಿಂಗ್, ಬ್ಯಾನರ್, ಪಕ್ಷದ ಧ್ವಜಗಳು ಪಟ್ಟಣ ಹಾಗೂ ರಾಷ್ಟ್ರೀಯ ಹೆದ್ದಾರಿಯ ಎರಡು ಬದಿಯಲ್ಲೂ ರಾರಾಜಿಸುತ್ತಿದ್ದವು. ಸುಮಾರು 20 ಕಿ.ಮೀ. ಅಧಿಕ ದೂರ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸಲಾಗಿತ್ತು. ಅಲ್ಲಲ್ಲಿ ಪಕ್ಷದ ನಾಯಕರ ಬೃಹತ್ ಫ್ಲೆಕ್ಸ್‌ಗಳು ಗಮನ ಸೆಳೆದವು.

ಮೊಳಗಿದ ಘೋಷಣೆ: ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಸಹಸ್ರಾರು ಕಾರ್ಯಕರ್ತರು, ಅಭಿಮಾನಿಗಳು 'ಮುಂದಿನ ಪ್ರಧಾನಿ ರಾಹುಲ್ ಗಾಂಧಿ' ಘೋಷಣೆ ಮೊಳಗಿಸಿದರು. ಈ ವೇಳೆ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪರವೂ ಘೋಷಣೆಗಳು ಕೇಳಿಬಂದವು.

ಇದಕ್ಕೂ ಮುನ್ನ ರಾಹುಲ್ ಗಾಂಧಿ ಅವರನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ರಾಜ್ಯ ನಾಯಕರ ದಂಡೇ ಬಂಡೀಪುರ ಕೆಕ್ಕನಹಳ್ಳ ಚೆಕ್‌ಪೋಸ್ಟ್‌ಗೆ ತೆರಳಿ, ಸ್ವಾಗತಿಸಿತು. ಈ ವೇಳೆ ಡಾ.ಹೆಚ್.ಸಿ.ಮಹದೇವಪ್ಪ, ಎಂ.ಬಿ.ಪಾಟೀಲ್, ಆರ್.ವಿ.ದೇಶಪಾಂಡೆ, ವೀರಪ್ಪ ಮೊಯಿಲಿ, ಕೆ.ಜೆ.ಜಾರ್ಜ್ ಸೇರಿದಂತೆ ಹತ್ತು ಹಲವು ನಾಯಕರು ಹಾಜರಿದ್ದರು. ಸ್ವಾಗತದ ನಂತರ ರಾಹುಲ್ ಗಾಂಧಿ ಹಾಗೂ ಮುಖಂಡರು ಬಂಡೀಪುರ ಬಳಿಯ ವನಸಿರಿ ಖಾಸಗಿ ರೆಸಾರ್ಟ್‌ನಲ್ಲಿ ಉಪಹಾರ ಸೇವಿಸಿದರು. ನಂತರ ಗುಂಡ್ಲುಪೇಟೆಗೆ ಆಗಮಿಸಿದ ರಾಹುಲ್ ಗಾಂಧಿಯವರನ್ನು ಅಂಬೇಡ್ಕರ್ ಭವನದ ಮುಂಭಾಗದ ವೇದಿಕೆಯ ಬಳಿ ಡಿ.ಕೆ.ಶಿವಕುಮಾರ್, ಇತರೆ ಮುಖಂಡರು ಸ್ವಾಗತಿಸಿ, ವೇದಿಕೆಗೆ ಕರೆದೊಯ್ದರು.

240 ಮಂದಿಗೆ ವೇದಿಕೆಯಲ್ಲಿ ಆಸನ ವ್ಯವಸ್ಥೆ: ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಮುಂಭಾಗದ ಬೃಹತ್ ವೇದಿಕೆ ಮೇಲೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಹರಿಪ್ರಸಾದ್, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ರಾಜ್ಯ ಇನ್ನಿತರ ಪ್ರಮುಖ ನಾಯಕರು, ಮುಖಂಡರು ಸೇರಿ 240 ಮಂದಿಗೆ ವೇದಿಕೆಯಲ್ಲಿ ಸ್ಥಾನ ಕಲ್ಪಿಸಲಾಗಿತ್ತು. ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ನಗಾರಿ ಬಾರಿಸಿ ಗಿಡಕ್ಕೆ ನೀರೆರೆಯುವ ಮೂಲಕ ಬಹಿರಂಗ ಸಭೆಯನ್ನು ಉದ್ಘಾಟಿಸಿದರು. ಸಭೆಯ ನಂತರ ಪಾದಯಾತ್ರೆ ಆರಂಭವಾಯಿತು.

ತಿಂಡಿ-ಊಟದ ವ್ಯವಸ್ಥೆ: ಪಾದಯಾತ್ರೆಗೆ ಬೆಳಗ್ಗೆಯೇ ಆಗಮಿಸಿದ ಜನರಿಗೆ ಪಟ್ಟಣದ ಜೆಎಸ್‌ಎಸ್ ಕಲಾ ಮಂದಿರ, ಸೋಮೇಶ್ವರ ವಿದ್ಯಾರ್ಥಿನಿಲಯ, ಕನಕ ಭವನ ಸೇರಿದಂತೆ ಹಲವು ಕಡೆ ಸುಮಾರು 10 ಸಾವಿರ ಮಂದಿಗೆ ಉಪ್ಪಿಟ್ಟು-ಕೇಸರಿಬಾತ್ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ ಪಟ್ಟಣದ ಹೊರವಲಯದ ಕೆಬ್ಬೆಕಟ್ಟೆ ಶನೇಶ್ವರ ದೇವಾಲಯದ ಬಳಿ ನಿರ್ಮಾಣ ಮಾಡಿದ್ದ ಬೃಹತ್ ಟೆಂಟ್‌ನಲ್ಲಿ ಸುಮಾರು 30 ಸಾವಿರ ಮಂದಿಗೆ ವೆಜ್ ಪಲಾವ್, ಅನ್ನ-ಸಾಂಬಾರ್, ಜಿಲೇಬಿ, ಹಪ್ಪಳ, ಉಪ್ಪಿನಕಾಯಿ ಹಾಗೂ ವಿವಿಐಪಿಗಳಿಗೆ ಇದರ ಜೊತೆ ಶಾವಿಗೆ ಪಾಯಸ, ಮುದ್ದೆ ಊಟ ವ್ಯವಸ್ಥೆ ಮಾಡಲಾಗಿತ್ತು.

ಸಂಚಾರ ವ್ಯತ್ಯಯ: ಡಿಸಿ ಸೂಚನೆ ಮೇರೆಗೆ ತಾಲೂಕಿನಾದ್ಯಂತ ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿತ್ತು. ಈ ಕಾರಣದಿಂದ ಕೇರಳ ಮತ್ತು ತಮಿಳುನಾಡಿನಿಂದ ಬರುವ ವಾಹನಗಳು ಬದಲಿ ಮಾರ್ಗದಲ್ಲಿ ಸಂಚರಿಸಿದವು. ಜೊತೆಗೆ ಗ್ರಾಮೀಣ ಪ್ರದೇಶಕ್ಕೆ ಸಂಚರಿಸುವ ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸಿದವು. ಪಾದಯಾತ್ರೆ ಮುಂದೆ ಸಾಗಿದ ನಂತರ ಪಟ್ಟಣ ಹೆದ್ದಾರಿಯಲ್ಲಿ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿ ವಾಹನ ಸವಾರರು, ಪ್ರಯಾಣಿಕರು ಪರದಾಡಿದರು.

ಕಂಟೈನರ್ ವಾಸ್ತವ್ಯ: ರಾಹುಲ್ ಗಾಂಧಿ ಸೇರಿದಂತೆ ಪಾದಯಾತ್ರೆಯಲ್ಲಿ ಭಾಗವಹಿಸುವ ಗಣ್ಯರಿಗೆ ರಾತ್ರಿ ವಾಸ್ತವ್ಯಕ್ಕೆ ಕಂಟೈನರ್ ಬಳಸಲಾಗುತ್ತಿದೆ. ಕೇರಳ ಮತ್ತು ತಮಿಳುನಾಡಿನಿಂದ ಗುಂಡ್ಲುಪೇಟೆ ಮೂಲಕ ಸಾಗಿದ 60 ಕಂಟೈನರ್‌ಗಳು ಸರತಿ ಸಾಲಿನಲ್ಲಿ ಬೇಗೂರಿನಲ್ಲಿ ವಾಸ್ತವ್ಯಕ್ಕೆ ನಿಗದಿಪಡಿಸಿದ ಜಾಗದಲ್ಲಿ ನಿಂತವು. ರಾಹುಲ್ ಗಾಂಧಿ ಅವರೊಂದಿಗೆ ಪ್ರತಿ ದಿನ ಹೆಜ್ಜೆ ಹಾಕುವ ಗಣ್ಯ ಪಾದಯಾತ್ರಿಗಳು ರಾತ್ರಿ ಈ ಕಂಟೈನರ್‌ಗಳಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಬೇಗೂರು ತಲುಪಿದ ಯಾತ್ರೆ: ಶುಕ್ರವಾರ ಮಧ್ಯಾಹ್ನದ ಭೋಜನ ವಿರಾಮದ ನಂತರ ಸಂಜೆ 4.20ಕ್ಕೆ ಮತ್ತೆ ಪಾದಯಾತ್ರೆ ಆರಂಭಿಸಿದ ರಾಹುಲ್ ಗಾಂಧಿ ಹಾಗೂ ಇತರರು, ರಾತ್ರಿ 7.15ಕ್ಕೆ ಬೇಗೂರು ತಲುಪಿದರು. ಶನಿವಾರ ಬೆಳಗ್ಗೆ 6.30ಕ್ಕೆ ಮತ್ತೆ ಯಾತ್ರೆ ಹೊರಡಲಿದ್ದು, ನಂಜನಗೂಡು ಗಡಿ ಕಳಲೆ ಗೇಟ್‌ನತ್ತ ಸಾಗಲಿದೆ.

ಗಮನ ಸೆಳೆದ ವಿಮಾನ ಹಾರಾಟ

ಇಂದಿಲ್ಲಿ ನಡೆದ ಭಾರತ ಐಕ್ಯತಾ ಯಾತ್ರೆ ಬಹಿರಂಗ ಸಭೆ ವೇಳೆ ವಿಮಾನ ಹಾರಾಟ ಗಮನ ಸೆಳೆಯಿತು. ಬಹಿರಂಗ ಸಭೆ ಮುಗಿಯುತ್ತಿದ್ದಂತೆಯೇ ವಿಮಾನವೊಂದು ಹಾರಾಟ ನಡೆಸಿತು. NSUI WELCOMES RAHUL GANDHI JI ಎಂದು ಇಂಗ್ಲಿಷ್‌ನಲ್ಲಿ ಬರೆದಿದ್ದ ಬ್ಯಾನರ್ ವಿಮಾನದ ಹಿಂದೆ ತೇಲುತ್ತಿತ್ತು. ಈ ವಿಮಾನ ಹತ್ತಾರು ಬಾರಿ ಪಟ್ಟಣ ಹಾಗೂ ಪಾದಯಾತ್ರೆ ತೆರಳುತ್ತಿದ್ದ ರಸ್ತೆಯ ಮುಂಚೂಣಿಯಲ್ಲಿ ಹಾರಾಡಿತು. ಇದು ಸಾರ್ವಜನಿಕರ ಗಮನ ಸೆಳೆಯಿತು.

ಹಾರಾಡಿದ ಪೇಸಿಎಂ ಧ್ವಜ

ಗುಂಡ್ಲುಪೇಟೆಯಿಂದ ಆರಂಭವಾದ ಭಾರತ ಐಕ್ಯತಾ ಯಾತ್ರೆಯಲ್ಲಿ ವಿಜಯಪುರ ಜಿಲ್ಲೆಯ ಯುವಕ ಪೇಸಿಎಂ ಟೀ ಶರ್ಟ್, ಧ್ವಜ ಹಿಡಿದು ಹೆಜ್ಜೆ ಹಾಕುವ ಮೂಲಕ ಗಮನ ಸೆಳೆದ. ವಿಜಯಕುಮಾರ್ ಸಿಂಧಗಿ ಎಂಬ ಯುವಕ ಪೇಸಿಎಂ ಎಂಬ ಟೀ ಶರ್ಟ್ ಹಾಕಿಕೊಂಡು ಹೆಜ್ಜೆ ಹಾಕುತ್ತಿದ್ದ ಯುವಕ, ಬಿಜೆಪಿ 40% ಸರ್ಕಾರ. ಯುವಕರಿಗೆ ಉದ್ಯೋಗ ಕೊಡದೇ ಬೀದಿಪಾಲು ಮಾಡುತ್ತಿರುವ ಸರ್ಕಾರವನ್ನು ತೆಗೆದೇ ತೆಗೆಯುತ್ತೇವೆ ಎಂದು ವಿಶ್ವಾಸ ಹೊರಹಾಕಿದ್ದಾರೆ.

ಕೆಬ್ಬೆಕಟ್ಟೆ ಬಳಿ ವಿಶ್ರಾಂತಿ, ಸಂವಾದ...

ಪಟ್ಟಣದ ಹೊರವಲಯದ ಸುಮಾರು 4 ಕಿ.ಮೀ ದೂರದ ಕೆಬ್ಬೆಕಟ್ಟೆ ಶನೇಶ್ವರ ದೇವಾಲಯ ಬಳಿ ಪಾದಯಾತ್ರಿಗಳಿಗೆ ವಿಶ್ರಾಂತಿಗೆ ಅವಕಾಶ ಕಲ್ಪಿಸಲಾಗಿತ್ತು. 1000 ಮಂದಿ ವಿಐಪಿಗಳು ವಿರಮಿಸಲು ತಾತ್ಕಾಲಿಕ ಟೆಂಟ್ ನಿರ್ಮಿಸಿ ಸಾವಿರ ಹಾಸಿಗೆಗಳ ವ್ಯವಸ್ಥೆ ಮಾಡಲಾಗಿತ್ತು. ಸ್ಥಳದಲ್ಲೇ ಗಣ್ಯರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಲಾಗಿತ್ತು. ಇದೇ ವೇಳೆ ಬಿಳಿಗಿರಿರಂಗನಬೆಟ್ಟ ಬುಡಕಟ್ಟು ಜನರು ಹಾಗೂ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ದುರಂತದಲ್ಲಿ ಮೃತಪಟ್ಟವರ ಕುಟುಂಬದವರೊಂದಿಗೆ ಸಂವಾದ ನಡೆಸಿ, ಅವರ ಸಮಸ್ಯೆ ಆಲಿಸಿದರು. ನಂತರ ಅಲ್ಲೇ ಮಧ್ಯಾಹ್ನದ ಊಟ ಮುಗಿಸಿ, ಬಿಸಿಲು ಕಡಿಮೆಯಾದ ನಂತರ ನಿಗದಿಯಂತೆ ಮತ್ತೆ 4 ಗಂಟೆಗೆ ಬೇಗೂರಿನತ್ತ ಪಾದಯಾತ್ರೆ ಆರಂಭವಾಯಿತು.

ನಮ್ಮ ವಿಚಾರವನ್ನು ಜನರಿಗೆ ತಲುಪಿಸಲು ಉಳಿದಿರುವ ಏಕೈಕ ಮಾರ್ಗ 'ಭಾರತ ಐಕ್ಯತಾ ಯಾತ್ರೆ'

●ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆ ●ಸಂಸತ್, ವಿಧಾನಸಭೆಯಲ್ಲಿ ನಮ್ಮ ಮಾತಿಗೆ ಅವಕಾಶ ಇಲ್ಲ ●ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ

ಗುಂಡ್ಲುಪೇಟೆ,ಸೆ.30-ನಮ್ಮ ವಿಚಾರಗಳನ್ನು ಹೇಳಲು ಈಗ ಯಾವುದೇ ದಾರಿಗಳು ಉಳಿದಿಲ್ಲ. ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಾತನಾಡಲು ಅವಕಾಶ ನೀಡುತ್ತಿಲ್ಲ. ನಮ್ಮ ಅಭಿವ್ಯಕ್ತಿಯ ಎಲ್ಲಾ ದಾರಿಗಳು ಮುಚ್ಚಿಹೋಗಿರುವ ಹಿನ್ನೆಲೆಯಲ್ಲಿ ಜನಸಾಮಾನ್ಯರನ್ನು ತಲುಪಲು ಪಕ್ಷಕ್ಕೆ ಉಳಿದಿರುವ ಏಕೈಕ ಆಯ್ಕೆ ಭಾರತ ಐಕ್ಯತಾ ಯಾತ್ರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಾರೆ.

ಗುಂಡ್ಲುಪೇಟೆಯ ಅಂಬೇಡ್ಕರ್ ಸಮುದಾಯ ಭವನದ ಮುಂಭಾಗದಲ್ಲಿ ಏರ್ಪಡಿಸಿದ್ದ ಭಾರತ ಐಕ್ಯತಾ ಯಾತ್ರೆಯ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ವಿವಿಧ ಸಂಸ್ಥೆಗಳಿವೆ. ಮಾಧ್ಯಮಗಳು ಮತ್ತು ಸಂಸತ್ತು ಕೂಡ ಇವೆ. ಆದರೆ, ನಾವು ಯಾವುದೇ ವಿಚಾರದಲ್ಲಿ ವಿರೋಧ ವ್ಯಕ್ತಪಡಿಸುವಾಗ ಇವೆಲ್ಲವುಗಳನ್ನು ತಡೆ ಹಿಡಿಯಲಾಗುತ್ತಿದೆ. ಮಾಧ್ಯಮಗಳ ಮೇಲೆ ಸರ್ಕಾರ ಸಂಪೂರ್ಣ ಹಿಡಿತ ಹೊಂದಿರುವುದರಿಂದ ಅವುಗಳು ನಮ್ಮ ಮಾತನ್ನು ಕೇಳುವುದಿಲ್ಲ. ನಾವು ಮಾತನಾಡಲು ಆರಂಭಿಸಿದರೆ ಸಂಸತ್ತಿನಲ್ಲಿ ನಮ್ಮ ಮೈಕ್‌ಗಳನ್ನು ಮ್ಯೂಟ್ ಮಾಡಲಾಗುತ್ತದೆ. ವಿಧಾನಸಭೆಗಳಲ್ಲೂ ಕಾರ್ಯನಿರ್ವಹಿಸಲು ಅವಕಾಶವಿಲ್ಲ ಮತ್ತು ಪ್ರತಿಪಕ್ಷಗಳಿಗೆ ಕಿರುಕುಳ ನೀಡಲಾಗುತ್ತಿದೆ. ಈ ಪರಿಸ್ಥಿತಿಯಲ್ಲಿ ನಮಗೆ ಉಳಿದಿರುವ ಏಕೈಕ ಆಯ್ಕೆ ಭಾರತ ಐಕ್ಯತಾ ಯಾತ್ರೆ ಎಂದರು.

ದೇಶದ ಯಾವ ಶಕ್ತಿಯೂ ಈ ಯಾತ್ರೆಯನ್ನು ತಡೆಯಲು ಸಾಧ್ಯವಿಲ್ಲ. ಏಕೆಂದರೆ, ಇದು 'ಭಾರತದ ನಡಿಗೆ'. ಇದು ಭಾರತದ ಧ್ವನಿಯನ್ನು ಕೇಳುವ ಮೆರವಣಿಗೆಯಾಗಿದ್ದು, ಇದನ್ನು ಯಾರೂ ಹತ್ತಿಕ್ಕಲು ಸಾಧ್ಯವಿಲ್ಲ' ಎಂದು ಹೇಳಿದರು.

ಮುಂದಿನ 21 ದಿನಗಳಲ್ಲಿ ಯಾತ್ರೆಯು ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳ ಮೂಲಕ 511 ಕಿಲೋಮೀಟರ್‌ಗಳನ್ನು ಕ್ರಮಿಸಲಿದೆ. ಈ ವೇಳೆ ಕರ್ನಾಟಕದ ನೋವನ್ನು ಕೇಳುತ್ತೇವೆ. ಮುಂದಿನ ದಿನಗಳಲ್ಲಿ ನೀವು ನನ್ನೊಂದಿಗೆ ಯಾತ್ರೆಯಲ್ಲಿ ಬರುತ್ತೀರಿ ಮತ್ತು ಕರ್ನಾಟಕದ ನೋವನ್ನು ಕೇಳುತ್ತೀರಿ. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಭ್ರಷ್ಟಾಚಾರ, ನಿರುದ್ಯೋಗ ಮತ್ತು ಬೆಲೆ ಏರಿಕೆ ಬಗ್ಗೆ ಕೇಳುತ್ತೀರಿ ಎಂದರು.

ಈ ಯಾತ್ರೆಯ ಉದ್ದೇಶವು ಭಾರತೀಯ ಸಂವಿಧಾನವನ್ನು ಉಳಿಸುವುದು ಮತ್ತು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ದ್ವೇಷ ಮತ್ತು ಹಿಂಸೆಯ ಸಿದ್ಧಾಂತದ ವಿರುದ್ಧ ನಿಲ್ಲುವುದಾಗಿದೆ. ಸಂವಿಧಾನವಿಲ್ಲದೆ ಈ ತ್ರಿವರ್ಣ ಧ್ವಜಕ್ಕೆ ಗೌರವವಿಲ್ಲ ಎಂದರು. ಬೆಲೆ ಏರಿಕೆ, ನಿರುದ್ಯೋಗ, ರೈತರ ಮೇಲಿನ ದೌರ್ಜನ್ಯ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಖಾಸಗೀಕರಣದ ವಿರುದ್ಧದ ಹೋರಾಟವನ್ನೂ ಯಾತ್ರೆ ಒಳಗೊಂಡಿದೆ. ಈ ಯಾತ್ರೆಯ ಉದ್ದೇಶವು ಕೇವಲ ಭಾಷಣ ಮಾಡುವುದಲ್ಲ, ಆದರೆ ನಿಮ್ಮ ಮಾತನ್ನು ಕೇಳುವುದಾಗಿದೆ ಎಂದು ಅವರು ಹೇಳಿದರು.

ನಮ್ಮಪ್ಪ ಇದ್ದಾಗ ಏನು ಕೇಳಿದ್ರು ಕೊಡಿಸ್ತಿದ್ರು; ಈಗ ನಮ್ಮಮ್ಮನಿಗೆ ಆಗ್ತಿಲ್ಲ

●ಚಾಮರಾಜನಗರ ಆಕ್ಸಿಜನ್ ದುರಂತದ ಸಂತ್ರಸ್ತ ಪುಟ್ಟ ಬಾಲಕಿಯ ದಯಾನೀಯ ಅಳಲು ●ಭಾವುಕರಾದ ರಾಹುಲ್ ಗಾಂಧಿ, ಇತರೆ ನಾಯಕರು...



ಗುಂಡ್ಲುಪೇಟೆ, ಸೆ.30-ಅಲ್ಲಿ ಸೇರಿದ್ದ ಕಾಂಗ್ರೆಸ್‌ನ ಯಾವುದೇ ಮುಖಂಡರ ಮುಖದಲ್ಲೂ ನಗುವಿರಲಿಲ್ಲ. ನೀರವ ಮೌನ ಆವರಿಸಿತ್ತು. ರಾಹುಲ್ ಗಾಂಧಿ ಸೇರಿದಂತೆ ಎಲ್ಲರ ಕಣ್ಣಾಲೆಗಳಲ್ಲೂ ನೀರು ತುಂಬಿತ್ತು. ವಿಪಕ್ಷಗಳ ವಿರುದ್ಧ ಘರ್ಜಿಸುವ ಸಿದ್ದರಾಮಯ್ಯ ಮೌನಕ್ಕೆ ಶರಣಾದರೆ, ಕನಕಪುರ ಬಂಡೆ ಡಿ.ಕೆ.ಶಿವಕುಮಾರ್ ಹೃದಯ ಕರಗಿತ್ತು. ಅವರು ತರ್ಜುಮೆ ಮಾಡುವಾಗ ಅತ್ತೇ ಬಿಟ್ಟರು. ಬಾಲಕಿ ಆಡಿದ ಮಾತುಗಳು ತರ್ಜುಮೆ ಆಗುವವರೆಗೂ ಅರ್ಥವಾಗದಿದ್ದರೂ, ರಾಹುಲ್ ಗಾಂಧಿ ಕಣ್ಣಲ್ಲಿ ನೀರು ಜಿನುಗಿತು. ಇದು ಗುಂಡ್ಲುಪೇಟೆ ಹೊರ ವಲಯದ ಕಬ್ಬೆಕಟ್ಟೆ ಬಳಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಟೆಂಟ್‌ನಲ್ಲಿ ರಾಹುಲ್ ಗಾಂಧಿ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ದುರಂತದಿಂದ ಮೃತಪಟ್ಟವರ ಕುಟುಂಬದವರೊಂದಿಗೆ ನಡೆಸಿದ ಸಂವಾದದ ವೇಳೆ ಕಂಡು ಬಂದ ದೃಶ್ಯ.

ರಾಹುಲ್ ಗಾಂಧಿಯವರತ್ತ ನಡೆದು ಬಂದ ಪುಟ್ಟ ಬಾಲಕಿ ಮೈಕ್ ಹಿಡಿದು ಮೊದಲಿಗೆ 'Good Morning Everybody' ಎಂದು ಇಂಗ್ಲಿಷ್‌ನಲ್ಲಿ ಹೇಳಿ, ನಂತರ ಕನ್ನಡದಲ್ಲಿ ಮಾತು ಆರಂಭಿಸಿ, 'ನಮ್ಮಪ್ಪ ಇದ್ದಾಗ ನಾನು ಏನು ಕೇಳಿದರೂ ತಕ್ಕೊಡ್ತಿದ್ದರು. ನಮ್ಮಪ್ಪ ಆಕ್ಸಿಜನ್ ದುರಂತದಲ್ಲಿ ತೀರಿಹೋದರು. ಈಗ ನಮ್ಮಮ್ಮನಿಗೆ ಏನೂ ತೆಕ್ಕೊಡದಕ್ಕೆ ಆಗ್ತಿಲ್ಲ. ಒಂದು ಪೆನ್ಸಿಲ್ ಕೂಡ ತೆಕ್ಕೊಡೊದಕ್ಕೆ ಆಗ್ತಿಲ್ಲ. ನಮ್ಮಮ್ಮನಿಗೆ ಒಂದು ಗೌರ್ನಮೆಂಟ್ ಕೆಲಸ ಕೊಡಿ. ನಮ್ಗೆ ಓದೋಕೆ ಸಹಾಯ ಮಾಡಿದರೆ ನಾನು ಡಾಕ್ಟ್ರ್ ಆಗ್ತೀನಿ. ನಮ್ಮಪ್ಪನ್ನ ಡಾಕ್ಟ್ರ್‌ಗಳು ಸಾಯಿಸಿ ಬಿಟ್ಟರು. ನಾನ್ ಡಾಕ್ಟರ್ ಆದ್ರೆ ಜನರ ಸೇವೆ ಮಾಡ್ತೇನೆ' ಎಂದು ಹೇಳುತ್ತಿದ್ದರೆ, ಇಡೀ ಸಭಾಂಗಣ ಮೌನಕ್ಕೆ ಶರಣಾಗಿತ್ತು. ಎಲ್ಲರ ಕಣ್ಣಲ್ಲೂ ನೀರು. ಆಕ್ಸಿಜನ್ ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬ ಸದಸ್ಯರ ಆಕ್ರಂದನ ಮುಗಿಲು ಮುಟ್ಟಿತು.

ಭಾಷೆ ಬಾರದಿದ್ದರೂ ಆ ಒಂದು ಸನ್ನಿವೇಶ ಕಂಡು ರಾಹುಲ್ ಗಾಂಧಿ ಕಣ್ಣೀರಾದರು. ಬಾಲಕಿಯ ಮಾತುಗಳನ್ನು ತರ್ಜುಮೆ ಮಾಡುತ್ತಿದ್ದ ಡಿ.ಕೆ.ಶಿವಕುಮಾರ್ ಅವರ ದುಃಖದ ಕಟ್ಟೆ ಒಡೆದು, ಕೆಲ ಕ್ಷಣ ಮಾತನಾಡದೇ ಮೌನ ವಹಿಸಿದರು. ಮಾತು ಆರಂಭಿಸಿದಾಗ ಗದ್ಗದಿತರಾಗಿ ಸಣ್ಣ ಮಗುವಿನಂತೆ ಅತ್ತೇಬಿಟ್ಟರು. ಕೊನೆಗೆ ಉತ್ತರಿಸಿದ ರಾಹುಲ್ ಗಾಂಧಿ, ಆಕ್ಸಿಜನ್ ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬಗಳ ಜೊತೆ ನಾವಿದ್ದೇವೆ. ನಮ್ಮಿಂದ ನಿಮಗೆ ಏನು ಸಹಾಯ ಮಾಡಲು ಸಾಧ್ಯವೋ ಎಲ್ಲವನ್ನೂ ಮಾಡುತ್ತೇವೆ ಎಂದರು. ಈ ವೇಳೆ ಹಲವರು ತಮ್ಮ ದುಃಖ-ದುಮ್ಮಾನಗಳನ್ನು ರಾಹುಲ್‌ಗಾಂಧಿಯವರೊಂದಿಗೆ ಹಂಚಿಕೊಂಡರು. ಸಂವಾದದಲ್ಲಿ ಭಾಗವಹಿಸಿದ್ದ ಬಹುತೇಕ ಮಹಿಳೆಯರು ಮಾತನಾಡುವಾಗ ಗದ್ಗದಿತರಾದರು. ಕೆಲವು ಮಹಿಳೆಯರು ದುಃಖದಿಂದ ಅರ್ಧಕ್ಕೆ ಮಾತು ನಿಲ್ಲಿಸಿ ಕೆಲ ಕ್ಷಣ ತಡೆದು ನಂತರ ಮಾತನಾಡಿದರು. ಆಗ ಪಕ್ಕದಲ್ಲಿದ್ದವರು ಆ ಮಹಿಳೆಯರನ್ನು ಸಂತೈಸುತ್ತಿದ್ದ ದೃಶ್ಯ ಕಂಡು ಬಂತು.

ದೇಶದಲ್ಲಿ ದ್ವೇಷ ರಾಜಕಾರಣ ಮಿತಿ ಮೀರಿದೆ: ಸಿದ್ದರಾಮಯ್ಯ

ಗುಂಡ್ಲುಪೇಟೆ: ಮೋದಿ ಅವರು ಪ್ರಧಾನಿಯಾದ ಮೇಲೆ ದೇಶದಲ್ಲಿ ಧರ್ಮ, ಕೋಮುವಾದ, ಜಾತಿ ಹಾಗೂ ದ್ವೇಷದ ರಾಜಕಾರಣ ಹೆಚ್ಚುತ್ತಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ರಾಹುಲ್ ಗಾಂಧಿಯವರು ದೇಶದಲ್ಲಿ ಕೋಮುವಾದ ರಾಜಕಾರಣಕ್ಕೆ ಬೇಸತ್ತು ಭಾರತ ಐಕ್ಯತಾ ಯಾತ್ರೆ ಆರಂಭಿಸಿದ್ದಾರೆ. ದೇಶದಲ್ಲಿ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರು, ಮಹಿಳೆಯರು, ರೈತರು ಆತಂಕದಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ. ಬಿಜೆಪಿಗೆ ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಮೇಲೆ ಗೌರವ ಇಲ್ಲ. ಅವರಿಗೆ(ಬಿಜೆಪಿ) ಒಬ್ಬ ನಾಯಕ, ಒಂದು ಚಿಹ್ನೆ ಮಾತ್ರ ಗೊತ್ತು ಸಂವಿಧಾನಕ್ಕೆ ವಿರುದ್ಧ ಇರುವ ಬಿಜೆಪಿ ದೇಶವನ್ನು ಧರ್ಮ, ಜಾತಿ ಆಧಾರದಲ್ಲಿ ವಿಭಜಿಸಬೇಕು ಎಂಬ ಉದ್ದೇಶ ಹೊಂದಿದೆ ಎಂದರು.

ರಾಹುಲ್ ಗಾಂಧಿ ಯಾತ್ರೆಯಿಂದ ದೇಶದಲ್ಲಿ ಹೊಸ ಇತಿಹಾಸ ಸೃಷ್ಟಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಭಿಮತ

ಗುಂಡ್ಲುಪೇಟೆ: ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭಾರತೀಯರಲ್ಲಿ ದ್ವೇಷ, ಅಸೂಯೆ ಹೆಚ್ಚಿಸಿದ್ದು, ಅದನ್ನು ತೊಡೆದು ಹಾಕಿ ಎಲ್ಲರನ್ನೂ ಒಗ್ಗೂಡಿಸಬೇಕು ಎಂದು ಈ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ನಿರ್ಮಾಣ ಮಾಡುವುದು, ಯುವಕರ ನಿರುದ್ಯೋಗ ಸಮಸ್ಯೆಗೆ ಪರಿಹಾರ, ರೈತರಿಗೆ ಆದಾಯ ಸಿಗುವಂತೆ ಮಾಡುವುದು, ರಾಜ್ಯದಲ್ಲಿನ ಭ್ರಷ್ಟಾಚಾರ ನಿರ್ಮೂಲನೆ, ಬೆಲೆ ಏರಿಕೆ ಜೊತೆ ಜನರ ಆದಾಯ ಪಾತಾಳಕ್ಕೆ ಕುಸಿದು ವೆಚ್ಚ ಆಕಾಶಕ್ಕೆ ಹೋಗುತ್ತಿರುವುದನ್ನು ತಡೆಯುವುದು; ಯಾತ್ರೆಯ ಉದ್ದೇಶವಾಗಿದೆ ಎಂದರು.

ಮಹಿಳಾ ದಸರಾದಲ್ಲಿ ಮಹಿಳೆಯರ ಸಂಭ್ರಮ

ಬಲೂನ್ ಶೂಟ್, ಮದರಂಗಿ ಸ್ಪರ್ಧೆ, ಫ್ಯಾನ್ಸಿ ಡ್ರೆಸ್, ಗೃಹ ಬಳಕೆ ವಸ್ತುಗಳು, ಆಹಾರ ಪದಾರ್ಥಗಳ ಪ್ರದರ್ಶನ, ಮಾರಾಟ, ಮಹಿಳಾ ಸಂತೆ...

ಮಡಿಕೇರಿ, ಸೆ.30– ಬಲೂನ್ ಶೂಟ್, ಮದರಂಗಿ ಸ್ಪರ್ಧೆ, ಫ್ಯಾನ್ಸಿ ಡ್ರೆಸ್, ಮಹಿಳೆಯರು ತಯಾರಿಸಿದ ಗೃಹ ಬಳಕೆ ವಸ್ತುಗಳು ಹಾಗೂ ಆಹಾರ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ, ಮಹಿಳಾ ಸಂತೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಸನ್ಮಾನ, ಹೀಗೆ ಹಲವು ಕಾರ್ಯಕ್ರಮದಲ್ಲಿ ಮಹಿಳೆಯರು ವಯಸ್ಸಿನ ಭೇದವಿಲ್ಲದೆ ಭಾಗವಹಿಸಿದ್ದು ಮಡಿಕೇರಿ ದಸರಾ ಜನೋತ್ಸವದಲ್ಲಿ ಕಂಡುಬಂದಿತು.





ನಗರದ ಗಾಂಧಿ ಮೈದಾನದ ಕಲಾಸಂಭ್ರಮ ವೇದಿಕೆಯಲ್ಲಿ ಶುಕ್ರವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಮಡಿಕೇರಿ ದಸರಾ ಜನೋತ್ಸವ ಕಾರ್ಯಕ್ರಮದ ಅಂಗವಾಗಿ ನಡೆದ ಮಹಿಳಾ ದಸರಾ ಸಭಾ ಕಾರ್ಯಕ್ರಮಕ್ಕೆ ಗಣ್ಯರು ಹಾಗೂ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರ ಧರ್ಮಪತ್ನಿ ರೂಪಶ್ರೀ ಸತೀಶ್ ಚಾಲನೆ ನೀಡಿದ್ದು ವಿಶೇಷವಾಗಿತ್ತು.

ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಮಾತನಾಡಿ, ವರ್ಷಗಳ ಹಿಂದೆ ಜಿಲ್ಲೆಯ ಮೂರು ಉನ್ನತ ಸ್ಥಾನಗಳನ್ನು ಮಹಿಳೆಯರು ಅಲಂಕರಿಸಿದ್ದರು, ಇದು ಮಹಿಳೆಯರಿಗೆ ಹೆಮ್ಮೆಯ ವಿಷಯವಾಗಿದೆ. ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಮೈಸೂರು ದಸರಾ ಮಾದರಿಯಲ್ಲಿ ಮಡಿಕೇರಿ ದಸರಾ ಕೂಡ ನಡೆಯುತ್ತಿದೆ. ದಸರಾ ಉತ್ಸವದಲ್ಲಿ ನಗರದ ಶಕ್ತಿ ದೇವತೆಗಳ ಆರಾಧನೆ ಹಾಗೂ ಕರಗೋತ್ಸವ ಜೊತೆಗೆ ದಶ ಮಂಟಪಗಳು ಮಡಿಕೇರಿ ದಸರಾದ ವಿಶೇಷ ಎಂದರು. ಜಿಲ್ಲಾಧಿಕಾರಿ ಅವರ ಧರ್ಮಪತ್ನಿ ರೂಪಶ್ರೀ ಸತೀಶ್ ಮಾತನಾಡಿ, ಮೈಸೂರು ಮತ್ತು ಮಡಿಕೇರಿ ದಸರಾ ಒಂದೊಂದು ವಿಶೇಷತೆಗಳಿಂದ ಕೂಡಿದೆ. ಮಡಿಕೇರಿ ದಸರಾ ಪ್ರತಿಯೊಬ್ಬರನ್ನು ಆಕರ್ಷಿಸುತ್ತಿದೆ ಎಂದರು.

ನಗರಸಭಾ ಮಾಜಿ ಸದಸ್ಯರಾದ ಮೋಂತಿ ಗಣೇಶ್, ನಗರಸಭೆ ನಿವೃತ್ತ ಪೌರಾಯುಕ್ತೆ ಬಿ.ಬಿ.ಪುಷ್ಪಾವತಿ ಮಾತನಾಡಿದರು.

ಕೊಡವ ಸಮಾಜದ ನಿರ್ದೇಶಕಿ ಕನ್ನಂಡ ಕವಿತಾ ಮಾತನಾಡಿ, ಮೈಸೂರು ದಸರಾ ವಿಶ್ವವಿಖ್ಯಾತ ದಸರಾ ಉತ್ಸವವಾಗಿದೆ. ಅದೇ ರೀತಿಯಾಗಿ ಮಡಿಕೇರಿ ದಸರಾವೂ ಕೂಡ ದೇಶದಲ್ಲಿಯೇ ಹೆಸರುವಾಸಿಯಾಗಿದೆ. ಇಲ್ಲಿನ ಶಕ್ತಿ ದೇವತೆಗಳ ಆರಾಧನೆಯೊಂದಿಗೆ ನಡೆಯುವ ಕರಗೋತ್ಸವವು ಎಲ್ಲರ ಆಕರ್ಷಣೀಯವಾಗಿದೆ ಎಂದರು.

ಮಹಿಳೆಯರು ತಮ್ಮ ಒತ್ತಡದ ಜೀವನದ ನಡುವೆಯೂ ಮಹಿಳಾ ದಸರಾದಲ್ಲಿ ಪಾಲ್ಗೊಳ್ಳುವಂತಾಗಬೇಕು. ಇದರಿಂದ ತಮ್ಮ ಒತ್ತಡದ ಬದುಕಿನ ಜೊತೆಯಲ್ಲಿ ಉತ್ಸಾಹದಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಇದೊಂದು ಸದಾವಕಾಶವಾಗಿದೆ ಎಂದರು. ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸುರಯ್ಯ ಅಬ್ರಾರ್ ಮಾತನಾಡಿ, ಜಿಲ್ಲೆಯಲ್ಲಿ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಬಹಳಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ ಇದು ಹೆಮ್ಮೆಯ ವಿಷಯ ಎಂದು ಹೇಳಿದರು.

ನಗರಸಭಾ ವ್ಯವಸ್ಥಾಪಕಿ ಸುಜಾತ ಮಾತನಾಡಿ, ಕಳೆದೆರಡು ವರ್ಷಗಳಿಂದ ಕಳೆಗುಂದಿದ ಮಡಿಕೇರಿ ದಸರಾ ಈ ಬಾರಿ ವಿಜೃಂಭಣೆಯಿಂದ ನಡೆಯುತ್ತಿದೆ. ಮಹಿಳೆಯರು ರಾಜಕೀಯ, ಕ್ರೀಡೆ, ಸಾಹಿತ್ಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ ಎಂದರು.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತೆ ನಯನ ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಸಾಧನೆ ಮಾಡಿದ ಮಹಿಳೆಯರನ್ನು ಗೌರವಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೆಂಚೆಟ್ಟಿರ ರೇಷ್ಮಾದೇವಯ್ಯ (ಕ್ರೀಡಾ ಕ್ಷೇತ್ರ), ಲಕ್ಷ್ಮಿ (ಪೌರಕಾರ್ಮಿಕರು), ಕೊಕ್ಕಾ ಮುತ್ತಪ್ಪ (ಕ್ರೀಡಾ ಕ್ಷೇತ್ರ), ನಿರ್ಮಲ (ಅಂಗನವಾಡಿ ಕಾರ್ಯಕರ್ತೆ), ಎಂ.ಪಿ.ಕುಸುಮ (ಆಶಾ ಕಾರ್ಯಕರ್ತೆ). ಕಾರ್ಯಕ್ರಮದಲ್ಲಿ ನಗರಸಭೆ ಉಪಾಧ್ಯಕ್ಷೆ ಸವಿತಾ ರಾಕೇಶ್, ನಗರಸಭಾ ಸದಸ್ಯರು, ದಸರಾ ಸಮಿತಿ ಸದಸ್ಯರು, ಮಹಿಳೆಯರು ಇತರರು ಇದ್ದರು.

ಕಡ್ಲೇರ ತುಳಸಿ ಮೋಹನ್ ಪ್ರಾರ್ಥಿಸಿದರು, ಸವಿತಾ ರಾಕೇಶ್ ಅವರು ಸ್ವಾಗತಿಸಿದರು, ಅನಿತಾ ಅವರು ನಿರೂಪಿಸಿದರು, ಶೈಲ ವಂದಿಸಿದರು.

ಮಕ್ಕಳ ದಸರಾ: ತರಕಾರಿ, ಕಾಯಿ ಪಲ್ಯಗಳು, ಸೊಪ್ಪು, ಹಣ್ಣು ಮಾರಾಟ

ಗೋಣಿಕೊಪ್ಪ, ಸೆ.30– ಗೋಣಿಕೊಪ್ಪ ದಸರಾ ಆಯೋಜಿಸಿದ್ದ ಮಕ್ಕಳ ದಸರಾದಲ್ಲಿ ತರಕಾರಿ, ಕಾಯಿ ಪಲ್ಯಗಳು, ಸೊಪ್ಪು, ಹಣ್ಣು, ವಿವಿಧ ತಿಂಡಿಗಳ ಮಾರಾಟ, ವಿಜ್ಞಾನದ ಆವಿಷ್ಕಾರಗಳು, ರಂಗೋಲಿ ಸ್ಪರ್ಧೆ, ಜಾನಪದ ನೃತ್ಯ, ದೇಶ ಭಕ್ತಿ ಗೀತೆ, ಛದ್ಮವೇಷಗಳು ಗಮನ ಸೆಳೆದವು.



ಮಕ್ಕಳು ತರಕಾರಿ, ಹಣ್ಣು ಹಂಪಲು, ಸೊಪ್ಪು, ತಿಂಡಿ ತಿನಿಸುಗಳು ಇನ್ನಿತರ ಗೃಹ ವಸ್ತುಗಳನ್ನು ಮಾರಾಟ ಮಾಡುವ ಮೂಲಕ ವ್ಯಾಪಾರದ ಕೌಶಲ್ಯತೆಯನ್ನು ಅರಿತು ಕೊಂಡರು. ವಿದ್ಯಾರ್ಥಿಗಳು ವಿಜ್ಞಾನದ ಆವಿಷ್ಕಾರಗೊಳಿಸಿದರು. ಜಾನಪದ ನೃತ್ಯ, ಕಾಡಿನ ಮಕ್ಕಳ ಸಾಂಪ್ರದಾಯಕ ಗೀತೆ ಮೂಡಿ ಬಂತು. ಛದ್ಮವೇಷದಲ್ಲಿ ಶ್ರೀ ಕೃಷ್ಣ, ಚಾಮುಂಡೇಶ್ವರಿ ದೈವಿಕ ಭಾವನೆ ಮೂಡಿಸುವ ಭಕ್ತಿ ಆರಾಧಕ ವೇಷಗಳನ್ನು ಮಕ್ಕಳು ತೊಟ್ಟು ಗಮನ ಸೆಳೆದರು.

ವಿಜ್ಞಾನ ಸ್ಪರ್ಧೆಯಲ್ಲಿ ಹನಿ ನೀರಾವರಿ ಮಾದರಿ, ಸೌರಮಂಡಲ, ಜಲಚಕ್ರ, ನವೀಕರಣಗೊಳ್ಳದ ಸಂಪನ್ಮೂಲಗಳ ಬಳಕೆ, ಬೆಳಕಿನ ವಕ್ರಭವನ, ವಿದ್ಯುತ್ ಉತ್ಪಾದನೆ, ಸೌರಶಕ್ತಿಯ ಒಲೆ, ನೀರಿನ ಚಿಲುಮೆಗಳು, ಯು.ಪಿ.ಎಸ್, ವಾಷಿಂಗ್ ಮೆಷಿನ್, ಉಪಕರಣಗಳ ನಿಯಂತ್ರಣ ಇತ್ಯಾದಿ ಮಾದರಿಗಳು ಭವಿಷ್ಯದ ವಿಜ್ಞಾನಿಗಳಾಗುವ ಭರವಸೆ ಮೂಡಿಸಿದರು. ರಾಷ್ಟ್ರೀಯ ಇನ್ಸ್‌ಫೈರ್ ಪ್ರಶಸ್ತಿ ಪುರಸ್ಕೃತ ಸಿಂಚನಭಟ್, ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬೀಳಗಿ ಉದ್ಘಾಟಿಸಿದರು.

ಭಾರತ್ ಜೋಡೋ ಐಕ್ಯತಾ ಯಾತ್ರೆಗೆ ಕೊಡಗಿನಿಂದ 5 ಸಾವಿರ ಮಂದಿ

ಸಿದ್ದಾಪುರ, ಸೆ.30– ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ನೇತೃತ್ವದ ಭಾರತ್ ಜೋಡೋ ಐಕ್ಯತಾ ಯಾತ್ರೆಗೆ ಕೊಡಗು ಜಿಲ್ಲೆಯಿಂದ ಸುಮಾರು 5 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಗೆ ಶನಿವಾರ ಆಗಮಿಸುತ್ತಿರುವ ರಾಹುಲ್‌ಗಾಂಧಿ ಅವರನ್ನು ಜಿಲ್ಲೆಯ ಗಡಿಭಾಗದ ಕಳಲೆ ಗ್ರಾಮದಲ್ಲಿ ಅದ್ಧೂರಿಯಾಗಿ ಸ್ವಾಗತಿಸಲು ಕೊಡಗಿನ ವಾಲಗ, ದಫ್ ಪ್ರದರ್ಶನ ಸೇರಿದಂತೆ ಇತರ ಸಾಂಸ್ಕೃತಿಕ ತಂಡಗಳು ಸಿದ್ಧವಾಗಿವೆ. ಅವರನ್ನು ಸ್ವಾಗತಿಸಿ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದು ಈಗಾಗಲೇ 60ಕ್ಕೂ ಹೆಚ್ಚು ಬಸ್, 20ಕ್ಕೂ ಹೆಚ್ಚು ಮಿನಿ ವ್ಯಾನ್ ಸೇರಿದಂತೆ ಮುಖಂಡರು ಹಾಗೂ ಕಾರ್ಯಕರ್ತರು ತಮ್ಮ ವಾಹನಗಳಲ್ಲಿ ತೆರಳಿ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂದರು. ಜಿಲ್ಲೆಯಲ್ಲಿ ಕಾಂಗ್ರೆಸ್‌ನತ್ತ ಹೆಚ್ಚು ಒಲವು ತೋರುತ್ತಿದ್ದಾರೆ ಮೊದಲ ಬಾರಿಗೆ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ರಾಹುಲ್ ಗಾಂಧಿ ನೇತೃತ್ವದ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದರು.

ಮೈಸೂರು ದಸರಾ ಚಲನ ಚಿತ್ರೋತ್ಸವದಲ್ಲಿ ಪ್ರೇಕ್ಷಕರ ಮನಗೆದ್ದ ಕೊಡವ ಚಿತ್ರ ನಾಡ ಪೆದ ಆಶಾ



ಮಡಿಕೇರಿ, ಸೆ.30– ನಾಡಹಬ್ಬ ಮೈಸೂರು ದಸರಾ ಚಲನಚಿತ್ರೋತ್ಸವದಲ್ಲಿ ಕೊಡವ ಚಲನಚಿತ್ರ 'ನಾಡ ಪೆದ ಆಶಾ' ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಮೈಸೂರಿನ ಮಾಲ್ ಆಫ್ ಮೈಸೂರ್‌ನ ಐನಾಕ್ಸ್ ಥೀಯೇಟರ್‌ನಲ್ಲಿ ಚಿತ್ರ ಪ್ರದರ್ಶನ ಕಂಡ ನಂತರ ಮಾತನಾಡಿದ ಚಿತ್ರದ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಸ್ತ್ರೀಮನದ ಭಾವನೆಗಳನ್ನು ಬೆಳ್ಳಿತೆರೆಯ ಮೇಲೆ ಮೂಡಿಸಿ ಯಶಸ್ಸು ಕಂಡ ತೃಪ್ತಿ ಇದೆ ಎಂದರು.

ಈಗಾಗಲೇ ಹಲವು ಚಿತ್ರಗಳನ್ನು ನಿರ್ಮಿಸಿ, ಪ್ರದರ್ಶಿಸಲಾಗಿದ್ದರೂ, 'ನಾಡ ಪೆದ ಆಶಾ' ಚಿತ್ರ ಅತೀ ಹೆಚ್ಚು ಬಾರಿ ಪ್ರದರ್ಶನ ಕಂಡಿದೆ. ಕೊಡಗಿನಲ್ಲಿ 123 ಪ್ರದರ್ಶನ ಕಂಡ ಯಶಸ್ವೀ ಕೊಡವ ಚಿತ್ರ ಇದಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಚಿತ್ರದ ನಿರ್ಮಾಪಕಿ ಈರಮಂಡ ಹರಿಣಿ ವಿಜಯ್ ಕೊಡವ ಭಾಷೆಯ ಚಿತ್ರವೊಂದು ದಸರಾ ಚಲನಚಿತ್ರೋತ್ಸವದಲ್ಲೂ ಪ್ರದರ್ಶನಗೊಳ್ಳುವ ಮೂಲಕ ಮತ್ತಷ್ಟು ಚಿತ್ರಗಳ ನಿರ್ಮಾಣಕ್ಕೆ ಸ್ಫೂರ್ತಿಯನ್ನು ತುಂಬಿದೆ ಎಂದರು.

ಜನಮೆಚ್ಚುಗೆ: ಮೈಸೂರು ದಸರಾ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಆಶಾ ಚಿತ್ರವನ್ನು ಸಾವಿರಾರು ಮಂದಿ ಕನ್ನಡಿಗರು ಸೇರಿದಂತೆ ಪಂಚ ಭಾಷಾ ಪ್ರೇಕ್ಷಕರು ವೀಕ್ಷಿಸಿದರು. ನಂತರ ಅಭಿಪ್ರಾಯ ಹಂಚಿಕೊಂಡ ಸಿನಿಪ್ರಿಯರು ಚಿತ್ರ ಕೊಡವ ಭಾಷೆಯಲ್ಲಿದ್ದರೂ ಕಲಾವಿದರ ಭಾವನೆಗಳು ಕಥೆಯನ್ನು ಅರ್ಥ ಮಾಡಿಸಿದೆ. ಸಮಾಜಕ್ಕಾಗಿ ಮಿಡಿಯುವ ಹೆಣ್ಣೊಬ್ಬಳ ಮನದಾಳದ ನೋವು ನಲಿವುಗಳನ್ನು ಮನೋಜ್ಞವಾಗಿ ಚಿತ್ರಿಸಲಾಗಿದೆ ಎಂದರು.

ಪಾಂಡವಪುರ ಬಳಿ ಯುವಕನ ಹತ್ಯೆ

ಪಾಂಡವಪುರ, ಸೆ.30– ಹಳೇ ದ್ವೇಷದ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬನನ್ನು ಗುಂಪೊಂದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಮೇಲುಕೋಟೆ ಹೋಬಳಿಯ ನೀಲನಹಳ್ಳಿ ಗೇಟ್ ಬಳಿ ನಡೆದಿದ್ದು, ಸುತ್ತಮುತ್ತಲ ನಾಗರಿಕರನ್ನು ತಲ್ಲಣಗೊಳಿಸಿದೆ ಲಕ್ಷೀಸಾಗರ ಗ್ರಾಮದ ಸ್ವಾಮಿ ಎಂಬುವರ ಮಗ ಧನಂಜಯ (28) ಕೊಲೆಯಾದ ವ್ಯಕ್ತಿ. ಗುರುವಾರ ರಾತ್ರಿ ರೋಹಿತ್ ಮತ್ತು ಸಂಗಡಿಗರು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ. ಘಟನೆಯ ಸಂಬಂಧ ಕೊಲೆಯಾದ ಧನಂಜಯ, ತಂದೆ ಸ್ವಾಮಿ ನೀಡಿದ ದೂರಿನ ಆಧಾರದಲ್ಲಿ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಡಿವೈಎಸ್‌ಪಿ ಸಂದೇಶ್ ಕುಮಾರ್, ಮೇಲುಕೋಟೆ ಇನ್ಸ್‌ಪೆಕ್ಟರ್ ಸುಮಾರಾಣಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆರೋಪಿಗಳು ತಲೆಮರೆಸಿ ಕೊಂಡಿದ್ದಾರೆ. ಘಟನೆ ನಡೆದ ತಡರಾತ್ರಿಯೇ ಮೇಲುಕೋಟೆ ಪೊಲೀಸರಿಗೆ ದೂರು ನೀಡಿದ ಸ್ವಾಮಿ, ನನ್ನ ಮಗ ಸ್ನೇಹಿತರಾದ ಅರುಣ, ಕಿರಣ, ರವಿ ಜೊತೆ ನೀಲನಹಳ್ಳಿ ಗೇಟ್ ಬಳಿಯಿರುವ ಹೋಟೆಲ್‌ನಲ್ಲಿ ಗುರುವಾರ ರಾತ್ರಿ 10–15 ಸುಮಾರಿನಲ್ಲಿ ಊಟ ಮುಗಿಸಿ ಹೊರ ಬರುತ್ತಿದ್ದಾಗ ಅದೇ ಗ್ರಾಮದ ರಂಗಸ್ವಾಮಿ ಎಂಬುವರ ಪುತ್ರ ರೋಹಿತ್, ಮತ್ತು ಸ್ನೇಹಿತರಾದ ದರ್ಶನ್, ರಾಘು, ರಮೇಶ್ ಮತ್ತಿತರರು ಜಗಳ ತೆಗೆದು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ



ಧನಂಜಯ

ಘಟನೆಯ ಸಂಬಂಧ ಮಾಹಿತಿ ನೀಡಿದ ಇನ್ಸ್‌ಪೆಕ್ಟರ್ ಸುಮಾರಾಣಿ ಎರಡು ಗುಂಪುಗಳ ನಡುವೆ ಇದ್ದ ಹಳೆಯ ದ್ವೇಷವೇ ಈ ಘಟನೆಗೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಆರೋಪಿಗಳ ಪತ್ತೆಗೆ ಕ್ರಮ ಜರುಗಿಸಲಾಗಿದ್ದು, ಶೀಘ್ರವೇ ಬಂಧಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಶವವನ್ನು ಪಾಂಡವಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಶವಪರೀಕ್ಷೆ ನಡೆಸಿ ವಾರಸ್ಸುದಾರರಿಗೆ ಒಪ್ಪಿಸಲಾಗಿದೆ. ಘಟನೆ ಹಿನ್ನೆಲೆಯಲ್ಲಿ ಲಕ್ಷ್ಮೀಸಾಗರ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಗ್ರಾಮದಲ್ಲಿ ಪೊಲೀಸ್ ಭದ್ರತೆ ನಿಯೋಜನೆ ಮಾಡಲಾಗಿದೆ.

ಭಾರತದಲ್ಲಿ ಮಹಿಳೆಯರಿಗೆ ವಿಶೇಷ ಗೌರವ



ಶ್ರೀರಂಗಪಟ್ಟಣ, ಸೆ30– ದೇಶದಲ್ಲಿ ಮಹಿಳೆಯರಿಗೆ ವಿಶೇಷ ಗೌರವ ಹಾಗೂ ಸ್ಥಾನಮಾನವಿದ್ದು, ಎಲ್ಲಿ ಮಹಿಳೆಯರನ್ನು ಗೌರವಿಸುತ್ತಾರೆ ಅಲ್ಲಿ ಶಾಂತಿ ನೆಮ್ಮದಿ ನೆಲೆಸುತ್ತದೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಹೇಳಿದರು.

ಪಟ್ಟಣದ ಶ್ರೀರಂಗ ವೇದಿಕೆಯಲ್ಲಿ ನಡೆದ ಮಹಿಳಾ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಸ್ಥಾನವನ್ನು ಪಡೆದುಕೊಳ್ಳುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಮಹಿಳೆಯರಿಗೆ ಸವಲತ್ತುಗಳು ಇರಲಿಲ್ಲ. ಆದರೆ, ಸರ್ಕಾರ ಪ್ರಸ್ತುತ ಮಹಿಳೆಯರಿಗೆ ಅನೇಕ ರೀತಿಯ ಸವಲತ್ತುಗಳನ್ನು ಒದಗಿಸುತ್ತಿದೆ. ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಬೇಕು. ನವರಾತ್ರಿಯ ಹಬ್ಬದಲ್ಲಿ ಎಲ್ಲಾ ಸ್ತ್ರೀ ದೇವತೆಗಳನ್ನು ಪೂಜಿಸುವ ಪದ್ಧತಿಯಿದೆ. ಮಹಿಳಾ ದಸರಾ ಅರ್ಥ ಪೂರ್ಣವಾಗಿ ಆಚರಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಜಿಲ್ಲಾಧಿಕಾರಿ ಎಸ್.ಅಶ್ವತಿ ಮಾತನಾಡಿ, ಪಟ್ಟಣದ ದಸರಾ ಮಹೋತ್ಸವ ಅಂಗವಾಗಿ ಸೆ28ರಿಂದ ನಿರಂತರವಾಗಿ ಯುವ ದಸರಾ, ರೈತ ದಸರಾ, ಕ್ರೀಡಾ ದಸರಾ, ಮಹಿಳಾ ದಸರಾ ಹಾಗೂ ವಿವಿಧ ಕಾರ್ಯಕ್ರಮವನ್ನು ಶ್ರೀರಂಗ ವೇದಿಕೆಯಲ್ಲಿ ಆಯೋಜಿಸಲಾಗಿದೆ. ಎಲ್ಲರೂ ಉತ್ಸುಕರಾಗಿ ತೊಡಗಿಸಿಕೊಂಡಿದ್ದಾರೆ. ಮಹಿಳಾ ದಸರಾದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ತ್ರೀ ಶಕ್ತಿ ಸಂಘದ ಮಹಿಳೆಯರು ಭಾಗವಹಿಸಿರುವುದು ಬಹಳ ಸಂತಸ ತಂದಿದೆ ಎಂದರು.

ಇದೇ ವೇಳೆ ರಂಗೋಲಿ ಸ್ಪರ್ಧೆ ಹಾಗೂ ಮೆಹಂದಿ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ತಹಶೀಲ್ದಾರ್ ಶ್ವೇತಾ ಎನ್.ರವೀಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನಾಗರಾಜು, ಸಿಡಿಪಿಒ ಅಶೋಕ್, ಪುರಸಭೆ ಉಪಾಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮನ್‌ಮುಲ್‌ನಿಂದ ಅಕಾಲಿಕ ಮರಣ ಹೊಂದಿದ ರಾಸುಗಳ ಮಾಲೀಕರಿಗೆ ಚೆಕ್ ವಿತರಣೆ



ಪಾಂಡವಪುರ, ಸೆ30– ಅಕಾಲಿಕ ಮರಣ ಹೊಂದಿದ ರಾಸುಗಳ ಮಾಲೀಕರಿಗೆ ಮನ್‌ಮುಲ್ ಒಕ್ಕೂಟದಿಂದ ನೀಡುವ ವಿಮೆ ಹಣದ ಚೆಕ್‌ಗಳನ್ನು ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ರೈತರು ಡೇರಿಗಳಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು. ಒಕ್ಕೂಟಕ್ಕೆ ಬರುತ್ತಿರುವ ಅರ್ಧದಷ್ಟು ಹಾಲು ಮಾತ್ರ ನೇರವಾಗಿ ಮಾರಾಟವಾಗುತ್ತಿದೆ. ಉಳಿದ ಹಾಲನ್ನು ಪೌಡರ್ ಮಾಡುತ್ತಿದ್ದೇವೆ. ಹಾಲಿನ ಪೌಡರ್ ಮಾರಾಟ ಮಾಡಿದರೆ ಒಕ್ಕೂಟಕ್ಕೆ ನಷ್ಟವಾಗಲಿದೆ ಎಂದರು.

ಎಲ್ಲಾ ರೈತರು ಕಡ್ಡಾಯವಾಗಿ ರಾಸುಗಳಿಗೆ ವಿಮೆ ಮಾಡಿಸಿ, ವಿಮೆ ಮಾಡಿಸದೆ ನಿರ್ಲಕ್ಷ್ಯ ವಹಿಸಿ ಒಂದು ವೇಳೆ ರಾಸುಗಳು ಮೃತಪಟ್ಟರೆ ಪರಿಹಾರ ದೊರೆಯುವುದಿಲ್ಲ. ವಿಮೆಗಾಗಿ ಒಕ್ಕೂಟ ಶೇ.75ರಷ್ಟು ಹಣ ನೀಡುತ್ತಿದೆ. ಉಳಿದ ಹಣವನ್ನು ರೈತರು ನೀಡಿ ವಿಮೆ ಮಾಡಿಸಿ ಎಂದು ಮನವಿ ಮಾಡಿದರು.

ಇದೇ ವೇಳೆ ಅಕಾಲಿಕ ಮರಣ ಹೊಂದಿದ ರಾಸುಗಳ 14 ಮಂದಿ ಮಾಲೀಕರಿಗೆ 6 ಲಕ್ಷ, ಹಾಲು ಕರೆಯುವ ಯಂತ್ರ ಖರೀದಿಗೆ 20 ಸಾವಿರ, ರೈತ ಕಲ್ಯಾಣ ಟ್ರಸ್ಟ್ ವತಿಯಿಂದ 9 ಮಂದಿಗೆ 90 ಸಾವಿರ, ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ 50 ಸಾವಿರ ಹಣದ ಚೆಕ್ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾರ್ಗ ವಿಸ್ತರಣಾಧಿಕಾರಿ ಮಂಜುನಾಥ್, ಉಷಾ, ಡಾ.ಪೂಜಾ ಸೇರಿದಂತೆ ಹಲವರು ಹಾಜರಿದ್ದರು.



ನಾಗಮಂಗಲದ ಕೇಂದ್ರೀಯ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆವರಣದಲ್ಲಿ ನಡೆದ ಉಚಿತ ಚಿಕಿತ್ಸಾ ಶಿಬಿರವನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವೇಗೌಡ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಡಾ.ಅಖಿಲ, ಡಾ ಚೈತ್ರ, ನಾಗೇಶ್, ಪ್ರಗತಿ, ಶಿವರಾಜು, ಯಶವಂತ, ಮುತ್ತುರಾಜ್ ಇತರರಿದ್ದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಲು ಹಠ, ಛಲ ಅತ್ಯವಶ್ಯಕ



ಮಂಡ್ಯ,ಸೆ.30– ಪ್ರಸ್ತುತ ದಿನಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಲು ಹಠ ಮತ್ತು ಛಲ ಅತ್ಯವಶ್ಯಕ ಎಂದು ತಾಪಂ ಇಓ ವೀಣಾ ಹೇಳಿದರು. ನಗರದ ಹರ್ಡಿಕರ್ ಭವನದಲ್ಲಿ ಭಾರತ ಸೇವಾದಳ ಜಿಲ್ಲಾ ಶಾಖೆ, ಸೇಂಟ್ ಜಾನ್ ಆಂಬುಲನ್ಸ್ ಇಂಡಿಯಾ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಧನಸಹಾಯ, ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಜಗತ್ತು ಸ್ಪರ್ಧಾತ್ಮಕವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಹುದ್ದೆಗಳು–ಉನ್ನತ ಹುದ್ದೆಗಳನ್ನು ಪಡೆಯಲು ಸಾಧ್ಯವಾಗುತ್ತಿದೆ, ವಿದ್ಯಾರ್ಥಿಗಳು ಕನ್ನಡ ಮಾಧ್ಯಮ, ಗ್ರಾಮೀಣ ವಿದ್ಯಾರ್ಥಿಗಳೆಂದು ಕೀಳರಿಮೆ ಬೆಳೆಸಿಕೊಳ್ಳದಿರಿ ಎಂದು ಸಲಹೆ ನೀಡಿದರು. ಭಾರತ ಸೇವಾದಳ ಜಿಲ್ಲಾ ಶಾಖೆ ಕಾರ್ಯದರ್ಶಿ ಜಿ.ವಿ.ನಾಗರಾಜು ಮಾತನಾಡಿ, ಇಂದು ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ಅರ್ಹ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುತ್ತಿದ್ದೇವೆ, ಪ್ರತಿಭಾ ಪುರಸ್ಕಾರ ನೀಡಿ ಉತ್ತೇಜನ ನೀಡುತ್ತಿದ್ದೇವೆ, ಪ್ರಥಮ ಚಿಕಿತ್ಸೆ ಬಗ್ಗೆ ತರಬೇತಿ ನೀಡುತ್ತ ಬರುತ್ತಿದ್ದೇವೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ವಿವಿಧ ತಾಲೂಕುಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮತ್ತು ಅರ್ಹ ವಿದ್ಯಾರ್ಥಿಗಳಿಗೆ–ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಗಣ್ಯರು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಬಿ.ಸಿ.ಶಿವಾನಂದ, ವೈ.ಬಿ.ಬಸವರಾಜು, ರಘು, ಪ್ರಕಾಶ್, ಗಣೇಶ್, ಉಷಾರಾಣಿ ಇತರರಿದ್ದರು.

ಚಾಮರಾಜನಗರ ದಸರಾ ಸಂಪನ್ನ

ಚಾಮರಾಜನಗರ, ಸೆ.30–ಜಿಲ್ಲಾಡಳಿತ ಹಾಗೂ ಮೈಸೂರು ದಸರಾ ಮಹೋತ್ಸವ ಸಮಿತಿಯಿಂದ ನಡೆದ ನಾಲ್ಕು ದಿನಗಳ ಚಾಮರಾಜನಗರ ದಸರಾ ಮಹೋತ್ಸವಕ್ಕೆ ಇಂದು ವರ್ಣರಂಜಿತ ತೆರೆ ಬಿದ್ದಿತು.



ನಗರದ ಚಾಮರಾಜೇಶ್ವರ ದೇಗುಲ ಮುಂಭಾಗದ ಪ್ರಧಾನ ವೇದಿಕೆಯಲ್ಲಿ ದಸರಾ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ನಾಲ್ಕು ದಿನಗಳ ಕಾಲ ನಡೆದ ಚಾಮರಾಜನಗರ ದಸರಾ ಮಹೋತ್ಸವ ಯಶಸ್ವಿಯಾಗಿದೆ. ಇದಕ್ಕೆ ಕಾರಣರಾದ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ದಸರಾ ಸಮಿತಿ ಸದಸ್ಯರು, ಮಾಧ್ಯಮ ಪ್ರತಿನಿಧಿಗಳು, ಜಿಲ್ಲೆಯ ಜನತೆಗೆ ಜಿಲ್ಲಾಡಳಿತ ಹಾಗೂ ದಸರಾ ಮಹೋತ್ಸವ ಸಮಿತಿಯಿಂದ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು.

ಕಾವೇರಿ ಅಚ್ಚುಕಟ್ಟು ಪ್ರಾದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಜಿ.ನಿಜಗುಣರಾಜು, ಜನಪದ ಸಾಹಿತ್ಯದ ತವರೂರಾದ ಚಾಮರಾಜನಗರ ಜಿಲ್ಲೆ ವಿಶಿಷ್ಟವಾದದ್ದು, ಜಿಲ್ಲೆಯಲ್ಲಿ ಶೇ.52 ರಷ್ಟು ಅರಣ್ಯ ಪ್ರದೇಶವಿದೆ. ಶೇ.48ರಷ್ಟು ಜನವಸತಿ ಪ್ರದೇಶವಿದೆ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶಗಳು ನಮ್ಮ ಜಿಲ್ಲೆಯಲ್ಲಿವೆ. ದಸರಾ ವೇಳೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸ್ಥಳೀಯ ಕಲಾವಿದರಿಗೂ ಆದ್ಯತೆ ನೀಡಿದ್ದು ಅನುಕರಣೀಯ ಎಂದು ಜಿ. ನಿಜಗುಣರಾಜು ತಿಳಿಸಿದರು.

ನಗರಸಭೆ ಅಧ್ಯಕ್ಷೆ ಆಶಾ, ಸದಸ್ಯರಾದ ಅಬ್ರಾರ್ ಅಹಮದ್, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಜಿಪಂ ಸಿಇಓ ಕೆ.ಎಂ. ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಜಿಪಂ ಉಪಕಾರ್ಯದರ್ಶಿ ಗುಡೂರು ಭೀಮಸೇನ, ತಹಸೀಲ್ದಾರ್ ಬಸವರಾಜು ಇತರರು ಸಮಾರಂಭದಲ್ಲಿದ್ದರು.

ಭಾರತ್ ಜೋಡೋ ಅಲ್ಲ, ಕಾಂಗ್ರೆಸ್ ಜೋಡೋ ಯಾತ್ರೆ

ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ವ್ಯಂಗ್ಯ

ಚಾಮರಾಜನಗರ, ಸೆ30–ಕಾಂಗ್ರೆಸ್‌ನಿಂದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಯುತ್ತಿರುವ ಪಾದಯಾತ್ರೆ ಭಾರತ್ ಜೋಡೋ ಅಲ್ಲ, ಕಾಂಗ್ರೆಸ್ ಜೋಡೋ ಯಾತ್ರೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ವ್ಯಂಗ್ಯವಾಡಿದರು.



ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದಿಂದ ನಡೆದ ಹಿಂದುಳಿದ ವರ್ಗಗಳ ಜಾಗೃತಿ ವಿರಾಟ ಸಮಾವೇಶದ ಪೂರ್ವಭಾವಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ? ಮುಂದಿನ ವಿಧಾನಸಭಾ ಚುನಾವಣೆ ಬಳಿಕ ದೇಶದಲ್ಲಿ ಕಾಂಗ್ರೆಸನ್ನು ಹುಡುಕಬೇಕಾಗುತ್ತದೆ ಎಂದು ಹೀಗಳೆದ ಈಶ್ವರಪ್ಪ, ಈಗಿನ ಕಾಂಗ್ರೆಸ್‌ಗೂ ರಾಹುಲ್ ಗಾಂಧಿಗೂ, ಡಿ.ಕೆ.ಶಿವಕುಮಾರ್‌ಗೂ ಯಾವುದೇ ಸಂಬಂಧ ಇಲ್ಲ. ಆಗಿನ ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿತ್ತು. ಸರ್ದಾರ್ ವಲ್ಲಭಾಯಿ ಪಾಟೀಲ್, ಸುಭಾಸ್ ಚಂದ್ರಬೋಸ್, ಭಗತ್‌ಸಿಂಗ್ ಇವರದ್ದು ಕಾಂಗ್ರೆಸ್. ಈಗಿನ ಕಾಂಗ್ರೆಸ್‌ನವರು ಕಂತೆ ಕಂತೆ ಹಣ ಮಾಡಿ ಜೈಲಿಗೆ ಹೋಗಿ ಬಂದರು ಎಂದು ಆರೋಪಿಸಿದರು.

ಸಿದ್ದು, ಡಿಕೆ ಸಿಎಂ ಆಗಲ್ಲ: ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತೇವೆ ಎಂದು ದಿನಾ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಿದ್ದಾರೆ. ಅವರು ಹರಿಹರ ಬ್ರಹ್ಮ ಬಂದರೂ ಮುಖ್ಯಮಂತ್ರಿಯಾಗುವ ಪ್ರಶ್ನೆಯಿಲ್ಲ. ಮುಂದೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದು ಕುಟುಕಿದರು.

ಹುಬ್ಬಳಿಯಲ್ಲಿ ಬಿಜೆಪಿ ಸಮಾವೇಶ: ಅ.10ರಂದು ಹುಬ್ಬಳಿಯಲ್ಲಿ ಹಿಂದುಳಿದ ವರ್ಗಗಳ ಜಿಲ್ಲಾ ಮತ್ತು ಮಂಡಲ ಪದಾಧಿಕಾರಿ ಸಮಾವೇಶ ನಡೆಯುತ್ತದೆ. ಅದರಲ್ಲಿ ಜಿಲ್ಲೆಯ ಎಲ್ಲಾ ಮಂಡಲಗಳಿಂದ ತಲಾ 10 ಮಂದಿ ಪ್ರಮುಖರು ಭಾಗವಹಿಸಬೇಕು ಎಂದಲ್ಲದೆ, ಅ.30ರಂದು ಕಲುಬುರುಗಿಯಲ್ಲಿ ನಡೆಯುವ ಹಿಂದುಳಿದ ವರ್ಗಗಳ ರಾಜ್ಯ ಮಟ್ಟದ ಬೃಹತ್ ಸಮಾವೇಶಕ್ಕೆ 5 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸಿ ಕಾಂಗ್ರೆಸ್ ಹಾಗೂ ಸಿದ್ದರಾಮೋತ್ಸವ ಕಾರ್ಯಕ್ರಮಕ್ಕೆ ಸೆಡ್ ಹೊಡೆಯುವುದಾಗಿ ಇದೇ ವೇಳೆ ತಿಳಿಸಿದರು.

ಶಾಸಕ ಎನ್.ಮಹೇಶ್, ಮಾಜಿ ಸಚಿವ ವಿಜಯಶಂಕರ್, ರಾಜ್ಯ ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸುರೇಶ್‌ಬಾಬು, ಉಪಾಧ್ಯಕ್ಷ ಅಶೋಕ್ ಮೂರ್ತಿ ಮಾತನಾಡಿದರು. ಸಭೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್.ಸುಂದರ್, ಕಾಡಾಧ್ಯಕ್ಷ ಜಿ. ನಿಜಗುಣರಾಜು, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಮೈಸೂರು ವಿಭಾಗದ ಪ್ರಭಾರಿ ಮೈ.ವಿ.ರವಿಶಂಕರ್, ಓಬಿಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ನಟರಾಜೇಗೌಡ, ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ, ಮಹದೇವಸ್ವಾಮಿ, ಉಪ್ಪಾರ ನಿಗಮದ ಅಧ್ಯಕ್ಷ ಗಿರೀಶ್ ಉಪ್ಪಾರ್ ಇತರರಿದ್ದರು.

ಇಂದು ಮಾದಾಪುರದಲ್ಲಿ ಬೃಹತ್ ಕಣ್ಣಿನ ತಪಾಸಣೆ

ಚಾಮರಾಜನಗರ, ಸೆ.30–ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಹಾಗೂ ಡಾ. ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಮತ್ತು ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಅ.1ರಂದು ಶನಿವಾರ ತಾಲೂಕಿನ ಮಾದಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಬೆಳಗ್ಗೆ 9 ರಿಂದ 1 ಗಂಟೆಯವರೆಗೆ ಶಿಬಿರ ನಡೆಯುತ್ತದೆ. ಶಿಬಿರದಲ್ಲಿ ಕಣ್ಣಿನಪೊರೆ, ಕಣ್ಣಿನಲ್ಲಿ ಗೀಜು ಬರುವುದು, ವಾರೆಕಣ್ಣು, ಗ್ಲಾಕೋಮ, ನೀರು ಸೋರುವಿಕೆ, ಹತ್ತಿರ ಮತ್ತು ದೂರದೃಷ್ಟಿ ದೋಷ, ರಾತ್ರಿ ಕುರುಡತನ, ಕಣ್ಣಿನಲ್ಲಿ ಬಿರುಕು ಉಂಟಾಗುವುದು ಈ ಸಮಸ್ಯೆಗಳ ಬಗ್ಗೆ ಪರೀಕ್ಷಿಸಲಾಗುವುದು. ಹೆಸರು ನೋಂದಾಯಿಸಲು ಹಾಗೂ ಮಾಹಿತಿಗೆ ಭೋಗಾಪರ ಎಂ. ಕುಮಾರಸ್ವಾಮಿ (9964306092), ಕಲ್ಲಹಳ್ಳಿ ಗುರುಸಿದ್ದಯ್ಯ (9972478361), ಮಾದಾಪುರ ನಟರಾಜ್ (9741024435), ಮಂಗಲ ನಾಗಶೆಟ್ಟಿ (9141495536), ಮರಿಯಾಲ ಮಹೇಶ್ (9008181068), ಲಿಂಗರಾಜು ಯಲಕ್ಕೂರು (9902648492), ಬದನಗುಪ್ಪೆ ಬಸವಣ್ಣ (7259701667)ಅವರನ್ನು ಸಂಪರ್ಕಿಸಬಹುದು.

ರಾಹುಲ್ ಗಾಂಧಿ ಭಾರತ್ ನೋಡೋ ಯಾತ್ರೆ ಮಾಡಲಿ

ಚಾಮರಾಜನಗರ, ಸೆ.30–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಯಾತ್ರೆಬದಲು, ಭಾರತ್ ನೋಡೋ ಕಾರ್ಯಕ್ರಮ ಮಾಡಬೇಕು. ಭಾರತದ ಹಳ್ಳಿಗಳನ್ನು ನೋಡಿಲ್ಲದ ಅವರು, ಬುಲೆಟ್ ಬೈಕ್‌ನಲ್ಲಿ ಎರಡು ವರ್ಷಗಳ ಕಾಲ ಸುತ್ತಾಡಿ ಭಾರತವನ್ನು ಅರಿಯಬೇಕು ಎಂದು ಕೊಳ್ಳೇಗಾಲ ಶಾಸಕ ಎನ್.ಮಹೇಶ್ ಹೇಳಿದರು.



ಗುರುವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಲಾಂ ನಬಿ ಆಜಾದ್ ಹೇಳಿದಂತೆ ರಾಹುಲ್ ಗಾಂಧಿಯವರಿಗೆ ಅನುಭವ ಇಲ್ಲ. ಅವರು ಭಾರತವನ್ನು ನೋಡೇ ಇಲ್ಲ. ಹಳ್ಳಿಗಳ ಬಗ್ಗೆ ಗೊತ್ತಿಲ್ಲ. ಅವರಿನ್ನೂ ಚಿಕ್ಕವರು, ಭಾರತ ಒಂದು ಒಗಟಿನ ಭೂಮಿ. ಇದನ್ನು ಅಷ್ಟು ಸುಲಭವಾಗಿ ಅರ್ಥ ಮಾಡಿಕೊಂಡಿಲ್ಲ ಎಂದರು.

ಭಾರತವನ್ನು ಅರ್ಥ ಮಾಡಿಕೊಂಡವರು ನರೇಂದ್ರ ಮೋದಿಯವರು ಮಾತ್ರ. ರೈಲ್ವೆ ನಿಲ್ದಾಣದಲ್ಲಿ ಟೀ ಮಾರುವುದರಿಂದ ಹಿಡಿದು ಹಿಮಾಲಯ ಪರ್ವತವರೆಗೂ ಅವರು ಹೋಗಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಪಾದಯಾತ್ರೆ ಮಾಡಿದರೆ ಭಾರತ ಅರ್ಥ ಆಗಲ್ಲ. ಬುಲೆಟ್ ಬೈಕ್ ಹತ್ತಿಕೊಂಡು ಹಳ್ಳಿಗಳನ್ನು ಸುತ್ತಬೇಕು ಎಂದು ಸಲಹೆ ನೀಡಿದರು. ಗುಂಡ್ಲುಪೇಟೆ ಶಾಸಕ ಸಿ.ಎಸ್. ನಿರಂಜನಕುಮಾರ್ ಮಾತನಾಡಿ, ಭಾರತ್ ಜೋಡೋ ಯಾತ್ರೆಯ ಹೆಸರು ಬದಲಿಸಬೇಕು. ಕಾಂಗ್ರೆಸ್ ಜೋಡೋ ಎಂದು ಹೆಸರಿಟ್ಟುಕೊಳ್ಳಬೇಕು. ಭಾರತ ಈಗ ಭದ್ರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಭಾರತವನ್ನು ಜೋಡಿಸಿದ್ದಾರೆ. ಭಾರತವನ್ನು ಒಡೆದವರು ಕಾಂಗ್ರೆಸ್‌ನವರು. ಹಾಗಾಗಿ ಭಾರತವನ್ನು ಜೋಡಿಸಬೇಕಾದ ಅಗತ್ಯ ಈಗ ಇಲ್ಲ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್.ಸುಂದರ, ಬಿಜೆಪಿ ಮುಖಂಡರಾದ ಎಂ.ರಾಮಚಂದ್ರ, ಹನುಮಂತಶೆಟ್ಟಿ, ನಾರಾಯಣಪ್ರಸಾದ್, ಅಯ್ಯನಪುರ ಶಿವಕುಮಾರ್ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

ಫಲಪುಷ್ಪ ಪ್ರದರ್ಶನ ವಿಸ್ತರಣೆ

ಚಾಮರಾಜನಗರ, ಸೆ30–ದಸರಾ ಮಹೋತ್ಸವ ಅಂಗವಾಗಿ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನವನ್ನು ಅ.1ರವರೆಗೆ ವಿಸ್ತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.




ರೈತ ದಸರಾ ಪ್ರಯುಕ್ತ ಪ್ರಗತಿಪರ ರೈತರಿಗೆ ಸನ್ಮಾನ

ಸಮಗ್ರ ಕೃಷಿ ಜೊತೆಗೆ ಉಪ ಕಸುಬು ಅಳವಡಿಸಿಕೊಳ್ಳಿ

- ರೈತ ಸಮುದಾಯಕ್ಕೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಸಲಹೆ
- ಈ ಪದ್ಧತಿಯಿಂದ ರೈತರು ಆರ್ಥಿಕವಾಗಿ ಸಬಲರಾಗಬಹುದು



ಮೈಸೂರಿನ ಜೆಕೆ ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ರೈತ ದಸರಾ ಪ್ರಯುಕ್ತ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಜಿಲ್ಲೆಯ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.





ಕೃಷಿ ವಸ್ತು ಪ್ರದರ್ಶನದಲ್ಲಿ ವ್ಯವಸಾಯದ ಸಮಗ್ರ ನೋಟ ಅನಾವರಣ

ಮೈಸೂರು,ಸೆ.30(ಪಿಎಂ)– ರೈತ ದಸರಾ ಪ್ರಯುಕ್ತ ಮೈಸೂರಿನ ಜೆಕೆ ಮೈದಾನದಲ್ಲಿ ಹಮ್ಮಿಕೊಂಡಿರುವ ಕೃಷಿ ವಸ್ತು ಪ್ರದರ್ಶನದಲ್ಲಿ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ ಸೇರಿದಂತೆ ರೈತರ ಚಟುವಟಿಕೆಯ ಸಮಗ್ರ ಮಾಹಿತಿ ಅನಾವರಣಗೊಂಡಿದೆ.

ಇಲ್ಲಿನ 42 ಮಳಿಗೆಗಳಲ್ಲಿ ಕೃಷಿ ಸಮಗ್ರ ನೋಟ ಮೂಡಿ ಬಂದಿದೆ. ಇದಲ್ಲದೆ, ಇನ್ನು 10 ಮಳಿಗೆಗಳಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಹಸುಗಳ ಸಹಿತ ವಿವರಗಳು ಲಭ್ಯವಾಗಲಿವೆ. ಸರ್ಕಾರದ ವಿವಿಧ ಯೋಜನೆಗಳು ಸಮಗ್ರ ಮಾಹಿತಿಗಳು ಇಲ್ಲಿ ಕಾಣಬಹುದಾಗಿದೆ. ಅಲ್ಲದೆ, ಕೃಷಿ ಯಂತ್ರೋಪಕರಣಗಳ ಪ್ರದರ್ಶನವೂ ಇದ್ದು, ಜೊತೆಗೆ ಅವುಗಳಿಗೆ ಸರ್ಕಾರ ನೀಡುವ ಸಬ್ಸಿಡಿಯ ಮಾಹಿತಿ ಪ್ರಕಟಿಸಲಾಗಿದೆ.

ವಸ್ತು ಪ್ರದರ್ಶನದ ಆರಂಭದಲ್ಲೇ ಸಮಗ್ರ ಕೃಷಿ ಪದ್ಧತಿ ಕುರಿತ ಮಾದರಿ ಇದ್ದು, ಈ ಪದ್ಧತಿಯಿಂದ ನಿರಂತರ ಆದಾಯ ಲಭ್ಯವಾಗಲಿದೆ. ಜೊತೆಗೆ ಮಣ್ಣು ಮತ್ತು ನೀರಿನ ಸಂರಕ್ಷಣೆ ಸಾಧ್ಯವಾಗಲಿದೆ ಎಂಬ ಮಾಹಿತಿ ಒದಗಿಸಲಾಗಿದೆ. ಶುಕ್ರವಾರ ಕೃಷಿ ಸಚಿವ ಬಿ.ಸಿ.ಪಾಟೀಲ್ ವಸ್ತು ಪ್ರದರ್ಶನ ಉದ್ಘಾಟಿಸಿ ಮಳಿಗೆಗಳನ್ನು ವೀಕ್ಷಣೆ ಮಾಡಿದರು. ಅ.2ರವರೆಗೆ ಬೆಳಗ್ಗೆ 10ರಿಂದ ಸಂಜೆ 7ರವರೆಗೆ ಸಾರ್ವಜನಿಕರು ವಸ್ತು ಪ್ರದರ್ಶನಕ್ಕೆ ಭೇಟಿ ನೀಡಬಹುದು. ಪ್ರವೇಶ ಉಚಿತವಿದೆ.



ಮೈಸೂರು,ಸೆ.30(ಪಿಎಂ)– ಕೃಷಿಯಲ್ಲಿ ಕೇವಲ ಒಂದೇ ಬೆಳೆ ಬೆಳೆದರೆ ರೈತರು ಉದ್ಧಾರ ಆಗಲು ಸಾಧ್ಯವಿಲ್ಲ. ಹಾಗಾಗಿ ಸಮಗ್ರ ಕೃಷಿ ಪದ್ಧತಿ ಜೊತೆಗೆ ಉಪಕಸುಬು ಅಳವಡಿಸಿಕೊಂಡರೆ ರೈತರು ಆರ್ಥಿಕವಾಗಿ ಸಬಲರಾಗಲು ಸಾಧ್ಯ. ಈ ನಿಟ್ಟಿನಲ್ಲಿ ಉತ್ತೇಜಿಸಲು ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಳ್ಳುತ್ತಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ಮೈಸೂರಿನ ಜೆಕೆ ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ರೈತ ದಸರಾ ಉಪಸಮಿತಿ ವತಿಯಿಂದ ರೈತ ದಸರಾ ಪ್ರಯುಕ್ತ ಶುಕ್ರವಾರ ಹಮ್ಮಿಕೊಂಡಿದ್ದ ಜಿಲ್ಲೆಯ ಪ್ರಗತಿಪರ ರೈತರ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೃಷಿಯನ್ನು ಕೀಳು ಎಂದು ಬಹಳಷ್ಟು ಮಂದಿ ತಿಳಿದುಕೊಂಡಿದ್ದಾರೆ. ಇದನ್ನು ನಿವಾರಿಸಿ, ಯುವ ಜನತೆಯನ್ನು ಕೃಷಿಯತ್ತ ಮುಖ ಮಾಡಿಸಬೇಕಿದೆ. ರೈತ ಸಮುದಾಯದ ಹಿತ ಕಾಯುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ರೈತರಿಗೆ ಕೃಷಿಯಲ್ಲಿ ಉತ್ತೇಜನ ನೀಡಲು ಬಿತ್ತನೆ ಬೀಜ, ರಸಗೊಬ್ಬರ, ಯಂತ್ರೋಪಕರಣ ಹಾಗೂ ಸ್ಪಿಂಕ್ಲರ್ ಮೊದಲಾದವುಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ ಎಂದರು.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರದಿಂದ 6 ಸಾವಿರ ಮತ್ತು ರಾಜ್ಯ ಸರ್ಕಾರದಿಂದ 4 ಸಾವಿರ ರೂ. ಸೇರಿ ಒಟ್ಟು 10 ಸಾವಿರ ರೂ.ಗಳನ್ನು ರೈತರ ಕೃಷಿ ಚಟುವಟಿಕೆಗಳಿಗೆ ನೆರವು ನೀಡಲಾಗುತ್ತಿದೆ. ನಮ್ಮ ಸರ್ಕಾರ ಯಾವಾಗಲೂ ರೈತರ ಪರವಾಗಿದೆ ಎಂದು ಹೇಳಿದರು.

ಡೀಸೆಲ್ ಸಬ್ಸಿಡಿ: ರೈತರ ಮಕ್ಕಳಿಗೆ ಮುಖ್ಯಮಂತ್ರಿ ವಿದ್ಯಾನಿಧಿ ಯೋಜನೆಯಡಿ ವಾರ್ಷಿಕವಾಗಿ ಆರ್ಥಿಕ ನೆರವು ನೀಡಲಾಗುತ್ತಿದೆ. ಕಳೆದ ವರ್ಷ 14 ಲಕ್ಷ ಮಕ್ಕಳಿಗೆ 600 ಕೋಟಿ ಕೊಟ್ಟಿದ್ದೇವೆ. ರೈತರ ಟ್ರಾಕ್ಟರ್‌ಗಳ ಡೀಸೆಲ್‌ಗೆ ಸಬ್ಸಿಡಿ ಕೊಡಲು 5 ಎಕರೆ ಭೂಮಿ ಹೊಂದಿರುವ ರಾಜ್ಯದ 69 ಲಕ್ಷ ರೈತರಿಗೆ ಈ ವರ್ಷದಿಂದ 'ರೈತ ಶಕ್ತಿ' ಯೋಜನೆಯಡಿ 1 ಎಕರೆ ಉಳುಮೆಗೆ 250 ರೂ.ನಂತೆ 5 ಎಕರೆವರೆಗೆ ಡೀಸೆಲ್‌ಗೆ ಸಬ್ಸಿಡಿ ಕೊಡುತ್ತಿದ್ದು, ಇದರಿಂದ ರೈತರ ಇಂಧನ ವೆಚ್ಚ ಕಡಿಮೆ ಮಾಡಬಹುದು. ಭಾರತದಲ್ಲಿ ಪ್ರಥಮ ಬಾರಿಗೆ ರಾಜ್ಯ ಸರ್ಕಾರ ಈ ಯೋಜನೆ ಜಾರಿ ಮಾಡಿದೆ ಎಂದು ಬಿ.ಸಿ.ಪಾಟೀಲ್ ತಿಳಿಸಿದರು.

ಜಿ.ಟಿ.ದೇವೇಗೌಡರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಒಬ್ಬ ಮುಖ್ಯಮಂತ್ರಿಯನ್ನೇ ಸೋಲಿಸಿ ಗೆದ್ದವರು. ಅದೂ ಅತ್ಯಂತ ಅಂತರದಿಂದ ಗೆದ್ದಿದ್ದಾರೆ. ಮುತ್ಸದಿಯಾಗಿ ಸಮಾಜಮುಖಿ ಕಾರ್ಯ ಮಾಡುತ್ತಿದ್ದಾರೆ ಎಂದು ನುಡಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಕೃಷಿಯಲ್ಲಿ ಆದಾಯವಿಲ್ಲ ಎಂದು ವಿಮುಖರಾಗುವ ಪರಿಸ್ಥಿತಿ ಇದ್ದರೂ ಬದ್ಧತೆಯಿಂದ ರೈತರು ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಯಾವ ಋತುವಿನಲ್ಲಿ ಯಾವ ರೀತಿಯ ಬೆಳೆ ಬೆಳೆಯಬೇಕು ಎಂಬುದು ಮುಖ್ಯ. ಈ ನಿಟ್ಟಿನಲ್ಲಿ ಅವರಿಗೆ ಸೂಕ್ತ ಮಾರ್ಗದರ್ಶನ ಅಗತ್ಯವಿದೆ ಎಂದು ಹೇಳಿದರು.

ಕೃಷಿ ಇಲಾಖೆಯಲ್ಲಿ ಹಿಂದೆ ಗ್ರಾಮ ಸೇವಕರು ಇದ್ದರು. ಅವರು ರೈತರ ಭೂಮಿಗೆ ಹೋಗಿ ಕೃಷಿ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದರು. ಅದೇ ಮಾದರಿಯಲ್ಲಿ ಕೃಷಿ ಅಧಿಕಾರಿಗಳು ರೈತರ ಭೂಮಿಗೆ ಹೋಗಿ ಸೂಕ್ತ ಮಾರ್ಗದರ್ಶನ ನೀಡುವ ವ್ಯವಸ್ಥೆ ಜಾರಿಗೊಳಿಸಲು ನಾನು ವಿಧಾನಸೌಧದಲ್ಲೂ ಸರ್ಕಾರವನ್ನು ಒತ್ತಾಯಿಸಿದ್ದೇನೆ. ಈ ಸಂಬಂಧ ಕೃಷಿ ಸಚಿವರು ತಮ್ಮ ಪ್ರಯತ್ನ ಮುಂದುವರೆಸಿ ಕಾರ್ಯಗತಗೊಳಿಸಬೇಕು ಎಂದು ಕೋರಿದರಲ್ಲದೆ, ಸಹಕಾರ ಸಚಿವರು ಮತ್ತು ಕೃಷಿ ಸಚಿವರಿಂದಲೇ ಸರ್ಕಾರ ಬಂದಿರುವ ಹಿನ್ನೆಲೆಯಲ್ಲಿ ಇವರ ಮಾತಿಗೆ ಬೆಲೆ ಇದೆ ಎಂದು ಹೇಳಿದರು.

ನೂರಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ರೈತರ ಭೂಮಿಗೆ ಸಾಗುವಳಿ ಚೀಟಿ ಕೊಡುವ ಕೆಲಸ ಮಾಡಬೇಕು. ರೈತರ ಬೆಳೆಗಳಿಗೆ ಸೂಕ್ತ ಬೆಲೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು. ರೈತರ ಜಮೀನಿಂದ ಮಾರುಕಟ್ಟೆಗೆ ಕೃಷಿ ಉತ್ಪನ್ನ ಸಾಗಿಸಲು ಸರ್ಕಾರ ಸಾಗಾಣಿಕೆ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ 2021–22ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿ (ಪ್ರಥಮ ಬಹುಮಾನ) ಪುರಸ್ಕೃತ ಹುಣಸೂರು ತಾಲೂಕಿನ ವೀರಭದ್ರಪ್ಪ, ಉದಯೋನ್ಮುಖ ಪ್ರಶಸ್ತಿ ಪುರಸ್ಕೃತರಾದ ಟಿ.ನರಸೀಪುರ ತಾಲೂಕು ವೆಂಕಟೇಶ, ನಂಜನಗೂಡು ತಾಲೂಕಿನ ಸಿದ್ದಪ್ಪ, ಕೆಆರ್ ನಗರ ತಾಲೂಕಿನ ನವೀನ್ ಸೇರಿದಂತೆ ಜಿಲ್ಲೆಯ ಹಲವು ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಮಣ್ಣಿನ ಮಡಿಕೆ ಮೊರದಲ್ಲಿದ್ದ ಭತ್ತವನ್ನು ಸುರಿಯುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಿದರು.


ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ರೈತ ದಸರಾ ಉಪ ಸಮಿತಿ ಉಪ ವಿಶೇಷಾಧಿಕಾರಿ ಎಂ.ಕೃಷ್ಣ ರಾಜು, ಕಾರ್ಯಾಧ್ಯಕ್ಷ ಡಾ.ಬಿ.ಎಸ್. ಚಂದ್ರಶೇಖರ್, ಸದಸ್ಯ ಕಾರ್ಯದರ್ಶಿ ಡಾ.ಷಡಕ್ಷರ ಮೂರ್ತಿ, ರೈತ ದಸರಾ ಉಪ ಸಮಿತಿ ಅಧ್ಯಕ್ಷ ಮಹೇಶ್ ಕುಮಾರ್ ಮತ್ತಿತರರು ಹಾಜರಿದ್ದರು.

ಮಳೆ ನಡುವೆಯೇ ನಟ–ನಟಿಯರ ಡೈಲಾಗ್, ಹಾಡು ನೃತ್ಯಕ್ಕೆ ಮೈಮರೆತ ಯುವಜನ





ಯುವ ದಸರಾದಲ್ಲಿ ಅಕ್ಷರಶಃ ಮಸ್ತ್ ಮಜಾ...









ಮೈಸೂರು, ಸೆ.30(ಎಂಕೆ)– ಮೇಘರಾಜನ ಮನಗೆದ್ದ ಯುವ ದಸರಾ 'ಸ್ಯಾಂಡಲ್‌ವುಡ್ ನೈಟ್'ನಲ್ಲಿ ಸಿನಿ ತಾರೆಯರ ಪಂಚಿಂಗ್ ಡೈಲಾಗ್ಸ್, ಹಾಡು–ನೃತ್ಯ ಪ್ರದರ್ಶನ ಜನಸ್ತೋಮದ ಮನಸೂರೆಗೊಂಡಿತು...!

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಒಂದೆಡೆ ವರುಣನ ಸಿಂಚನವಾಗುತ್ತಿದ್ದರೆ, ಮತ್ತೊಂದೆಡೆ ಕಿವಿಗೆ ಅಪ್ಪಳಿಸುವ ಶಿಳ್ಳೆ–ಚಪ್ಪಾಳೆಗಳ ಸದ್ದು, ಅಭಿಮಾನಿಗಳ ಕೂಗಾಟ ಮಾರ್ದನಿಸಿತು. ಕಲರ್... ಕಲರ್... ಕಲರವ ಸೃಷ್ಟಿಸಿದ ಬೆಳ್ಳಿ ಪರದೆಯ ಬೆಡಗಿಯರು ಯುವ ಸಮೂಹವೇ ಹುಚ್ಚೆದ್ದು ಕುಣಿದು ಕುಪ್ಪಳಿಸುವಂತೆ ಮಾಡಿದರು.

ಮೈಸೂರು ದಸರಾ ಮೆಗಾ ಇವೆಂಟ್ 'ಯುವ ದಸರಾ' ಸ್ಯಾಂಡಲ್‌ವುಡ್‌ಮಯವಾಗಿ ಬದಲಾಗಿತ್ತು ವೇದಿಕೆಗೆ ಆಗಮಿಸಿದ ಖ್ಯಾತ ನಟ–ನಟಿಯರು ಪ್ರೇಕ್ಷಕ ಸಮೂಹವನ್ನು ಸಂಭ್ರಮ–ಸಡಗರದ ಜೊತೆಗೆ ನಗುವಿನ ಅಲೆಯಲ್ಲಿ ತೇಲಿಸಿದರು. ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕಲಾವಿದರ ಜಾಣಪದ ನೃತ್ಯದೊಂದಿಗೆ ಮೆರಗು ಪಡೆದ ಯುವ ದಸರಾ ವೇದಿಕೆಗೆ ಮೈಸೂರು ಜಿಲ್ಲಾ ನೃತ್ಯ ನಿರ್ದೇಶಕ ತಂಡ ನೃತ್ಯ ಕಲಾವಿದರು ರಂಗು ತಂದರು.

ಪವರ್‌ಸ್ಟಾರ್ ಪುನೀತ್‌ಕುಮಾರ್ ಅಭಿನಯದ ಚಲನಚಿತ್ರಗೀತೆಗಳ ರಿಮಿಕ್ಸ್ ಹಾಡುಗಳಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದ ನೃತ್ಯ ಕಲಾವಿದರು ಪಡ್ಡೆ ಹುಡುಗ–ಹುಡುಗಿಯರ ಮನಗೆದ್ದರು. ಕೈಗಳನ್ನು ಬಡಿದು ಬಾನಲ್ಲಿ ಹಾರಾಡುವ ನವಿಲುಗಳನ್ನು ಸೃಷ್ಟಿಸಿದರು. ಮೇಘರಾಜ ಅಬ್ಬರ ನೃತ್ಯ ವೈಭವದ ಮುಂದೆ ಮಂಕಾಯಿತು. ಕಣ್ಣು ಕೋರೈಸುವ ಉಕ್ರೈನ್ ಕಲಾವಿದರ ಲೇಸರ್ ನೃತ್ಯ ರೂಪಕ ಎಲ್ಲರ ಎದೆಗೂ ಬಣ್ಣದ ಬೆಳಕನ್ನು ಚೆಲ್ಲಿದರೆ, ಸಿಗ್ನೇಚರ್ ತಂಡದ ಕಲಾವಿದರು ಯಕ್ಷಗಾನದ ಮೂಲಕ ಭದ್ರಕಾಳಿಯ ಅವತಾರವನ್ನು ಪ್ರಸ್ತುತಪಡಿಸಿದರು.

ಸಾಧು ಕಿಕ್: ವೇದಿಕೆಗೆ ಆಗಮಿಸುತ್ತಿದ್ದಂತೆ ನಗುವಿನ ಅಲೆ ಎಬ್ಬಿಸಿದ ಸಂಗೀತ ನಿರ್ದೇಶಕ ಹಾಗೂ ಹಾಸ್ಯ ನಟ ಸಾಧು ಕೋಕಿಲಾ ಎಲ್ಲರ ಮೊಗದಲ್ಲಿ ನಗು ತರುವುದರ ಜೊತೆಗೆ ಅಪ್ಪು ಅಭಿಮಾನವನ್ನು ಮೆರೆಸಿದರು. ಮೈಸೂರು ದೇವರುಗಳು ವಾಸ ಮಾಡುವ ಊರು. ಇಲ್ಲಿ ದೇವರುಗಳೇ ಮನೆ ಮಾಡಿಕೊಂಡಿವೆ ಎಂದ ಸಾಧು, ಕೊರೊನಾ ಕತ್ತಲಿನಿಂದ ಸ್ವರ್ಗಕ್ಕೆ ಬಂದಂತಾಗಿದೆ ಎಂದರು.

ಬಳಿಕ 'ಮುಕುಂದ ಮುರಾರಿ' ಚಿತ್ರದ 'ನೀನೇ ರಾಮ ನೀನೇ ಶಾಮ ನೀನೇ ಅಲ್ಲಾ ನೀನೇ ಏಸು' ಹಾಡನ್ನು ಹಾಡಿ ರಂಜಿಸಿದರೆ, 'ಸೂಚನೆಯೂ ಯೋಚನೆಯೂ ಇರಲಿಲ್ಲ ನೀ ಹೋದ ಕಾರಣ' ಹಾಡು ಹಾಡುವ ಮೂಲಕ ಅಪ್ಪು ಸ್ಮರಿಸಿದರು. ಈ ವೇಳೆ ಇಡೀ ವೇದಿಕೆ ಸ್ತಬ್ಧವಾಗಿತ್ತು. ಪುನೀತ್ ಅಭಿಮಾನಿಗಳು ಬಾವುಟ ಹಾರಿಸಿ, ಮೊಬೈಲ್‌ನಲ್ಲಿ ಟಾರ್ಚ್ ಲೈಟ್ ಬೆಳಗಿಸಿ ಅಭಿಮಾನ ತೋರಿದರು. ನಂತರ ನಾನು ಮೈಸೂರಿನವನು ಎನ್ನುತ್ತಲೇ ಮೈಕ್ ಹಿಡಿದ ಹಾಸ್ಯ ನಟ ಚಿಕ್ಕಣ್ಣ ಪಂಚಿಂಗ್ ಡೈಲಾಗ್ ಮೂಲಕ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಸಿನಿ ತಾರೆಯರ ಸೊಬಗಿನ ನೃತ್ಯ: ನಟರಾದ ಡಾರ್ಲಿಂಗ್ ಕೃಷ್ಣ, ಧೀರನ್ ರಾಮ್‌ಕುಮಾರ್, ನಟಿಯರಾದ ಹರ್ಷಿಕಾ ಪೂಣಚ್ಚ, ನಿಧಿ ಸುಬ್ಬಯ್ಯ, ಕೃಷಿ ತಾಪಂಡ, ಸೋನುಗೌಡ, ನಿಶ್ವಿಕಾ, ಮಿಲನ ನಾಗರಾಜ್, ಅಮೃತ ಅಯ್ಯಂಗಾರ್, ಮಾನ್ವಿತಾ ಹರೀಶ್ ಹಾಗೂ ಕಾರುಣ್ಯ ರಾಮ್ ತಮ್ಮ ನೃತ್ಯ ಸೊಬಗಿನಿಂದ ರಸದೌತಣ ನೀಡಿದರು. ಪುನೀತ್ ರಾಜ್‌ಕುಮಾರ್ ಅಭಿನಯದ ಹಿಟ್ ಹಾಡುಗಳಿಗೆ ನೃತ್ಯ ಪ್ರದರ್ಶನ ನೀಡುವ ಮೂಲಕ ಅಪ್ಪು ನಮನ ಸಲ್ಲಿಸಿದರಲ್ಲದೆ, ಅವರೊಂದಿಗೆ ಕಳೆದ ಕ್ಷಣಗಳನ್ನು ಮೆಲುಕು ಹಾಕಿದರು.

ನೀವು ನಿಜವಾದ ಹೀರೋಗಳು: ವಿಶೇಷ ಆಕರ್ಷಣೆಯಾಗಿದ್ದ ರಿಯಲ್‌ಸ್ಟಾರ್ ಉಪೇಂದ್ರ, ನಿಜವಾದ ಸ್ಟಾರ್‌ಗಳು ಯಾರು ಹೇಳಿ ನೋಡೋಣ?... ನೀವು ಅಭಿಮಾನಿಗಳು ನಿಜವಾದ ಹೀರೋಗಳು... ನೀವು ಇಷ್ಟೊಂದು ಸಂಖ್ಯೆಯಲ್ಲಿ ಬಂದು ಭಾಗವಹಿಸಿರುವುದರಿಂದಲೇ ಈ ವೇದಿಕೆ ಮತ್ತು ನಾವುಗಳು ಇರುವುದಕ್ಕೆ ಸಾಧ್ಯ ಎನ್ನುತ್ತಲೇ ಐ ಲೈಕ್ ಇಟ್ ಎಂದು ನಕ್ಕು ನಗಿಸಿದರು.

ಸಾಧು ಕೋಕಿಲಾ ಜೊತೆಗೂಡಿ 'ರಕ್ತ ಕಣ್ಣೀರು' ಚಿತ್ರದ 'ಡೇಂಜರ್ 15 ಟು 20 ಡೇಂಜರ್' ಹಾಡನ್ನು ಹಾಡಿ, ಡೈಲಾಗ್ ಹೇಳಿ ಜನಸ್ತೋಮಕ್ಕೆ ಕಿಕ್ ನೀಡಿದರು. ಬಳಿಕ ರಾಜಕೀಯ ಬೇಕಾ ಪ್ರಜಾಕೀಯ ಬೇಕಾ ಎಂದು, ಪ್ರಜಾ ಕೀಯ ಬೇಕಾದರೆ ಕಷ್ಟಪಡಬೇಕಮ್ಮ... ಕಷ್ಟಪಡಲ್ಲ ಅಂದರೆ ಇದ್ದೇ ಇದೆ ರಾಜಕೀಯ... ಎಂದು ತಮ್ಮ ಶೈಲಿಯಲ್ಲೇ ಯುವಕರಿಗೆ ರಾಜಕೀಯ ಎಚ್ಚರಿಕೆಯ ಪಾಠ ಹೇಳಿದರು. ಇದೇ ವೇಳೆ ಉಪೇಂದ್ರ ಅವರ ಮುಂದಿನ 'ಕಬ್ಜ' ಚಿತ್ರದ ಟೀಸರ್ ಪ್ರದರ್ಶಿಸಲಾಯಿತು.

ಮಳೆಗೂ ಜಗ್ಗದ ಜನ ಸಾಗರ: ಬಿಡುವು ನೀಡದೆ ಮಳೆ ಸುರಿಯುತ್ತಿದ್ದರೂ ಜಗ್ಗದ ಜನರು ಮಳೆಯಲ್ಲೇ ನಿಂತು ತಮ್ಮ ನೆಚ್ಚಿನ ನಟರ ಹಾಡು–ನೃತ್ಯವನ್ನು ಕಣ್ತುಂಬಿಕೊಂಡರು. ಸಂಪೂರ್ಣವಾಗಿ ಭರ್ತಿಯಾಗಿದ್ದ ವೇದಿಕೆಯಲ್ಲಿ ನೂರಾರು ಜನರು ಸ್ಥಳವಿಲ್ಲದೆ ಮಳೆಯಲ್ಲಿ ನಿಂತುಕೊಂಡೇ ಕಾರ್ಯಕ್ರಮ ವೀಕ್ಷಣೆ ಮಾಡಿದರು.

ಗಾಳಿ–ಮಳೆಗೆ ಕುಸಿದು ಬಿದ್ದ ಯುವ ದಸರಾ ಆರ್ಚ್...!

ಸಂಜೆಯಾಗುತ್ತಿದಂತೆ ನಗರದೆಲ್ಲೆಡೆ ಜೋರಾಗಿ ಸುರಿದ ಮಳೆಯಿಂದಾಗಿ ಮಹಾರಾಜ ಕಾಲೇಜು ಮೈದಾನದ ಎದುರು ನಿಲ್ಲಿಸಿದ್ದ ಯುವ ದಸರಾ–2022ರ ಬೃಹತ್ ಆರ್ಚ್ ನೆಲಕ್ಕುರುಳಿತು. ಅದೃಷ್ಟವಶಾತ್ ಯಾರಿಗೂ ತೊಂದರೆ ಆಗಲಿಲ್ಲ. ಮಳೆ ನಿಂತ ಬಳಿಕ ನೆಲಕ್ಕುರುಳಿದ್ದ ಆರ್ಚ್ ಅನ್ನು ಮತ್ತೆ ನಿಲ್ಲಿಸಲಾಯಿತು.







ಮೈಸೂರು ದಸರಾ ಪ್ರಯುಕ್ತ ಪೌರ ಕಾರ್ಮಿಕರಿಗೆ ಆಟೋಟ ಸ್ಪರ್ಧೆ



ಮೈಸೂರು, ಸೆ.30(ಆರ್‌ಕೆಬಿ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ನಗರ ಪಾಲಿಕೆಯ 55ನೇ ವಾರ್ಡ್‌ನಲ್ಲಿ ಮನೆ ಮನೆ ದಸರಾ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ಅಟೋಟ ಸ್ಪರ್ಧೆ ನಡೆಸಲಾಯಿತು.

ಸ್ವಾತಂತ್ರ್ಯ ಹೋರಾಟಗಾರ ತಗಡೂರು ರಾಮಚಂದ್ರರಾವ್ ಉದ್ಯಾನವನದ ಬಳಿ ಆಟೋಟ ಸ್ಪರ್ಧೆಗಳಿಗೆ ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್ ಚಾಲನೆ ನೀಡಿದರು.

ಪೌರ ಕಾರ್ಮಿಕರಿಗೆ ಮ್ಯೂಸಿಕಲ್ ಚೇರ್, ಲೆಮನ್ ಅಂಡ್ ಸ್ಪೂನ್, ಬಕೆಟ್‌ನಲ್ಲಿ ಬಾಲ್ ಹಾಕುವುದು, ಮಡಿಕೆ ಒಡೆಯುವುದು ಇನ್ನಿತರೆ ಸ್ಪರ್ಧೆಗಳನ್ನು ನಡೆಸಲಾಯಿತು. ಸ್ಪರ್ಧೆಗಳಲ್ಲಿ ಪೌರ ಕಾರ್ಮಿಕರು ಹೆಚ್ಚು ಹುರುಪಿನಿಂದ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಪ್ರತಿದಿನ ಸ್ವಚ್ಛತೆಯಲ್ಲಿ ತೊಡಗುವ ಪೌರಕಾರ್ಮಿಕರಿಗೆ ಈ ಕಾರ್ಯಕ್ರಮದ ಮೂಲಕ ಕೆಲ ಹೊತ್ತು ಮನರಂಜನೆಯಲ್ಲಿ ಪಾಲ್ಗೊಂಡ ಖುಷಿ ಸಿಕ್ಕಿದಂತಾಗಿದೆ. ಮನೆ ಮನೆ ದಸರಾ ಕಾರ್ಯಕ್ರಮದ ಮೂಲಕ ದಸರಾ ಹಬ್ಬವನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡಲಾಗಿದೆ ಎಂದರು.

ಮುಖಂಡರಾದ ಸಿ.ಸಂದೀಪ್, ವಿ. ಮಂಜುನಾಥ್, ಮಂಜುಳ, ಧರ್ಮೇಂದ್ರ, ಲಲಿತಾಂಬ, ದೇವೇಂದ್ರಸ್ವಾಮಿ, ಮಧು, ಬಸವರಾಜು, ರವಿ, ಶೇಖರ್ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕರ್ನಾಟಕದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವರಾಲೆ ನೇಮಕ



ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ. ಪಿ.ಬಿ. ವರಾಲೆ ಅವರನ್ನು ನೇಮಕ ಮಾಡಲಾಗಿದೆ.

ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸ್ಸು ಮಾಡಿದ ಆಧಾರದಲ್ಲಿ ನ್ಯಾ. ಪಿ.ಬಿ. ವರಾಲೆ ಅವರನ್ನು ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಕ ಆದೇಶ ಹೊರಡಿಸಿದೆ. ಪ್ರಸನ್ನ ಬಿ. ವರಾಲೆ ಅವರು ಈ ಹಿಂದೆ ಬಾಂಬೆ ಹೈ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸಿದ್ದರು. ನ್ಯಾ. ವರಾಲೆ ಅವರು 1985ರ ಆಗಸ್ಟ್‌ನಲ್ಲಿ ವಕೀಲರಾಗಿ ನೋಂದಾಯಿಸಿಕೊಂಡರು.

ವೃತ್ತಿಯ ಆರಂಭದಲ್ಲಿ ವಕೀಲರಾದ ಎಸ್ ಎನ್ ಲೋಯಾ ಅವರ ಬಳಿ ಕಿರಿಯ ವಕೀಲರಾಗಿ ವರಾಲೆ ಪ್ರಾಕ್ಟೀಸ್ ಆರಂಭಿಸಿದರು. 1992ರವರೆಗೆ ಔರಂಗಾಬಾದ್‌ನ ಅಂಬೇಡ್ಕರ್ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದರು. 2008ರ ಜುಲೈ 18ರಲ್ಲಿ ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು.

Apollo HOSPITALS ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿ ಅಂಗಾಂಗ ದಾನದಿಂದ 8 ಜೀವ ರಕ್ಷಣೆ

ಮೈಸೂರು, ಸೆ.30– ರಸ್ತೆ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಅಂಗಾಂಗ ದಾನ ಮಾಡುವ ಮೂಲಕ 8 ಜೀವಗಳನ್ನು ಉಳಿಸಲಾಗಿದೆ ಎಂದು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯ ಆಡಳಿತ ವಿಭಾಗದ ಉಪಾಧ್ಯಕ್ಷ ಎನ್.ಜಿ.ಭರತೇಶ ರೆಡ್ಡಿ ತಿಳಿಸಿದ್ದಾರೆ.



ಲೋಹಿತ್

ಕಳೆದ ಸೋಮವಾರ ಬಿಳಿಕೆರೆ ಬಳಿ ರಸ್ತೆ ಅಪಘಾತಕ್ಕೀಡಾಗಿ ಬೃಂದಾವನ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಲೋಹಿತ್(31) ಎಂಬುವರನ್ನು ಸೆ.27ರಂದು ಮಧ್ಯಾಹ್ನ ಗಂಭೀರ ಸ್ಥಿತಿಯಲ್ಲಿ ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ಕರೆತರಲಾಯಿತು. ಅವರನ್ನು ಎರಡು ದಿನಗಳ ಕಾಲ ಲೈಫ್ ಸಪೋರ್ಟ್‌ನಲ್ಲಿ ಇರಿಸಲಾಗಿತ್ತು. ಸೆ.30ರ ಮಧ್ಯರಾತ್ರಿ ಮೆದುಳು ನಿಷ್ಕ್ರಿಯಗೊಂಡಿರುವುದನ್ನು ವೈದ್ಯರು ಘೋಷಿಸಿದರು ಎಂದು ಅವರು ತಿಳಿಸಿದರು. ಪ್ರೋಟೋಕಾಲ್ ಪ್ರಕಾರ ಅಂಗಾಂಗ ದಾನಕ್ಕಾಗಿ ಅವರ ಕುಟುಂಬದವರಿಗೆ ಸಲಹೆ ನೀಡಿದಾಗ ಕುಟುಂಬದವರು ಅಂಗಾಂಗ ದಾನಕ್ಕೆ ಒಪ್ಪಿಕೊಂಡಿದ್ದು, ಲೋಹಿತ್ ಅವರ ಹೃದಯವನ್ನು ಬೆಂಗಳೂರಿನ ಎನ್.ಹೆಚ್.ಆಸ್ಪತ್ರೆಗೆ, ಲಿವರ್ ಒಂದು ಕಿಡ್ನಿ ಮೇಧೋಜೀರಕ ಗ್ರಂಥಿಯನ್ನು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ, ಒಂದು ಕಿಡ್ನಿಯನ್ನು ಬೆಂಗಳೂರಿನ ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ, ಕಾರ್ನಿಯಾಸ್‌ಗಳನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾನ ಮಾಡಲಾಗಿದೆ. ಮೈಸೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆಯಿಂದ ಬೆಂಗಳೂರಿನ ಎನ್.ಹೆಚ್.ಆಸ್ಪತ್ರೆಗೆ ಹೃದಯವನ್ನು ಸಾಗಿಸಲು ಮೈಸೂರು ನಗರ ಹಾಗೂ ಹೈವೇ ಪೊಲೀಸರು ಗ್ರೀನ್ ಕಾರಿಡಾರ್ ಮಾಡಿ ನೆರವಾದರು ಎಂದು ಅವರು ತಿಳಿಸಿದರು.

ವಿಶ್ವಕರ್ಮ ಕಲೆ–ಸಂಸ್ಕೃತಿ, ತಂತ್ರಜ್ಞಾನದ ಪ್ರತೀಕ

ವಿಶ್ವಕರ್ಮ ಜಯಂತಿಯಲ್ಲಿ ತಾಪಂ ಇಓ ಸಿ.ಕೃಷ್ಣಕುಮಾರ್ ಬಣ್ಣನೆ

ತಿ.ನರಸೀಪುರ, ಸೆ.30– ವಿಶ್ವಕರ್ಮರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿರದೇ, ಭಾರತೀಯ ಕಲೆ, ಸಂಸ್ಕೃತಿ, ತಂತ್ರಜ್ಞಾನದ ಪ್ರತೀಕವಾಗಿದ್ದಾರೆ ಎಂದು ತಾಪಂ ಇಓ ಸಿ.ಕೃಷ್ಣಕುಮಾರ್ ಬಣ್ಣಿಸಿದರು.

ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ವಿಶ್ವಕರ್ಮ ಜಯಂತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಗುರುಭವನದಲ್ಲಿ ನಡೆದ ವಿಶ್ವಕರ್ಮ ಜಯಂತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶ್ವಕರ್ಮರು ತಮ್ಮ ಅಪಾರ ಜ್ಞಾನದಿಂದ ಅರಮನೆ, ಮಹಲುಗಳು, ವಾಹನಗಳು, ಆಯುಧಗಳು ಸೇರಿದಂತೆ ಅನೇಕ ರೀತಿಯ ತಾಂತ್ರಿಕ ವಸ್ತುಗಳನ್ನು ನಿರ್ಮಿಸಿದ್ದಾರೆ. ಪ್ರತಿವರ್ಷ ವಿಶ್ವಕರ್ಮ ಜಯಂತಿಯಂದು ಉಪಕರಣ, ಯಂತ್ರಗಳನ್ನು ಮತ್ತು ಕೈಗಾರಿಕಾ ಘಟಕಗಳನ್ನು ಪೂಜಿಸಲ್ಪಡುವುದು ಹೆಮ್ಮೆಯ ಸಂಗತಿ ಎಂದರು. ವಿಶ್ವಕರ್ಮರನ್ನು ದೇವರ ಶಿಲ್ಪಿ ಎಂದು ಕರೆಯಲಾಗುತ್ತದೆ. ರಾಜ ಮಹಾರಾಜರಿಗೆ ಇಂದ್ರಪ್ರಸ್ಥ, ದ್ವಾರಕಾ ನಗರಿಯಂತಹ ಅದ್ಭುತ ನಗರಗಳನ್ನು ನಿರ್ಮಿಸಿಕೊಟ್ಟಿದ್ದರೆಂಬ ಉಲ್ಲೇಖಗಳು ಗ್ರಂಥಗಳಲ್ಲಿವೆ. ಅಂಬೇಡ್ಕರ್ ಅವರ ಮಾತಿನಂತೆ ಯಾವುದೇ ಒಂದು ಸಮುದಾಯ ಸಮಾಜದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಉನ್ನತಿ ಹೊಂದಬೇಕಾದರೆ ಶಿಕ್ಷಣ ಬಹು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ



ಸಮಾಜದವರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಮೂಲಕ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡಿ. ಸಮಾಜದ ಬಾಂಧವರು ಸಂಘಟಿತರಾದಾಗ ಮಾತ್ರ ಯಾವುದೇ ಸೌಲಭ್ಯ ಪಡೆಯಲು ಸಾಧ್ಯ ಎಂದರು.

ಇದಕ್ಕೂ ಮುನ್ನ ಬೆಳಗ್ಗೆ ಪಟ್ಟಣದ ವಿಶ್ವಕರ್ಮ ಬೀದಿಯಲ್ಲಿರುವ ಶ್ರೀನಂಜುಂಡೇಶ್ವರ ದೇವಾಲಯದ ಮುಂಭಾಗದಿಂದ ಹೊರಟ ವಿವಿಧ ಸ್ತಬ್ಧ ಚಿತ್ರಗಳ ಮೆರವಣಿಗೆ ಗುರುಭವನ ತಲುಪಿತು.

ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಹಾಗೂ ಕಾಂಗ್ರೆಸ್ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಎ.ಎನ್.ಸ್ವಾಮಿ, ಕಾರ್ಯಾಧ್ಯಕ್ಷ ಲೋಕೇಶ್ ವಿಶ್ವ ಕರ್ಮ, ಪ್ರಧಾನ ಕಾರ್ಯದರ್ಶಿ ಶಿವಕುಮಾರಚಾರ್, ತಾಲೂಕು ನಾಯಕ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಮರಿಸ್ವಾಮಿ, ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ, ಬಾಬು ಜಗಜೀವನ ರಾಂ ಸಂಘದ ಮಾಜಿ ಅಧ್ಯಕ್ಷ ಸಿದ್ದರಾಜು, ಉಪನ್ಯಾಸಕ ಮೂಗೂರು ಕುಮಾರ ಸ್ವಾಮಿ, ಮುಖಂಡರಾದ ಸೋಮಣ್ಣ, ಪ್ರಕಾಶಾ ಚಾರ್, ಬಾಬು, ಸಿದ್ದಪ್ಪಾಜಿ, ಜೆ.ಶಿವಕುಮಾರ್ ಸೇರಿದಂತೆ ವಿವಿಧ ಸಮುದಾಯದ ಮುಖಂಡರಿದ್ದರು.

> **ಸಂಘಟಿತರಾಗದಿದ್ದರೆ ಯಾವುದೇ ಸ್ಥಾನಮಾನವಿಲ್ಲ**
>
> ಕಡಿಮೆ ಜನಸಂಖ್ಯೆ ಹೊಂದಿರುವ ನಾವು ಸಂಘಟಿತರಾಗದಿದ್ದರೆ ಯಾವುದೇ ಸ್ಥಾನಮಾನ ಪಡೆಯಲು ಸಾಧ್ಯವಿಲ್ಲ. ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಂಘಟನೆ ಅವಶ್ಯಕ. ನಮ್ಮ ಧ್ವನಿಗೆ ಬೆಲೆ ಬರಬೇಕಾದರೆ ನಮ್ಮ ಶಕ್ತಿ ಗೋಚರವಾಗಬೇಕು. ಶಿಕ್ಷಣದಲ್ಲಿ ಹಿಂದಿರುವ ಕಾರಣದಿಂದಾಗಿ ಸಮುದಾಯಕ್ಕೆ ಸರ್ಕಾರದಿಂದ ದೊರಕಬೇಕಾದ ಅನುದಾನ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆರ್ಥಿಕವಾಗಿ ಹಿಂದುಳಿದಿರುವ ನಮಗೆ ಸಮುದಾಯ ಭವನದ ಅವಶ್ಯಕತೆ ಇದೆ. ಎಲ್ಲರೂ ಸಂಘಟಿತರಾಗಿ ಶಾಸಕರಿಗೆ ಮನವಿ ಸಲ್ಲಿಸಲು ಮುಂದಾಗೋಣ.
>
> – ಬನ್ನೂರು ಪ್ರಭಾಕರ್, ವಿಶ್ವಕರ್ಮ ಜಯಂತೋತ್ಸವ ಸಮಿತಿ ಅಧ್ಯಕ್ಷ.

ರತ್ನಪುರಿಯಲ್ಲಿ ಗ್ರಾಪಂ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ



ಹುಣಸೂರು, ಸೆ.30– ತಾಲೂಕಿನ ರತ್ನಪುರಿಯಲ್ಲಿ 35 ಲಕ್ಷ ರೂ. ವೆಚ್ಚದ ಉದ್ದೂರ್ ಕಾವಲ್ ಗ್ರಾಪಂ ಕಟ್ಟಡ ಕಾಮಗಾರಿಗೆ ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಹೆಚ್.ಪಿ.ಮಂಜುನಾಥ್ ಗುದ್ದಲಿ ಪೂಜೆ ನೆರವೇರಿಸಿದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಗ್ರಾಮಗಳು ಅಭಿವೃದ್ಧಿಯಾದರೆ ದೇಶ ಅಭಿ ವೃದ್ಧಿಯಾದಂತೆ. ಗ್ರಾಪಂಗಳು ಉದ್ಯೋಗ ಖಾತ್ರಿ ಹಣ ಸದ್ಬಳಕೆ ಮಾಡಿಕೊಂಡು ಗ್ರಾಮಗಳ ಅಭಿವೃದ್ಧಿಗೆ ಮುಂದಾಗಬೇಕು. ನೂತನ ಪಂಚಾಯಿತಿ ಕಟ್ಟಡ ನಿರ್ಮಾಣದಲ್ಲಿ ಯಾವುದೇ ಲೋಪವಾಗದಂತೆ ಎಚ್ಚರ ವಹಿಸಿ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಗ್ರಾಮಸ್ಥರು ನೂತನ ಗ್ರಾಪಂ ಕಟ್ಟಡ ನಿರ್ಮಿಸಿ ಕೊಡುವಂತೆ ಬೇಡಿಕೆ ಸಲ್ಲಿಸಿದ್ದರು. ಅಲ್ಲದೇ ಜಾಗದ ಸಮಸ್ಯೆಯೂ ಇತ್ತು. ಇಂದಿಗೆ ಎಲ್ಲಾ ಸಮಸ್ಯೆ ದೂರವಾಗಿ ಹೊಸ ಗ್ರಾಪಂ ಕಟ್ಟಡ ಕಟ್ಟಲು ಸಂಸದರ ಜೊತೆಗೂಡಿ ಶಂಕುಸ್ಥಾಪನೆ ನೆರವೇರಿಸಿದ್ದೇನೆ. ಗ್ರಾಮಗಳ ಅಭಿವೃದ್ಧಿಯಲ್ಲಿ ಗ್ರಾಪಂಗಳ ಪಾತ್ರ ನಿರ್ಣಾಯಕ. ಗ್ರಾಮೀಣಾಭಿವೃದ್ಧಿಗೆ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ವೀರಭದ್ರಸ್ವಾಮಿ, ಉಪಾಧ್ಯಕ್ಷೆ ಗೌರಮ್ಮ, ಮಾಜಿ ಅಧ್ಯಕ್ಷ ನಂದೀಶ್, ಸದಸ್ಯರಾದ ವಿಜೇಂದ್ರ ಕುಮಾರ್, ಮನು ಕುಮಾರ್, ಗೋವಿಂದ ಶೆಟ್ಟಿ, ರಾಮಬೋವಿ, ಶಾಂತಿ, ರತ್ನಮ್ಮ, ಪದ್ಮಮ್ಮ, ಗ್ರಾಮ ಲೆಕ್ಕಿಗ ಶಿವಕುಮಾರ್, ಪಿಡಿಓ ನವೀನ್ ಸೇರಿದಂತೆ ಇತರರಿದ್ದರು.

ಸಕಾಲಕ್ಕೆ ಸಾಲ ಮರುಪಾವತಿಸಿ



ಸರಗೂರು, ಸೆ.30– ರೈತರು ಸಹಕಾರ ಸಂಘದಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಬೇಕು ಎಂದು ಸರಗೂರು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗರಾಜರಾಮ ಮನವಿ ಮಾಡಿದರು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘವೂ ಉತ್ತಮವಾಗಿ ಕಾರ್ಯ ನಿರ್ವಹಿಸಲು ಸದಸ್ಯರ ಸಹಕಾರ ಅವಶ್ಯಕ ಎಂದರು.

ಪಸಕ್ತ ಸಾಲಿನಲ್ಲಿ 2.60 ಕೋಟಿ ರೂ. ವಸೂಲಿ ಮಾಡಲಾಗಿದೆ. ಅಲ್ಲದೇ 303 ಮಂದಿ ರೈತರಿಗೆ 3.89 ಕೋಟಿ ರೂ. ಸಾಲ ವಿತರಿಸಲಾಗಿದೆ. ರೈತರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಹೈನುಗಾರಿಕೆ ಸಾಲವಾಗಿ 5.88 ಲಕ್ಷರೂ. ಸಾಲ ನೀಡಲಾಗಿದೆ ಎಂದರು.

ಸಂಘದ ಸಿಇಓ ಪಿ.ಮಹದೇವ ವರದಿ ಮಂಡಿಸಿದರು. ಸಭೆಯಲ್ಲಿ ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಉಪಾಧ್ಯಕ್ಷ ಪಿ.ನೇಮಿಚಂದ್ರ, ನಿರ್ದೇಶಕರಾದ ಅಬ್ದುಲ್ ಜಲೀಲ್, ಹೆಚ್.ಸಿ.ರಾಮಲಿಂಗಪ್ಪ ಶಿವಶಂಕರನ್, ಹೆಚ್.ಎಂ.ಮಹದೇವ ನಾಯಕ್, ಎಸ್.ಬಿ.ಪ್ರೇಮಕುಮಾರಿ, ಎಸ್.ಆರ್.ಸೋಮಶೇಖರ್, ಹೆಚ್.ಜೆ. ಚನ್ನನಾಯಕ, ಕೂಸಮ್ಮ, ನಾಗರಾಜು, ಎಂ.ಕೆ.ಜೇತನ್‌ಕುಮಾರ್, ಮಾಜಿ ಅಧ್ಯಕ್ಷ ಎಸ್.ಕೆ.ಶಿವಣ್ಣ, ರೈತ ಮುಖಂಡ ಭೀಮಯ್ಯ, ಶಿವಣ್ಣ, ನೇಮಿಶ್, ವೀರೇಶ್, ಸುಭಾನ್ ಸೇರಿದಂತೆ ಸಂಘದ ಸದಸ್ಯರಿದ್ದರು.

ಘನತ್ಯಾಜ್ಯ ವಿಲೇವಾರಿ ಘಟಕ ಉದ್ಘಾಟನೆ



ಹುಣಸೂರು, ಸೆ.30– ತಾಲೂಕಿನ ಬನ್ನಿಕುಪ್ಪೆ ಗ್ರಾಪಂನಿಂದ ನರೇಗಾ ಯೋಜನೆಯಡಿ 9.96 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಘನತ್ಯಾಜ್ಯ ವಿಲೇವಾರಿ ಘಟಕವನ್ನು ಶಾಸಕ ಹೆಚ್.ಪಿ.ಮಂಜುನಾಥ್, ಸಂಸದ ಪ್ರತಾಪ್ ಸಿಂಹ ಹಾಗೂ ಗ್ರಾಪಂ ಅಧ್ಯಕ್ಷೆ ಬೇಬಿ ಉದ್ಘಾಟಿಸಿದರು.

ಈ ವೇಳೆ ತಾಪಂ ಇಓ ಮನು, ಆಡಳಿತಾಧಿಕಾರಿ ನಂದ, ಪಿಡಿಓ ರಾಘವೇಂದ್ರ, ಪ್ರಸನ್ನ, ಕಾರ್ಯದರ್ಶಿ ವೇದಮೂರ್ತಿ ಸಿ.ಎಸ್, ಸಹಾಯಕ ಇಂಜಿನಿಯರ್ ಚೈತನ್ಯ.ಸಿ, ಕಾಂಗ್ರೆಸ್ ಮುಖಂಡ ಲೋಕೇಶ್ ನಾಯಕ್, ಬಿಜೆಪಿ ತಾಲೂಕು ಅಧ್ಯಕ್ಷ ನಾಗಣ್ಣಗೌಡ, ಗ್ರಾಪಂ ಸದಸ್ಯರಾದ ನಿಂಗೇಗೌಡ, ಚಂದ್ರೇಗೌಡ, ಚಂದ್ರಶೇಖರ ಎಂ.ಸಿ, ಬಸವರಾಜು ಎಂ.ಎನ್, ಪರಶುರಾಮ್, ಅಂಬಿಕಾ ಹಾಗೂ ಶಿವಮ್ಮ ಭಾಗವಹಿಸಿದ್ದರು.

ಭೇರ್ಯ ಪಿಎಸಿಎಸ್‌ಗೆ ನಿರ್ದೇಶಕರ ಆಯ್ಕೆ



ಭೇರ್ಯ, ಸೆ.30– ಭೇರ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 12 ನಿರ್ದೇಶಕರ ಸ್ಥಾನಗಳಿಗೆ ಈಗಾಗಲೇ 10 ಮಂದಿ ಅವಿರೋಧವಾಗಿ ಆಯ್ಕೆಯಾದರೇ, ಚುನಾವಣೆಯಲ್ಲಿ ಇಬ್ಬರು ಆಯ್ಕೆಯಾದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಪರಿಶಿಷ್ಟ ವರ್ಗ ಮೀಸಲು ಕ್ಷೇತ್ರದಿಂದ ಸುಬ್ಬನಾಯಕ 42 ಮತ ಹಾಗೂ ಹಿಂದುಳಿದ ಬಿ ವರ್ಗ ಮೀಸಲು ಕ್ಷೇತ್ರದಿಂದ ರಜನಿ 57 ಮತಗಳನ್ನು ಪಡೆದು ಜಯಗಳಿಸಿದರು.

ಈಗಾಗಲೇ ಮುಶೀರ್ ಅಹಮದ್ ಖಾನ್, ರಾಮೇಗೌಡ, ತಾರಾ, ಅನಿತಾ, ವೆಂಕಟೇಶ್, ಶ್ರೀನಿವಾಸ್, ಮಂಜೇಗೌಡ, ಕೃಷ್ಣ, ಯಶೋದಮ್ಮ, ಮೊಕಬಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದ ಮುಖಂಡರಾದ ಡೈರಿ ಲೋಕೇಶ್, ಅಮರ್, ಕಾಳೇಗೌಡ, ಜವರಯ್ಯ, ಚಂದ್ರಶೇಖರ್, ಸಣ್ಣಮೊಗನಾಯಕ, ಯೋಗೇಂದ್ರ, ಜಯಕೀರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಬಿ.ವೈ.ಶಿವಶಂಕರ್, ಆಸೀಫ್ ಸೇರಿದಂತೆ ಇತರರಿದ್ದರು.

ಇಂದು ಪದವೀಧರರ ದಿನಾಚರಣೆ

ಮೈಸೂರು, ಸೆ.30–ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನಾಳೆ (ಅ.1) ಸಂಜೆ 5 ಗಂಟೆಗೆ ಪದವೀಧರರ ದಿನಾಚರಣೆ ಆಯೋಜಿಸಲಾಗಿದೆ. ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನಿಧ್ಯದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಪದವೀಧರರ ದಿನದ ಬಗ್ಗೆ ಮಾತನಾಡಲಿದ್ದಾರೆ. ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾ ಪೀಠದ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರ ಮಠ್ ಅಧ್ಯಕ್ಷತೆ ವಹಿಸಲಿದ್ದಾರೆ.

ಶ್ರೀಕಂಠೇಶ್ವರನಿಗೆ ಸಚಿವ ಅಶ್ವತ್ಥ್ ನಾರಾಯಣ್ ವಿಶೇಷ ಪೂಜೆ



ನಂಜನಗೂಡು, ಸೆ.30– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಉನ್ನತ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ್ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಮಾತನಾಡಿದ ಸಚಿವರು, ರಾಜ್ಯ ಸುರಕ್ಷಿತ ಹಾಗೂ ಸುಭೀಕ್ಷವಾಗಿರಲೆಂದು ಶ್ರೀಕಂಠೇಶ್ವರನಲ್ಲಿ ಪ್ರಾರ್ಥಿಸಿದ್ದೇನೆ. ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಆರಂಭಗೊಂಡಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರಿಗೆ ಬಂದಿದ್ದೆ. ಹಾಗೇ ಇಲ್ಲಿಗೂ ಭೇಟಿ ನೀಡಿ ಪೂಜೆ ಸಲ್ಲಿಸಿ, ದೇವರ ಆಶೀರ್ವಾದ ಪಡೆದಿರುವುದು ನನ್ನ ಭಾಗ್ಯ ಎಂದರು. ದೇಶ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿ, ಅದರ ಪದಾಧಿಕಾರಿಗಳನ್ನು ಬಂಧಿಸಿ ದೇಶದ ರಕ್ಷಣೆಗೆ ಕ್ರಮ ಕೈಗೊಂಡಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಇದೇ ವೇಳೆ ಅಭಿನಂದಿಸುತ್ತೇನೆ ಎಂದರು. ಸಚಿವರಿಗೆ ಶಾಸಕ ಹರ್ಷವರ್ಧನ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಸಾಥ್ ನೀಡಿದರು.

ಬಾಬು ಜಗಜೀವನ ರಾಂ ಸಂಘಕ್ಕೆ ಸಿ.ಪುಟ್ಟಯ್ಯ ಅಧ್ಯಕ್ಷ



ತಿ.ನರಸೀಪುರ, ಸೆ.30– ತಾಲೂಕು ಬಾಬು ಜಗಜೀವನ ರಾಂ ಸಂಘದ ನೂತನ ಅಧ್ಯಕ್ಷರಾಗಿ ಕಿರಗಸೂರು ಗ್ರಾಪಂ ಮಾಜಿ ಅಧ್ಯಕ್ಷ ಸಿ.ಪುಟ್ಟಯ್ಯ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಹಿಂದಿನ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಅವರ ಅಧಿಕಾರವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಪಟ್ಟಣದ ಡಾ. ಬಾಬು ಜಗಜೀವನರಾಂ ಭವನದಲ್ಲಿ ಕರೆಯಲಾಗಿದ್ದ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಕೊಡದೇ ಸದಸ್ಯರು ಸಿ.ಪುಟ್ಟಯ್ಯ ಅವರ ಅವಿರೋಧ ಆಯ್ಕೆಯನ್ನು ಅನುಮೋದಿಸಿದರು. ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಎಂಎಲ್‌ಸಿ ಸಿ.ರಮೇಶ್, ಸಮಾಜದ ಜೊತೆ ಉತ್ತಮ ಒಡನಾಟ ಹೊಂದಿರುವ ನೂತನ ಅಧ್ಯಕ್ಷರು ಭ್ರಷ್ಟಾಚಾರದಿಂದ ದೂರವಿದ್ದು ಸಮಾಜ ಮತ್ತು ಸಂಘದ ಘನತೆ ಎತ್ತಿ ಹಿಡಿಯಲಿದ್ದಾರೆ ಎಂದರು.

ಪುರಸಭಾ ಸದಸ್ಯ ಅರ್ಜುನ್, ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ಶಿವಕುಮಾರ್, ಕಳ್ಳೀಪುರ ಗ್ರಾಪಂ ಸದಸ್ಯ ಶಿವು, ನಾಗಣ್ಣ, ದೇವರಾಜ್, ಸೋಸಲೆ ಕೃಷ್ಣ, ಹುಣಸೂರು ರಾಜಪ್ಪ, ಮರಡೀಪುರ ಸಿದ್ದರಾಜು ಸೇರಿದಂತೆ ಬನ್ನೂರು ಪುರಸಭಾ, ಗ್ರಾಪಂ ಸದಸ್ಯರು ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು.

ಸದಾಶಿವ ಆಯೋಗ ಜಾರಿಗೆ ಒತ್ತಾಯ: ಸದಾಶಿವ ಆಯೋಗ ಜಾರಿಗೆ ಬಂದಾಗ ಮಾತ್ರ ಮಾದಿಗ ಜನಾಂಗ ಆರ್ಥಿಕ, ಸಾಮಾಜಿಕ ವಾಗಿ ಮುಂದುವರೆಯಲು ಸಾಧ್ಯ ಎಂದು ರಾಜ್ಯ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಹಾಗೂ ಬಾಬು ಜಗಜೀವನರಾಂ ಸಮತಾ ಆಂದೋಲನದ ರಾಜ್ಯಾಧ್ಯಕ್ಷ ಸಿ.ರಮೇಶ್ ತಿಳಿಸಿದರು. ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರತಿ ವಿಧಾನಸಭೆ ಹಾಗೂ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 25 ರಿಂದ 30 ಸಾವಿರ ಮಾದಿಗ ಸಮುದಾಯದ ಮತದಾರರಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸದಾಶಿವ ಆಯೋಗದ ವರದಿಯನ್ವಯ ಮೀಸಲಾತಿ ನೀಡುತ್ತೇವೆ ಎಂದು ಭರವಸೆ ನೀಡಬೇಕು. ಇಲ್ಲವಾದಲ್ಲಿ ಸಮುದಾಯದ ಜನರು ಯಾವ ಪಕ್ಷಕ್ಕೆ ಮತ ನೀಡಬೇಕು ಅಥವಾ ಬೇಡವೋ ಎನ್ನುವ ಬಗ್ಗೆ ನಿರ್ಧಾರ ಮಾಡಬೇಕಾಗುತ್ತದೆ ಎಂದ ಅವರು, ಬಿಜೆಪಿ ಮಾದಿಗ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ನೀಡಿದೆ. ಆದರೆ ಸದಾಶಿವ ಆಯೋಗ ವರದಿ ಜಾರಿಯಾಗ ಬೇಕು ಎಂದು ಒತ್ತಾಯಿಸಿದರು. ವಾಟಾಳು ಪುಟ್ಟಸ್ವಾಮಿ, ಸಿ.ಮಹದೇವು ಸುದ್ದಿಗೋಷ್ಠಿಯಲ್ಲಿದ್ದರು.

ಖಾಯಂ ಪಿಡಿಓ ಇಲ್ಲದೆ ಅಭಿವೃದ್ಧಿ ವಂಚಿತ ಮಿರ್ಲೆ ಗ್ರಾಪಂ

ಕುಡಿಯುವ ನೀರು, ಸ್ವಚ್ಛತೆ, ಬೀದಿದೀಪ ಸೇರಿದಂತೆ ಮೂಲ ಸೌಕರ್ಯಗಳಿಲ್ಲದೆ ಜನರ ಭವಣೆ

ಚುಂಚನಕಟ್ಟೆ, ಸೆ.30– ಸುಮಾರು 10 ಸಾವಿರ ಜನಸಂಖ್ಯೆ ಹೊಂದಿರುವ ಗ್ರಾಪಂಗೆ ಖಾಯಂ ಪಿಡಿಓ ಇಲ್ಲದೇ ಗ್ರಾಮಗಳ ಅಭಿವೃದ್ಧಿಗೆ ಹಿನ್ನಡೆಯಾಗಿದ್ದು, ಸಾರ್ವಜನಿಕರಿಗೆ ಸಮರ್ಪಕ ಮೂಲ ಸೌಲಭ್ಯ ಲಭ್ಯವಾಗದಂತಹ ಸ್ಥಿತಿ ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಪಂನಲ್ಲಿ ನಿರ್ಮಾಣವಾಗಿದೆ.



ಕಳೆದೆರಡು ತಿಂಗಳ ಹಿಂದೆ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದ ಪಿಡಿಓ ಸಂತೋಷ್, ಹುಣಸೂರು ತಾಲೂಕಿಗೆ ವರ್ಗವಾದ ನಂತರ ಇಲ್ಲಿಗೆ ಖಾಯಂ ಪಿಡಿಓ ನೇಮಿಸಲು ಸಂಬಂಧಿಸಿದ ಅಧಿಕಾರಿಗಳು ಮುಂದಾಗದ ಕಾರಣ ಈ ಸಮಸ್ಯೆ ಉಂಟಾಗಿದೆ.

ಹೋಬಳಿ ಕೇಂದ್ರ ಹೊಂದಿ ದೊಡ್ಡ ಗ್ರಾಮವಾಗಿರುವ ಕಾರಣ ಇಲ್ಲಿ ಕುಡಿಯುವ ನೀರಿನ ಸಮಸ್ಯೆ, ಚರಂಡಿ ಸ್ವಚ್ಛತೆ, ಬೀದಿದೀಪದ ನಿರ್ವಹಣೆ ಸೇರಿದಂತೆ ಇನ್ನಿತರ ಹತ್ತು ಹಲವು ಮೂಲ ಸೌಲಭ್ಯಗಳನ್ನು ಕಲ್ಪಿಸಲು ಆಗದಂತಹ ಸ್ಥಿತಿ ನಿರ್ಮಾಣವಾಗಿದ್ದು ಇದರಿಂದ ಜನಸಾಮಾನ್ಯರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಇನ್ನು, ಕೇಂದ್ರ ಸರ್ಕಾರ ಜನಸಾಮಾನ್ಯರಿಗೆ ಉದ್ಯೋಗ ಒದಗಿಸುವ ಮತ್ತು ಲಕ್ಷಾಂತರ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕೆಲಸಗಳನ್ನು ಮಾಡುವ ಉದ್ಯೋಗ ಖಾತ್ರಿ ಯೋಜನೆಗಳ ಕೆಲಸ ಕಾರ್ಯಗಳು ಖಾಯಂ ಪಿಡಿಓ ಇಲ್ಲದೇ ಸಮರ್ಪಕವಾಗಿ ಅನುಷ್ಠಾನವಾಗದಂತೆ ಆಗಿದೆ. ಇಲ್ಲಿಂದ ಪಿಡಿಓ ವರ್ಗಾವಣೆ ಆಗಿ ಸುಮಾರು 52 ದಿನಗಳು ಕಳೆಯುತ್ತಿದ್ದು, ಇವರ ಜಾಗಕ್ಕೆ ವರ್ಗಾವಣೆಗೊಂಡಿರುವ ಮತ್ತೊಬ್ಬ ಪಿಡಿಓ ಅವರು ಇಷ್ಟು ದಿನವಾದರೂ ಇಲ್ಲಿಗೆ ವರದಿ ಮಾಡಿಕೊಂಡಿಲ್ಲ ಅವರು ರಜಾದಲ್ಲಿ ಇದ್ದಾರೆಯೇ...? ಇಲ್ಲವೋ ಎಂಬುದೇ ತಿಳಿಯದಾಗಿದೆ.

ಇದರಿಂದ ಕೆಗ್ಗರೆ ಗ್ರಾಪಂ ಕಾರ್ಯದರ್ಶಿಯನ್ನು ಪ್ರಭಾರ ಪಿಡಿಓ ಆಗಿ ನೇಮಿಸಲಾಗಿದ್ದು, ಈ 2 ಗ್ರಾಪಂಗಳು ದೊಡ್ಡ ಗ್ರಾಪಂಗಳಾಗಿರುವುದರಿಂದ ಈ ಪ್ರಭಾರ ಪಿಡಿಓ ಕಾರ್ಯಭಾರದ ಒತ್ತಡವನ್ನು ಎದುರಿಸುವಂತೆ ಮಾಡಿದೆ.

ಈಗಲಾದರು ತಾಪಂ ಇಓ ಮತ್ತು ಜಿಪಂ ಸಿಇಓ ಅವರು ಇತ್ತಗಮನ ಹರಿಸಿ ಮಿರ್ಲೆ ಗ್ರಾಮಕ್ಕೆ ಖಾಯಂ ಪಿಡಿಓ ನೇಮಿಸಿ ಕುಂಠಿತವಾಗಿರುವ ಅಭಿವೃದ್ಧಿ ಕೆಲಸ ಕಾರ್ಯಗಳು ಯಶಸ್ವಿಯಾಗಿ ನಡೆಯುವಂತೆ ಮಾಡುವರೇ..? ಎಂಬುದನ್ನು ಕಾದು ನೋಡಬೇಕಿದೆ.



> ಮಿರ್ಲೆ ಗ್ರಾಪಂ ಸಾಲಿಗ್ರಾಮ ತಾಲೂಕಿನಲ್ಲೇ ದೊಡ್ಡ ಗ್ರಾಪಂ ಆಗಿದ್ದು, ಖಾಯಂ ಪಿಡಿಓ ಇಲ್ಲದೆ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆ ಆಗುತ್ತಿದೆ. ಪಿಡಿಓ ನೇಮಿಸುವಂತೆ ಮಾಡುತ್ತಿರುವ ಮನವಿಗೆ ತಾಪಂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ತಕ್ಷಣ ಜಿಪಂ ಸಿಇಓ ಅವರು ಗಮನ ಹರಿಸದಿದ್ದರೇ ಸಾರ್ವಜನಿಕರ ಜೊತೆಗೂಡಿ ಗ್ರಾಪಂ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ಮಾಡಬೇಕಾಗುತ್ತದೆ.
>
> –ಎಂ.ಸುದರ್ಶನ್, ಮಿರ್ಲೆ ಗ್ರಾಪಂ ಮಾಜಿ ಅಧ್ಯಕ್ಷ.

ಹುರ ಗ್ರಾಪಂ ವ್ಯಾಪ್ತಿಯ ಕೆರೆಗಳ ಹರಾಜು



ಮಲ್ಕುಂಡಿ, ಸೆ.30– ನಂಜನಗೂಡು ತಾಲೂಕಿನ ಹುರ ಗ್ರಾಪಂ ಅಧ್ಯಕ್ಷ ಚಂದ್ರು ಅವರ ಅಧ್ಯಕ್ಷತೆಯಲ್ಲಿ ಗ್ರಾಪಂ ವ್ಯಾಪ್ತಿಯ ಕೆರೆಗಳ ಹರಾಜು ನಡೆಸಲಾಯಿತು.

ಸತತ ಮಳೆಯಿಂದ ಕೆರೆಗಳು ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಮೀನು ಸಾಕಾಣಿಕೆಗೆ ಅನುಕೂಲವಾಗಿರುವುದರಿಂದ ಸರ್ಕಾರದ ಬಿಟ್ 50 ಸಾವಿರ ರೂ.ನಂತೆ ಬಿಟ್ ಕೂಗಲಾಯಿತು. ಹರಾಜಿನಲ್ಲಿ ಹುರ ಗ್ರಾಮದ ಕೆರೆ 1.25 ಲಕ್ಷ ರೂ. ಚನ್ನಪಟ್ಟಣ ಗ್ರಾಮದ ಕೆರೆಯನ್ನು 1.59 ಲಕ್ಷ ರೂ.ಗಳಿಗೆ ಬಿಟ್ ಕೂಗಲಾಯಿತು.

ಗ್ರಾಪಂ ಅಧ್ಯಕ್ಷ ಚಂದ್ರು ಮಾತನಾಡಿ, ಹಲವು ವರ್ಷಗಳಿಂದ ನೀರಿಲ್ಲದೆ ಬತ್ತಿ ಹೋಗಿದ್ದ ಕೆರೆಗಳು ಈ ಬಾರಿ ಉತ್ತಮ ಮಳೆಯಿಂದ ಭರ್ತಿಯಾಗಿವೆ. ಹೀಗಾಗಿ ಪಂಚಾಯಿತಿ ವತಿಯಿಂದ ಮೀನು ಸಾಕಾಣಿಕೆಗೆ ಅವಕಾಶ ನೀಡಲಾಗಿದೆ ಎಂದರು.

ಈ ವೇಳೆ ಉಪಾಧ್ಯಕ್ಷೆ ತಾಯಮ್ಮ, ಸದಸ್ಯರಾದ ಮಲ್ಲಿಗಮ್ಮ ದೇವನಾಯ್ಕ, ಜಯಲಕ್ಷ್ಮಿ, ಚಿಕ್ಕತಾಯಮ್ಮ, ನಿಂಗರಾಜ್, ಮಣಿಕಂಠ, ಭಾಗ್ಯ ಮಹದೇವಸ್ವಾಮಿ, ಶ್ರೀನಿವಾಸ್, ಪಿಡಿಓ ನಿರ್ಮಲ, ಕಾರ್ಯದರ್ಶಿ ಹುಚ್ಚಪ್ಪ ಸಿಬ್ಬಂದಿ ವಿಜಯ್, ಪುಷ್ಪ ಸೇರಿದಂತೆ ಗ್ರಾಮಸ್ಥರಿದ್ದರು.

ರೋಟರಿಯಿಂದ ಹೃದಯ, ಫಾರ್ಮಸಿ ದಿನಾಚರಣೆ



ಹೆಚ್.ಡಿ.ಕೋಟೆ, ಸೆ.30– ಪಟ್ಟಣದ ರೋಟರಿ ಸಂಸ್ಥೆ ವತಿಯಿಂದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಹೃದಯ ಮತ್ತು ಫಾರ್ಮಸಿ ದಿನಾಚರಣೆ ಶುಕ್ರವಾರ ನಡೆಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿ, ಮಾನಸಿಕ ಒತ್ತಡ, ಆಹಾರ ಪದ್ಧತಿ ಅನುಸರಿಸದಿರುವುದು, ವ್ಯಾಯಾಮ ಮಾಡದಿರುವುದು ಹೃದಯ ಕಾಯಿಲೆಗೆ ಕಾರಣವಾಗಬಹುದು. ಜಂಕ್‌ಫುಡ್‌ಗಳನ್ನು ಅತಿಯಾಗಿ ಸೇವಿಸಬಾರದು ಎಂದು ಸಲಹೆ ನೀಡಿದ ಅವರು, ಪ್ರಸ್ತುತ 30 ರಿಂದ 40 ವರ್ಷದವರಿಗೆ ಹೆಚ್ಚು ಹೃದಯಾಘಾತವಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಅಧ್ಯಕ್ಷ ಗಣೇಶ್ ಲಾಡ್, ಕಾರ್ಯದರ್ಶಿ ನಿರಂಜನ್, ಸದಸ್ಯರಾದ ಆರ್ಮುಗಂ, ನಾಗರಾಜ್, ಶಿವಣ್ಣ, ಡಾ.ಪ್ರಜ್ವಲ್, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಪೂರ್ಣಿಮಾ, ಚರ್ಮರೋಗ ತಜ್ಞ ಡಾ.ಸಹನ, ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ಸರಳ, ರವಿರಾಜ್, ಸುನೀಲ್, ಪರಿಮಳಾ ಸೇರಿದಂತೆ ಇನ್ನಿತರರಿದ್ದರು.


ಮೈಸೂರಲ್ಲಿ ಪಿಎಫ್‌ಐ ಕಚೇರಿ ಬಂದ್

ಮೈಸೂರು, ಸೆ.30(ಆರ್‌ಕೆ)– ದೇಶಾದ್ಯಂತ ಪಿಎಫ್‌ಐ ಸಂಘಟನೆಯನ್ನು ಕೇಂದ್ರ ಸರ್ಕಾರ ನಿಷೇಧಿಸಿರುವುದರಿಂದ ಮೈಸೂರಲ್ಲಿ ಅದರ ಶಾಖಾ ಕಚೇರಿ ಬಂದ್ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ತಿಳಿಸಿದ್ದಾರೆ.

ತಮ್ಮ ಕಚೇರಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮಂಡಿಮೊಹಲ್ಲಾದಲ್ಲಿದ್ದ ಪಿಎಫ್‌ಐ ಶಾಖಾ ಕಚೇರಿಯನ್ನು ಬಂದ್ ಮಾಡಲಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಈಗಾಗಲೇ ಮೂವರು ಪಿಎಫ್‌ಐ ಕಾರ್ಯಕರ್ತರನ್ನು ಬಂಧಿಸಲಾಗಿದೆ ಎಂದರು.

ಪ್ರಚೋದನಾಕಾರಿ ಚಟುವಟಿಕೆಯಲ್ಲಿ ಪಾಲ್ಗೊಂಡು ಸಮಾಜದಲ್ಲಿ ಅಶಾಂತಿ ಉಂಟು ಮಾಡುತ್ತಿದ್ದ ಹಿನ್ನೆಲೆಯಲ್ಲಿ ಮೂವರನ್ನು ಬಂಧಿಸಲಾಗಿದೆ. ಪಿಎಫ್‌ಐ ಸಂಘಟನೆ ನಿಷೇಧಿಸಿರುವುದರಿಂದ ಕಾರ್ಯಕರ್ತರು ಸಕ್ರಿಯವಾಗಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ ಎಚ್ಚರ ವಹಿಸಲಾಗುತ್ತಿದೆ ಎಂದರು. ದಸರಾ ಹಿನ್ನೆಲೆ ಈ ಬಾರಿ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಭದ್ರತಾ ಕಾರ್ಯ ಯಶಸ್ವಿಯಾಗಿದೆ. ಯಾವುದೇ ರೀತಿ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಎಚ್ಚರ ವಹಿಸಲಾಗಿದೆ. ಯಾವುದೇ ತರಹದ ಬೆದರಿಕೆ ಇಲ್ಲ ಎಂದರು.





ಕರ್ನಾಟಕ ಸರ್ಕಾರ, ಜಿಲ್ಲಾ ಪಂಚಾಯತ್, ಮೈಸೂರು

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ-ಕರ್ನಾಟಕ, ಸಾ.ಶಿ.ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

ಫೋನ್: 0821-2496686 Email ID: egovmysore@gmail.com

ಸಂಖ್ಯೆ : ಸಶಿಅ/ಸಿ3/ಹೊ.ಗು.ಅ.ನೇ/04&06/2022-23 ದಿನಾಂಕ: 01.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ 2ನೇ ಕರೆ

2022-23ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಲಾಕ್ ಹಂತದ ಹುಣಸೂರು, ಕೆ.ಆರ್.ನಗರ, ಹೆಚ್.ಡಿ.ಕೋಟೆ, ಬನ್ನೂರು, ನಂಜನಗೂಡು ಹಾಗೂ ಟಿ.ನ.ಪುರ ತಾಲ್ಲೋಕುಗಳ ವಸತಿ ಶಾಲೆಗಳಿಗೆ ಆಹಾರ ಪೂರೈಕೆ ಸಂಬಂಧ ನೊಂದಾಯಿತ ಅರ್ಹ ಏಜೆನ್ಸಿ/ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಡಿ, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರತಿ ವಿಷಯಕ್ಕೂ ಅಂದಾಜು ವೆಚ್ಚ ಹಾಗೂ ಇ.ಎಂ.ಡಿ ಮೊತ್ತಗಳೊಂದಿಗೆ ಪ್ರತ್ಯೇಕವಾಗಿ ಅರ್ಜಿ ಆಹ್ವಾನಿಸಲಾಗಿದೆ. ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಟೆಂಡರ್‌ದಾರರು www.eproc.karnataka.gov.in ರಲ್ಲಿನ Sarva Shikshan Abhiyanನಲ್ಲಿ ಸದರಿ ಡಾಕ್ಯುಮೆಂಟ್‌ಗಳನ್ನು ಪ್ರತ್ಯೇಕವಾಗಿ ಡೌನ್‌ಲೋಡ್ ಮಾಡಿಕೊಂಡು ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಲು ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ : 0821-2496686ನ್ನು ಸಂಪರ್ಕಿಸಲು ಸೂಚಿಸಿದೆ.

1. Date of Publish & Commencement of Tender date : 01/10/2022
2. Last date & Time for Receipt of Tender date : 12/10/2022 04.00PM

ಸಹಿ/-(ರಾಮಚಂದ್ರ ರಾಜೇ ಅರಸ್)

ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ ಸಮಗ್ರ ಶಿಕ್ಷಣ ಕರ್ನಾಟಕ, ಸಾ.ಶಿ.ಇಲಾಖೆ, ಮೈಸೂರು







